# ಪ್ರಸಾದ

ಸಂಪುಟ 26  ಸಂಚಿಕೆ 2  ಮಾರ್ಚ್-ಏಪ್ರಿಲ್ 2010

**(ಕ್ಯಾತನಹಳ್ಳಿ ಶ್ರೀ ಶಿವಪ್ರಭುಸ್ವಾಮಿಗಳವರ ಸ್ಮರಣ ಸಂಚಿಕೆ)**

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ

ಮೈಸೂರು 570 004



**ಸಂಸ್ಥಾಪಕರು**

'ಶ್ರೀಮನ್ಮಹಾರಾಜ ರಾಜಗುರುತಿಲಕ' ಪರಮಪೂಜ್ಯ ಲಿಂಗೈಕ್ಯ
**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**
**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಮಿತಿ**
ಡಾ. ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳು
ಶ್ರೀ ಬಿ.ಎನ್. ಬೆಟ್‌ಕೆರೂರ್
ಶ್ರೀ ಎಸ್.ಪಿ. ಮಂಜುನಾಥ್
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಎಸ್. ನಂಜುಂಡಯ್ಯ
ಶ್ರೀ ಕೆ.ಸಿ. ಶಿವಪ್ಪ
ಡಾ. ಬಿ.ನಂ. ಚಂದ್ರಯ್ಯ
ಡಾ. ಓ.ಎಲ್. ನಾಗಭೂಷಣಸ್ವಾಮಿ
ಡಾ. ಪದ್ಮಾಶೇಖರ್
ಡಾ. ಎನ್.ಎಸ್. ತಾರಾನಾಥ
ಶ್ರೀಮತಿ ಎಚ್.ಟಿ. ಶೈಲಜಾ
ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ
ಮುಂತಾದ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ.
ಬರಹಗಳಲ್ಲಿನ ಅಭಿಪ್ರಾಯಗಳು ಲೇಖಕರವು

# ಪರಿವಿಡಿ

ಸಂಪಾದಕೀಯ 5

ಗುರುವಾಣಿ 7

ಲಿಂಗಪೂಜಾನಿಷ್ಠರು 9
**ಹೆಚ್. ಗಂಗಾಧರನ್**

ಪುಣ್ಯಹಣ್ಣಾದ ಶ್ರೀ ಕ್ಯಾತನಹಳ್ಳಿ ಶಿವಪ್ರಭುಸ್ವಾಮಿಗಳವರ ಪುಣ್ಯಸ್ಮರಣೆ 18
**ಡಾ. ಎಸ್.ಎಂ. ವೃಷಭೇಂದ್ರಸ್ವಾಮಿ**

ಶ್ರೀಮಠದ ಪ್ರಗತಿಗೆ ತಮ್ಮ ಜೀವನ ಮುಡಿಪಾಗಿಟ್ಟಿದ್ದ
ಶ್ರೀ ಶಿವಪ್ರಭುಸ್ವಾಮಿಗಳವರು 22
**ಡಾ. ಚನ್ನಬಸಪ್ಪ**

ನಾನು ಕಂಡಂತೆ ಕ್ಯಾತನಹಳ್ಳಿ ಬುದ್ಧಿಯವರು 26
**ಎ.ಎಸ್. ಜಯರಾಂ**

ಕ್ಯಾತನಹಳ್ಳಿ ಶ್ರೀಗಳೊಡನೆಯ ಘಟನೆಗಳ ಕೆಲವು ನೆನಪುಗಳು 32
**ಕೆ.ಎಂ. ನಾಗಣ್ಣಾಚಾರ್**

ಕಲ್ಲುಸಕ್ಕರೆ ನುಡಿಯ ವಾಸ್ತವಿಕ ಸತ್ಯವಾದಿ! 38
**ಪ್ರೊ. ಮ.ಗಂ. ರೇಣುಕ ಪ್ರಸನ್ನ**

ಅಪೂರ್ವ ನಿಷ್ಕಾಮಯೋಗಿ 41
**ಜೀಮಾರಹಳ್ಳಿ ಗುರುಸಿದ್ದಪ್ಪ**

ನುಡಿ ನೇರ.... ನಡೆ ನೇರ 47
**ರಾಜೇಂದ್ರ ಶಿಶು**

ಶ್ರೀಮಠದ ಮಹಾಮಹಿಮರು ಕ್ಯಾತನಹಳ್ಳಿ ಶ್ರೀ ಶಿವಪ್ರಭುಸ್ವಾಮಿಗಳು 51
**ನಗರ್ಲೆ ಶಿವಕುಮಾರ**

ಕರ್ಮಯೋಗಿ ಕ್ಯಾತನಹಳ್ಳಿ ಪೂಜ್ಯ ಶ್ರೀ ಶಿವಪ್ರಭುಸ್ವಾಮಿಗಳವರು 54
**ಪಿ. ವೀರಭದ್ರಪ್ಪ**

ಕ್ಯಾತನಹಳ್ಳಿ ಶ್ರೀಗಳು 56
**ಬಿ.ಕೆ. ಮಲ್ಲಾರಾಧ್ಯ**

ಶ್ರೀ ಮಠದ ಆಧಾರಸ್ತಂಭವಾಗಿದ್ದ ಕ್ಯಾತನಹಳ್ಳಿ ಶ್ರೀಗಳು 57
**ಎಸ್.ಎಂ. ಜಂಬುಕೇಶ್ವರ**

ಶಾಂತಿಷಟ್ಕ 61
**ಕುಮಾರನಿಜಗುಣ**

ಕ್ರಿಯಾಶೀಲ ಗುರುವರ 63
**ಜೀಮಾರಹಳ್ಳಿ ಗುರುಸಿದ್ದಪ್ಪ**

ಶಿವಪಥದಲ್ಲಿ...... ಶಿವಪ್ರಭು 64
**ಪ್ರೊ. ಎಸ್.ಪಿ. ಉಮಾದೇವಿ**

ಹೃದಯಗಳು ಒಂದಾಗಿ 67
**ಶ್ರೀ ಸೋಮಶೇಖರಸ್ವಾಮಿ**

# ಸಂಪಾದಕೀಯ

ಕೆಲವೊಮ್ಮೆ ಒಂದು ಸಂಸ್ಥೆಯನ್ನು ಕಟ್ಟುವುದು ಆಯಾ ಸಂದರ್ಭದ ಸಾಮಾಜಿಕ ಒತ್ತಡಗಳಿಂದ ಸಾಧಿತವಾಗುವ ಕೆಲಸ. ಆದರೆ ಅದನ್ನು ಮುನ್ನಡೆಸುವುದು, ಹಾಗೆಯೇ ಕಾರ್ಯವ್ಯಾಪ್ತಿಯನ್ನು ಕಾಲಾನುಗತವಾಗಿ ವಿಸ್ತೃತಗೊಳಿಸುವುದು ಅಷ್ಟು ಸುಲಭಸಾಧ್ಯವಲ್ಲ. ಸೇವಾಭಾವನೆ, ತ್ಯಾಗ, ಕ್ರಿಯಾಶೀಲತೆಗಳು ಮುಪ್ಪುರಿಗೊಂಡು ಮುನ್ನಡೆದರೂ, ಆಡಳಿತಾತ್ಮಕವಾಗಿ ವ್ಯಕ್ತಿಗಳೊಡನೆ, ಹಾಗೆಯೇ ಸಮಷ್ಟಿಯೊಡನೆ ವ್ಯವಹರಿಸಬೇಕಾದ ಸಂದರ್ಭಗಳಲ್ಲಿ ಸ್ವಲ್ಪಮಟ್ಟಿನ ವ್ಯಾವಹಾರಿಕ ಪ್ರಜ್ಞೆಯೂ ಅನಿವಾರ್ಯವಾಗಿ ಬೇಕಾಗುತ್ತದೆ. ಏಕೆಂದರೆ ಒಂದು ಸಂಸ್ಥೆ ಬೆಳೆಯತೊಡಗಿದಂತೆ ಅದರ ಸಂಪರ್ಕ ಸಾಧಿಸಲು – ವೈಯಕ್ತಿಕ ಕಾರಣಕ್ಕೆ. ಹಾಗೆಯೇ ಆಡಳಿತಾತ್ಮಕ ಕಾರಣಕ್ಕೆ – ಬರುವ ಜನರೂ ಭಿನ್ನ ಭಿನ್ನ ಸ್ತರದವರು ಆಗಿರುತ್ತಾರೆ. ಅವರ ಉದ್ದೇಶ, ನಿರೀಕ್ಷೆಗಳೂ ಸಹ ಒಂದೇ ಆಗಿರುವುದಿಲ್ಲ. ಹಾಗಿರುವಾಗ ಅವರೊಡನೆ ವ್ಯವಹರಿಸುವುದೂ ಕೆಲವೊಮ್ಮೆ ತುಂಬಾ ಸೂಕ್ಷ್ಮವಾದ ವಿಚಾರವೇ ಸರಿ. ಮೃದು ಧೋರಣೆಯವರಿಗಂತೂ ಇಂತಹ ಸಂದರ್ಭಗಳು ದೊಡ್ಡ ಹಿಂಸೆಯನ್ನು ತಂದೊಡ್ಡುತ್ತವೆ. ಇದು ಸರಿ, ಇದು ತಪ್ಪು ಎನ್ನುವುದನ್ನು ಒಳಮನಸ್ಸು ಎಚ್ಚರಿಸುತ್ತಿದ್ದರೂ, ಮನದ ಮಾರ್ದವತೆ ಅವರ ನಡವಳಿಕೆಯನ್ನು ನಿಯಂತ್ರಿಸುತ್ತದೆ. ಒಂದು ಹಂತದ ತನಕ ಈ ತೆರನ ನಡಾವಳಿ ಸರಿ ಎನ್ನುವಂತೆ ಕಂಡುಬಂದರೂ, ಎಲ್ಲ ಸಂದರ್ಭಗಳಲ್ಲಿಯೂ ಎಲ್ಲ ವರ್ಗದವರೊಡನೆಯೂ ಇದು ಸೂಕ್ತವಾಗುವುದಿಲ್ಲ. ಹಾವೂ ಸಾಯದ, ಕೋಲೂ ಮುರಿಯದ ಸ್ಥಿತಿ ಸರ್ವಥಾ ಒಪ್ಪಿತವಲ್ಲ. ಶರಣ ಸಮೂಹದ ಕೇಂದ್ರ ವ್ಯಕ್ತಿಯಾಗಿದ್ದ ಬಸವಣ್ಣನವರು 'ಮೃದು ವಚನವೇ ಸಕಲ ಜಪಂಗಳಯ್ಯ, ಮೃದು ವಚನವೇ ಸಕಲ ತಪಂಗಳಯ್ಯ' ಎಂದು ಸದಾ ಜಪಿಸುತ್ತಿದ್ದರು. ಅವರ ಈ ಗುಣವನ್ನು ಸರಿಯಾಗಿ ಗ್ರಹಿಸದ ಕೆಲವು ಧರ್ಮಲಂಡರು ಅದರ ದುರುಪಯೋಗ ಪಡಿಸಿಕೊಳ್ಳುತ್ತಿದ್ದ ಸಂದರ್ಭಗಳೂ ಕಂಡುಬಂದಿರುವುದು ಆ ಕಾಲದ ಸಾಹಿತ್ಯಕ ದಾಖಲೆಗಳಲ್ಲಿ ಲಭ್ಯವಿವೆ. 'ಲಾಂಛನಕ್ಕೆ ಶರಣೆಂಬೆ ಅವರ ಅಂತರಂಗವ ನೀನೇ ಬಲ್ಲೆ' ಎನ್ನುವ ಬಸವಣ್ಣನ ಭಾವುಕ ಸ್ಥಿತಿ, ಭಕ್ತಿಭಂಡಾರಿಯಾಗಿದ್ದ ಅವರಿಗೆ ಸಹಜ. ಕಳ್ಳರು ಆಕಳನ್ನು ಕದ್ದೊಯ್ದಾಗ ಅವರನ್ನು ಹಿಡಿದು ದಂಡಿಸಬೇಕಾಗಿತ್ತು. ಅದು ಆಡಳಿತದ ಧರ್ಮ. ಕರುಗಳು ಹಾಲು ಇಲ್ಲದೆ, ತಾಯಿಯನ್ನು ಕಾಣದೆ ನೊಂದುಕೊಳ್ಳುತ್ತವೆ, ಅವುಗಳನ್ನು ಮೊದಲು ತಾಯ ಬಳಿ ಸೇರಿಸಿ ಎಂದು ಅವರು ಉದ್ಗರಿಸುವುದು, ಪ್ರತಿಮಾತ್ಮಕ ಅರ್ಥದಲ್ಲಿ ಸರಿ ಎನಿಸಿದರೂ, ವಾಸ್ತವತೆಯ ದೃಷ್ಟಿಯಿಂದ ಅಲ್ಲ. ಆ ಕಾರಣಕ್ಕಾಗಿಯೇ ಕಪಟದ ಶರಣರನ್ನು ಕಂಡು 'ಅಂಗಜಂಗುಳಿಗಳೆಲ್ಲಾ

ಅಶನಕ್ಕೆ ನೆರೆದರು, ಲಿಂಗದ ಹವಣನು ಇವರೆತ್ತ ಬಲ್ಲರು; ಕಾಯಜೀವಿಗಳು ಕಳವಳಧಾರಿಗಳು, ಗುಹೇಶ್ವರನ ನಿಲುವನು ಇವರೆತ್ತ ಬಲ್ಲರು' ಎಂದು ಗುಡುಗಿದ ಅಲ್ಲಮನಂತಹವರೂ ಬೇಕಾಗುತ್ತಾರೆ. ಅದು ಜೀವನದ ಅನಿವಾರ್ಯತೆಯೂ ಕೂಡ. ಇಂತಹ ಮಾತುಗಳು ಆಯಾ ಸನ್ನಿವೇಶದಲ್ಲಿ ಮನಸ್ಸಿಗೆ ಒಂದಿಷ್ಟು ಕಿರಿಕಿರಿಯೆನಿಸಿದರೂ, ಚಿತ್ತಸಮಾಧಾನದ ಸ್ಥಿತಿಯಲ್ಲಿ ಪರಿಭಾವಿಸಿದರೆ, ನಮ್ಮ ಶ್ಲಾಘನೆಗೆ ಪಾತ್ರವಾಗುತ್ತವೆ; ಸ್ವಸ್ಥ ಚಿಂತನೆಗೆ ಪ್ರೇರಕವಾಗುತ್ತವೆ.

ಈ ಕೆಲವು ಮಾತುಗಳನ್ನು ಪೀಠಿಕೆಯಾಗಿ ಬರೆಯುವುದಕೆ ಕಾರಣವಿಷ್ಟೆ. ದಿನಾಂಕ 14.2.2010ರಂದು ಕ್ಯಾತನಹಳ್ಳಿ ಸ್ವಾಮಿಗಳು ಎಂದೇ ಖ್ಯಾತರಾಗಿದ್ದ, ಶ್ರೀ ಶಿವಪ್ರಭುಸ್ವಾಮಿಗಳು ತಮ್ಮ 98 ನೆಯ ವಯಸ್ಸಿನಲ್ಲಿ ಲಿಂಗೈಕ್ಯರಾದರು. ಶ್ರೀಮಠದ ಬೆಳವಣಿಗೆಯ ಸಾಕ್ಷೀಪ್ರಜ್ಞೆಯಂತಿದ್ದ ಪೂಜ್ಯರು, ತಮ್ಮ ಕೊನೆಗಾಲದ ತನಕ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಛಾಯಾನುವರ್ತಿಗಳಾಗಿ ಬದುಕಿದವರು. ಹಿರಿಯ ಜಗದ್ಗುರುಗಳವರ ಕಾಲಮಾನದಲ್ಲಿ ಶ್ರೀಮಠದ ಕಾರ್ಯವ್ಯಾಪ್ತಿ ಬಹಳ ವಿಸ್ತೃತವಾಯಿತು. ಪರಮಪೂಜ್ಯರು ಮೂಲತಃ ಸದುವಿನಯದ, ಮೃದುಧೋರಣೆಯ, ಮೃದುವಚನದ ಸಾಕಾರಮೂರ್ತಿಗಳು. ತಮ್ಮ ಬಳಿಗೆ ಬೇಡಿ ಬಂದವರೆಲ್ಲರನ್ನೂ ಸಮನಾಗಿ ಕಾಣುತ್ತ, ಆಶ್ರಯ ಕೊಡಲು ಮುನ್ನುಗ್ಗುತ್ತಿದ್ದರು. ಇದು ಕಷ್ಟವೆಂದು ಅರ್ಥವಾಗುತ್ತಿದ್ದರೂ, ಸಾಧ್ಯವಿಲ್ಲ ಎನ್ನುವ ಮಾತು ಅವರ ಬಾಯಿಂದ ಹೊರಬರುತ್ತಲೇ ಇರಲಿಲ್ಲ. ಶ್ರೀ ಶಿವಪ್ರಭುಸ್ವಾಮಿಗಳು, 'ನ್ಯಾಯನಿಷ್ಠುರಿ, ದಾಕ್ಷಿಣ್ಯಪರ ನಾನಲ್ಲ' ಎನ್ನುವ ತಮ್ಮ ಧೋರಣೆಯಿಂದ ಇಂತಹ ಸಂದರ್ಭಗಳನ್ನು ನಿಭಾಯಿಸುತ್ತಿದ್ದರು. ಅನೇಕರಿಗೆ ವೈಯಕ್ತಿಕವಾಗಿ ಇದು ಬೇಸರವನ್ನು ಉಂಟುಮಾಡಿದರೂ, ಸಮಷ್ಟಿಯ ಹಿತದೃಷ್ಟಿಯಿಂದ ಇಂತಹ ಪ್ರತಿಕ್ರಿಯೆ ಅನಿವಾರ್ಯವಾಗಿರುತ್ತಿತ್ತು. ಇದರಿಂದ ಶ್ರೀಮಠದ ಕಾರ್ಯಗಳಿಗೆ, ಸಮಾಜದ ಹಿತಕ್ಕೆ ಅನುಕೂಲವೇ ಆಗುತ್ತಿತ್ತು. ಹಿರಿಯ ಜಗದ್ಗುರುಗಳವರನ್ನು ಕಣ್ಣುಗಳನ್ನು ರೆಪ್ಪೆಗಳು ಜೋಪಾನಿಸುವಂತೆ ಸಲಹಿ, ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಮಹಾನ್ ಕ್ರಿಯಾಶೀಲತೆಯನ್ನು ಕಂಡು ಮೈಮನಗಳಲ್ಲಿ ಪುಳಕವನ್ನು ತುಂಬಿಕೊಳ್ಳುತ್ತಿದ್ದ ಶ್ರೀ ಶಿವಪ್ರಭುಸ್ವಾಮಿಗಳು ಈಗ ಭೌತಿಕವಾಗಿ ನಮ್ಮ ನಡುವೆ ಇಲ್ಲ. ಆದರೆ ಹಿರಿಯ ಜಗದ್ಗುರುಗಳವರನ್ನು ನೆನೆಸಿಕೊಂಡಾಗಲೆಲ್ಲಾ, ಇವರ ವ್ಯಕ್ತಿತ್ವವೂ ನಮ್ಮ ಕಣ್ಣುಗಳ ಮುಂದೆ ತುಂಬಿ ಬರುತ್ತದೆ.

ವಿಶೇಷ ಸಂಚಿಕೆ ಪ್ರಕಟಿಸುವ 'ಪ್ರಸಾದ' ಬಳಗ ಈ ಮೂಲಕ ಅವರಿಗೆ ಗೌರವಪೂರ್ವಕ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ.

**ಮಲೆಯೂರು ಗುರುಸ್ವಾಮಿ**
ಸಂಪಾದಕ

# ಗುರುವಾಣಿ

ಬಸವಣ್ಣಾ ನಿನ್ನ ಕಂಡು ಕಂಡು ಎನ್ನ ತನು ಬಯಲಾಯಿತ್ತು
ಬಸವಣ್ಣಾ ನಿನ್ನ ಮುಟ್ಟಿ ಮುಟ್ಟಿ ಎನ್ನ ಕ್ರೀ ಬಯಲಾಯಿತ್ತು
ಬಸವಣ್ಣಾ ನಿನ್ನ ನೆನೆದು ನೆನೆದು ಎನ್ನ ಮನ ಬಯಲಾಯಿತ್ತು.
ಬಸವಣ್ಣಾ ನಿನ್ನ ಮಹಾನುಭಾವವ ಕೇಳಿ ಕೇಳಿ ಎನ್ನ ಭವಂ ನಾಸ್ತಿಯಾಯಿತ್ತು
ನಮ್ಮ ಗುಹೇಶ್ವರ ಲಿಂಗದಲ್ಲಿ ನೀವು ಅಜಾತನೆಂಬುದ ನೆಲೆಮಾಡಿ
ಭವಪಾಶಂಗಳ ಹರಿದಿಪ್ಪೆಯಾಗಿ,
ನಿನ್ನ ಸಂಗದಿಂದಲಾನು ಬದುಕಿದೆನು!

ಹನ್ನೆರಡನೇ ಶತಮಾನದಲ್ಲಿ ಭಕ್ತಿ, ಜ್ಞಾನ ಹಾಗೂ ಕ್ರಿಯೆಗಳ ಸಂಗಮಶಕ್ತಿಯ ಸಂಕೇತವಾಗಿದ್ದ ಬಸವಣ್ಣನವರ ಬದುಕಿನ ಒಳಹೊರಗನ್ನು ಅನುಸಂಧಾನ ಮಾಡುವುದೇ ಒಂದು ಮಹತ್ತರವಾದ ಅನುಭವ. ಸಾಮಾನ್ಯರಿಂದ ಹಿಡಿದು ಅಸಾಮಾನ್ಯರೆನಿಸಿಕೊಂಡವರ ತನಕ ಭಿನ್ನ ಭಿನ್ನ ಸ್ತರದಲ್ಲಿ ಅವರ ವ್ಯಕ್ತಿತ್ವ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಸಕಲ ಜೀವಾತ್ಮರಿಗೆ ಲೇಸ ಬಯಸುವ ಅವರ ಭಾವದ ಮೂಲ ನೆಲೆಗಟ್ಟು, ಅವರಲ್ಲಿನ ಮಾತೃ ಹೃದಯವನ್ನು ಅನಾವರಣಗೊಳಿಸಿದರೆ, ಜಗದಗಲ ಮುಗಿಲಗಲವಾಗಿ ಹಬ್ಬಿದ ಕೂಡಲಸಂಗನ ಅನೂಹ್ಯ ಶಕ್ತಿಯನ್ನು ಆವಾಹಿಸಿಕೊಳ್ಳಲು ಅವರು ಪರಿತಪಿಸುವ ಪರಿ ಅವರಲ್ಲಿನ ದೊಡ್ಡ ದಾರ್ಶನಿಕನನ್ನು ದರ್ಶನ ಮಾಡಿಸುತ್ತದೆ. ಅವರಲ್ಲಿನ ದರ್ಶನದೀಪ್ತವಾದ ಚೈತನ್ಯ ಅಷ್ಟೇ ಜಾಜ್ವಲ್ಯಮಾನವಾಗಿ ಬೆಳಗುತ್ತಿದ್ದುದರಿಂದಲೇ ಅಲ್ಲಮರಂತಹ ಬಯಲಶರೀರಿಯ ಬುದ್ಧಿಭಾವಗಳು ಅವರ ಮುಂದೆ ವಿನೀತವಾಗಿ ಮಣಿಯುವುದು ಅನಿವಾರ್ಯವಾಗುತ್ತದೆ. ಮೇಲಿನ ವಚನ ಅದಕ್ಕೆ ಸ್ಪಷ್ಟ ಪುರಾವೆಯಾಗಿದೆ. ಹಾಗೆ ನೋಡಿದರೆ ಅಲ್ಲಮಪ್ರಭುಗಳದ್ದು ಎಲ್ಲ ಕಾಲಕ್ಕೂ ಸಲ್ಲುವ ತುಂಬ ಎತ್ತರದ ವ್ಯಕ್ತಿತ್ವ. ಅವರನ್ನು ಯುಗದ ವಿಮರ್ಶನ ಪ್ರಜ್ಞೆ ಎಂದೇ ಹೇಳಲಾಗುತ್ತದೆ. ಅಂತಹವರೂ ಸಹ ಬಸವಣ್ಣನವರನ್ನು ಕುರಿತು 'ನಿನ್ನ ಸಂಗದಿಂದಲಾನು ಬದುಕಿದೆನು' ಎಂದು ಹೇಳಿರುವುದು ಅವರ ಎತ್ತರವನ್ನು ನಮ್ಮ ಅನುಭವಕ್ಕೆ ತರುವಂತೆಯೇ ಬಸವಣ್ಣನವರ ಭವ್ಯತೆಯನ್ನು ಅರ್ಥಮಾಡಿಕೊಳ್ಳಲೂ ಕೀಲಿಕೈಯಾಗುತ್ತದೆ.

ಉಗ್ಘಡಿಸುವ ಗುಬ್ಬಿ ದೇವಯ್ಯನೆಂಬ ಶರಣ ಅನುಭವ ಮಂಟಪದ ಬಾಗಿಲಲ್ಲಿ ನಿಂತು ಅದರೊಳಕ್ಕೆ ಬರುವವರಿಗೆ ಇರಬೇಕಾದ ಅರ್ಹತೆಗಳೇನು ಎಂದು ಹೇಳುತ್ತಾನೆ.

ಜ್ಞಾನ ಬಾ, ಮಾಯೆ ಹೋಗೆಂದು ಕಳುಹುತ್ತಿದ್ದೇನೆ.
ಅರಿವು ಬಾ, ಅಜ್ಞಾನ ಹೋಗೆಂದು ಕಳುಹುತ್ತಿದ್ದೇನೆ.
ನಿಃಕಲ ಬಾ, ಸಕಲ ಹೋಗೆಂದು ಕಳುಹುತ್ತಿದ್ದೇನೆ.

ನೀಃಪ್ರಪಂಚ ಬಾ, ಪ್ರಪಂಚ ಹೋಗೆಂದು ಕಳುಹುತ್ತಿದ್ದೇನೆ.
ಕೂಡಲಸಂಗಮದೇವರಲ್ಲಿ ಬಸವಣ್ಣನ
ಬಲ್ಲವರನೊಳಗೆ ಕೂಡಿ, ಅರಿಯದವರ ಹೊರಗೆ ತಡೆವುತ್ತಿದ್ದೇನೆ!

ಯಾವ ಯಾವ ನೇತ್ಯಾತ್ಮಕ ಅಂಶಗಳನ್ನು ಹೊರಗೆ ಬಿಟ್ಟು ಬಂದಾಗ ಮಾತ್ರ ಅನುಭವ ಮಂಟಪದ ಸದಸ್ಯನಾಗಿ ತನುಮನಗಳನ್ನು ಶುದ್ಧಗೊಳಿಸಿಕೊಳ್ಳುವುದಕ್ಕೆ ಸಾಧ್ಯ ಎನ್ನುವ ಗುಬ್ಬಿ ದೇವಯ್ಯನವರ ಈ ಮಾತುಗಳು, ಕೇವಲ ಅನುಭವ ಮಂಟಪಕ್ಕಷ್ಟೇ ಸೀಮಿತವಾಗುವುದಿಲ್ಲ, ಇಡೀ ಬದುಕನ್ನೇ ವ್ಯಾಪಿಸುವಂಥವು. ಬಸವ ಜಯಂತಿಯನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ (ಮೇ 16) 'ಬಸವಣ್ಣನ ಬಲ್ಲವರ' ಅನಿವಾರ್ಯತೆ ತುಂಬಾ ಇದೆ. ಅವರನ್ನು ಅರ್ಥಮಾಡಿಕೊಳ್ಳಬೇಕಾದರೆ ಒಂದು ಕಡೆ ಅಲ್ಲಮನ ವೈಚಾರಿಕತೆ, ಮತ್ತೊಂದು ಕಡೆ ಸಾಮಾನ್ಯ ಶರಣನೊಬ್ಬನ ಅರ್ಪಣಾಭಾವ ಎರಡೂ ಮೇಳೈಸಿದಾಗ ಮಾತ್ರ ಸಾಧ್ಯ. ಆತ್ಮಸಾಕ್ಷಾತ್ಕಾರ ಹಾಗೂ ಸಾಮಾಜಿಕ ಸುಖಶಾಂತಿಗಳು ಏಕಕಾಲದಲ್ಲಿ ಸಾಧಿತವಾಗಬೇಕಾದರೆ ಈ ತೆರನಾದ ಚಿಂತನೆಗಳ ಬೆಸುಗೆ ಅನಿವಾರ್ಯ. ಬಸವ ಜಯಂತಿಯ ಆಚರಣೆ ಎಲ್ಲರ ಅರಿವು-ಆಚಾರಗಳನ್ನು ಮತ್ತಷ್ಟು ಅರ್ಥಪೂರ್ಣವಾಗಿ ಬೆಸೆಯಬೇಕಾಗಿದೆ.

* * *

ತಮ್ಮ ನಿಡುಬಾಳಿನುದ್ದಕ್ಕೂ ಅಕ್ಷರಶಃ ನಮ್ಮ ಹಿರಿಯ ಜಗದ್ಗುರುಗಳವರ ನೆರಳಿನಂತೆಯೇ ಬದುಕಿದ್ದು, ಅವರ ಎಲ್ಲ ಕಾರ್ಯಚಟುವಟಿಕೆಗಳ ಸಾಧಕ ಬಾಧಕಗಳ ವಿಮರ್ಶಕರಾಗಿ ಮುನ್ನಡಿ ಇಡಲು ಪ್ರೇರೇಪಿಸುತ್ತಿದ್ದ ಕ್ಯಾತನಹಳ್ಳಿ ಶ್ರೀ ಶಿವಪ್ರಭುಸ್ವಾಮಿಗಳವರು ಶಿವೈಕ್ಯರಾದುದು ನಮಗೆ ಹಾಗೂ ಶ್ರೀಮಠದ ಇಡೀ ಭಕ್ತ ಸಮುದಾಯಕ್ಕೆ ತುಂಬಲಾರದ ನಷ್ಟ. ವಯೋಮಾನದ ದೃಷ್ಟಿಯಿಂದ ಹೆಚ್ಚಿನ ಕ್ರಿಯಾಶೀಲತೆ ಸಾಧ್ಯವಾಗದಿದ್ದರೂ, ತಾತ್ವಿಕವಾಗಿ ಅವರು ನೀಡುತ್ತಿದ್ದ ಮಾರ್ಗದರ್ಶನ ಎಷ್ಟು ಅಮೂಲ್ಯವಾಗಿರುತ್ತಿತ್ತು; ಹಾಗೆಯೇ ಸಂಸ್ಥೆಯ ಕಾರ್ಯವಿಸ್ತಾರದ ಬಗ್ಗೆ ಅವರಿಗಿದ್ದ ಕಳಕಳಿ ಎಂಥದು ಎನ್ನುವುದನ್ನು ನೆನೆಸಿಕೊಂಡಾಗ ನಮ್ಮ ಮನಸ್ಸು ತುಂಬಿ ಬರುತ್ತದೆ. ಅವರ ಅಗಾಧ ನೆನಪಿನ ಶಕ್ತಿ, ದಾಖಲೆಗಳನ್ನು ಲೆಕ್ಕಪತ್ರಗಳನ್ನು ವ್ಯವಸ್ಥಿತವಾಗಿ ಇಡುತ್ತಿದ್ದ ಪರಿ ನಿಜಕ್ಕೂ ಅಚ್ಚರಿ ಮೂಡಿಸುವಂಥದಾಗಿತ್ತು.

ಅವರ ಚಿಂತನಾಕ್ರಮ ಶ್ರೀಮಠದ ಬೆಳವಣಿಗೆಗೆ ಸದಾ ಮಾರ್ಗದರ್ಶಕವಾಗಿರಲೆಂದು ಹಾರೈಸುತ್ತೇವೆ.

**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಲಿಂಗಪೂಜಾನಿಷ್ಠರು

**ಹೆಚ್. ಗಂಗಾಧರನ್**

ನಂಜನಗೂಡು ತಾಲ್ಲೂಕಿನ ಸುತ್ತೂರು ಕಪಿಲಾ ನದಿ ತೀರದಲ್ಲಿರುವ ಒಂದು ಪ್ರಸಿದ್ಧ ಕ್ಷೇತ್ರ. ಇದಕ್ಕೆ ಸಾವಿರ ವರ್ಷಗಳಿಗಿಂತಲೂ ಮಿಗಿಲಾದ ಇತಿಹಾಸವಿದೆ. ಜಗದ್ಗುರು ಶ್ರೀ ಶಿವರಾತ್ರೀಶ್ವರರೆಂಬ ಶಿವಯೋಗಿಗಳು ಹತ್ತನೇ ಶತಮಾನದ ಆದಿಭಾಗದಲ್ಲಿ ಒಂದು ವೀರಸಿಂಹಾಸನ ಮಠವನ್ನು ಸ್ಥಾಪಿಸಿದರು. ಈ ಮಠದ ಸ್ಥಾಪನೆಗೆ ತಮಿಳುನಾಡಿನ ಚೋಳ ಸಾಮ್ರಾಟರು ಪ್ರೇರಕರು ಮತ್ತು ಪೋಷಕರು. ಈ ಕ್ಷೇತ್ರವನ್ನು ಗಂಗರು, ಪಲ್ಲವರು, ಹೊಯ್ಸಳರು ವಿಜಯನಗರದ ಅರಸರು, ಮೈಸೂರು ಅರಸುಮನೆತನದವರು ಕಾಲಕಾಲಕ್ಕೆ ದಾನ ದತ್ತಿಗಳನ್ನಿತ್ತು ಪೋಷಿಸುತ್ತಾ ಬಂದಿರುತ್ತಾರೆ. ಸುಮಾರು ಹದಿನೈದು ಹದಿನಾರನೇ ಶತಮಾನದವರೆಗೆ, ಈ ಕ್ಷೇತ್ರ ದಕ್ಷಿಣ ಭಾರತದಲ್ಲಿ ಪ್ರಸಿದ್ಧಿಯನ್ನು ಪಡೆದಿತ್ತು. ಇಂದು ಮಲೈ ಮಹದೇಶ್ವರರೆಂಬ ಪ್ರಸಿದ್ಧವಾಗಿರುವ ಶಿವಯೋಗಿಗಳು ತಮ್ಮ ಬಾಲ್ಯದಲ್ಲಿ ಆಧ್ಯಾತ್ಮಿಕ ಬೆಳಕನ್ನು ಈ ಕ್ಷೇತ್ರದಲ್ಲಿ ಕಂಡರು. ಕರ್ನಾಟಕದಲ್ಲಿ ಪ್ರಸಿದ್ಧವಾಗಿರುವ ಎಡೆಯೂರು ಸಿದ್ಧಲಿಂಗೇಶ್ವರರು ಇಲ್ಲಿ ಅನುಷ್ಠಾನ ಮಾಡಿದ್ದಾರೆ. ಈ ಪೀಠದ ಅಧ್ಯಕ್ಷರಾಗಿದ್ದ ಘನಲಿಂಗಿ ಶಿವಯೋಗಿಗಳು ಸಿದ್ಧಲಿಂಗೇಶ್ವರರ ಆತ್ಮೀಯರ ಪರಂಪರೆಯಲ್ಲಿ ಒಬ್ಬರು. ಆದರೂ ಹದಿನಾರನೇ ಶತಮಾನದ ನಂತರ ಒಂದೆರಡು ಶತಮಾನಗಳವರೆಗೆ ಇಲ್ಲಿನ ಮಠದ ಕೀರ್ತಿ ಸಾಕಷ್ಟು ಪಸರಿಸಿರಲಿಲ್ಲ. ಆದುದರಿಂದ ಕರ್ನಾಟಕದ ಬಹುಭಾಗಕ್ಕೆ ಈ ಕ್ಷೇತ್ರದ ಪರಿಚಯವಿರಲ್ಲ, ಇಂದು ಈ ಕ್ಷೇತ್ರ ತನ್ನ ವೈವಿಧ್ಯಮಯವಾದ ಸೇವಾಕೈಂಕರ್ಯದಿಂದ ಲೋಕಪ್ರಸಿದ್ಧವಾಗಿದೆ. ಇದಕ್ಕೆ ಕಾರಣರು ಈ ಪೀಠದ 22ನೇ ಜಗದ್ಗುರುಗಳಾದ ಮಂತ್ರಮಹರ್ಷಿ ಶಿವಯೋಗಿ ಶಿವರಾತ್ರಿ ಸ್ವಾಮಿಗಳು. ಅವರ ಕರಕಮಲ ಸಂಜಾತರಾದ 23ನೇ ಜಗದ್ಗುರುಗಳಾದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಮತ್ತು ಅವರ ಉತ್ತರಾಧಿಕಾರಿಗಳಾದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು.

ಸುತ್ತೂರು ಶ್ರೀಮಠಕ್ಕೆ ಬಹುದೊಡ್ಡ ಪರಂಪರೆಯಿದೆ. ಸುಮಾರು ಮೂರು ನಾಲ್ಕು ಶತಮಾನಗಳಿಂದ ಈ ಮಠದ ಪೀಠಾಧಿಕಾರಿಗಳ ಪೂರ್ವಬಂಧುಗಳ ಕುಟುಂಬಕ್ಕೆ ಸೇರಿದ ಮಠಗಳು ನೂರಾರು ಈ ಭಾಗದಲ್ಲಿವೆ. ಅಂದಿನಿಂದ ಈ ಬಂಧುವರ್ಗದಲ್ಲೇ ಆಯಾ ಮಠದ ಪೀಠಾದೀಶ್ವರರನ್ನು ನೇಮಿಸುವ ಪರಂಪರೆ ಇಂದಿನವರೆಗೂ ಸಾಗುತ್ತಾ ಬಂದಿದೆ. ಈ ಪೀಠಗಳ ಬಂಧು ವರ್ಗದವರು ಮಠಗಳ ಬಂಧುವರ್ಗದಲ್ಲೇ ಸಂಬಂಧಗಳನ್ನು ಬೆಳೆಸಿಕೊಂಡು

ಬರುತ್ತಿದ್ದರು. ಹಾಗೆಯೇ ಪರಸ್ಪರ ಸಂಪರ್ಕ ಬಾಂಧವ್ಯದಿಂದ ಇದ್ದ ಸಮೂಹದಿಂದಲೇ ಪೀಠಾಧಿಕಾರಿಗಳನ್ನು ನೇಮಿಸುವುದು ಸಂಪ್ರದಾಯವಾಗಿ ಬಂದಿದೆ. ಬಹುಮುಖ್ಯವಾಗಿ ಸುತ್ತೂರು, ವಾಟಾಳು, ಮೂಗೂರು, ಕುದೇರು, ಮೂಕಳ್ಳಿ, ಜ್ಯೋತಿಗೌಡನಪುರ, ಹರವೆ, ತೆರಕಣಾಂಬಿ, ಹಂಗಳ, ಚುಂಚನಹಳ್ಳಿ, ಕಸುವಿನಹಳ್ಳಿ, ಮುಡುಕುತೊರೆ, ಮುಂತಾದ ಮಠದ ಪರಿಸರದಲ್ಲಿ ಈ ಸಾಂಪ್ರದಾಯಕ್ಕೆ ಸೇರಿದ ಬಂಧುವರ್ಗದವರಿದ್ದರು. ಮೇಲೆ ಹೇಳಿದಂತಹ ಹತ್ತಾರು ಮಠಗಳ ವ್ಯವಹಾರಗಳಿಗೆ ಸುತ್ತೂರು ಮಠವೇ ಕೇಂದ್ರವಾಗಿತ್ತು. ಹೀಗೆ ಮಠದ ಪರಂಪರೆಗೆ ಸೇರಿದ ಕುಟುಂಬಗಳಲ್ಲಿ ಯೋಗ್ಯರಾದವರನ್ನು ಪೀಠದ ಗುರುಗಳು ಉತ್ತರಾಧಿಕಾರಿಯಾಗಿ ನೇಮಿಸುತ್ತಾ ಬಂದಿರುತ್ತಾರೆ. ಇಲ್ಲಿನ ಸಂಪ್ರದಾಯದಂತೆ ಮೂಲ ಸನ್ನಿಧಿಯ ಶಿವಯೋಗ ಸಮಾದಿಸ್ತರಾದ ಆದಿ ಜಗದ್ಗುರು ಶ್ರೀ ಭಗವತ್ಪಾದರ ಪ್ರಸಾದದ ಅನುಗ್ರಹ ಪಡೆದವರು ಮಾತ್ರ ಪೀಠಾಧೀಶರಾಗಿ ನೇಮಕ ಮಾಡುವ ಪದ್ಧತಿಯಿದೆ. ಈ ಪೀಠದ ಅಧಿಪತಿಗಳ ಕಾರ್ಯಕ್ರಮದ ಬಂಧುವರ್ಗದಲ್ಲಿ ಬಸವಲಿಂಗ ದೇವರ ಪುತ್ರರಾದ ಗುರುಸಿದ್ದಪ್ಪ ಮತ್ತು ಅವರ ಪತ್ನಿ ಸಿದ್ಧಲಿಂಗಮ್ಮ ಶ್ರೀಮಠದ ಕೈಂಕರ್ಯದಲ್ಲಿ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದಾರೆ. ಲಿಂಗಪೂಜಾನಿಷ್ಠರು, ಗುರುಭಕ್ತರು, ಇವರಿಗೆ ಸಿದ್ಧಲಿಂಗ ದೇವರು, ಬಸವಲಿಂಗ ದೇವರು, ಶಿವರಾತ್ರಿಯಪ್ಪನವರು, ಸದಾಶಿವ ದೇವರು ಎಂಬ ನಾಲ್ಕು ಗಂಡುಮಕ್ಕಳು ಒಂದು ಹೆಣ್ಣು ಮಗು. ಈ ನಾಲ್ವರಲ್ಲಿ ಮೂರನೆಯವರಾದ ಶಿವರಾತ್ರಿಯಪ್ಪನವರು ಇಲ್ಲಿ ಸ್ಮರಣೀಯರು. ಅವರು ಜನಿಸಿದ್ದು 1912ನೆಯ ಇಸವಿ ಅವರಾದ ನಂತರ ಮಲ್ಲಿಕಾರ್ಜುನ ದೇವರ ಪುತ್ರರಾಗಿ 1916 ರಲ್ಲಿ ಜನಿಸಿದ್ದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಈ ಪೀಠದ 23ನೆಯ ಜಗದ್ಗುರುಗಳು. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಈ ಪೀಠದ 24ನೆಯ ಜಗದ್ಗುರುಗಳು.

ಸಾಮಾನ್ಯವಾಗಿ ಹದಿನೇಳು ಹದಿನೆಂಟನೆಯ ಶತಮಾನದಲ್ಲಿ ಈ ಇಡೀ ಜಿಲ್ಲೆಯಲ್ಲಿ ಸಾರ್ವಜನಿಕರಿಗೆ ಶಿಕ್ಷಣ ಪಡೆದು ಸುಸಂಸ್ಕೃತರಾಗುವ ಸೌಲಭ್ಯಗಳಿರಲಿಲ್ಲ. ಕೆಲವರು ಪೂರ್ವಜನ್ಮ ಸಂಸ್ಕಾರದಿಂದ ತಮ್ಮ ಭಕ್ತಿ ನಿಷ್ಠೆಗಳನ್ನು ಬೆಳೆಸಿಕೊಂಡು ಜನರ ಕಷ್ಟ ನಿವಾರಣೆಯಲ್ಲಿ ತಮ್ಮ ಆಧ್ಯಾತ್ಮಿಕ ಶಕ್ತಿಯನ್ನು ಬಳಸಿ ಪೂಜ್ಯರಾದರು, ನಿತ್ಯಸ್ಮರಣೀಯ ರಾದರು. ಇತ್ತೀಚಿನವರೆಗೆ ಆಧ್ಯಾತ್ಮಿಕ ಶಕ್ತಿಸಂಪನ್ನಗಳನ್ನು ಮಾತ್ರ ಜನ ಭಕ್ತಿಭಾವದಿಂದ ಭಗವಂತನ ಅವತಾರವೆಂದೇ ಪೂಜಿಸುತ್ತಾ ಬಂದಿರುತ್ತಾರೆ. ಅಂತಹ ಮಹಾನುಭಾವರ ಐಕ್ಯಸ್ಥಳಗಳೆಲ್ಲಾ ಪುಣ್ಯಕ್ಷೇತ್ರಗಳಾಗಿ ಬಹುಜನರ ಕಷ್ಟ ನಿವಾರಣೆಗೆ ಅವರ ಕಾಲಾನಂತರವೂ ಆಶ್ರಯಸ್ಥಾನಗಳಾಗಿವೆ. ಇತ್ತೀಚಿನ ದಿನಗಳಲ್ಲಿ ತಪೋನಿಷ್ಠರ ಕೊರತೆಯಿಂದಾಗಿ ವ್ಯವಹಾರಿಕ ಕುಶಲತೆಯಿಂದ ನಂಬಿದವರ ಯೋಗಕ್ಷೇಮದ ಸಾಧನೆಗೆ ಕಾರಣರಾದವರನ್ನು ಜನ ವಿಶ್ವಾಸದಿಂದ ಗೌರವಿಸುತ್ತಿದ್ದಾರೆ. ಹೀಗೆ ಕಾಲಾನುಗುಣವಾಗಿ ವಿವಿಧ ರೀತಿಯಲ್ಲಿ ಜನರ ಅಭ್ಯುದಯಕ್ಕೆ ಕಾರಣರಾದ ಮಹಾನುಭಾವರು ಸ್ಮರಣೀಯರಾಗಿದ್ದಾರೆ. ಅಂತಹ



ಮಹಾನುಭಾವರು ನಿಂದ ನೆಲ ಪಾವನಕ್ಷೇತ್ರವಾಗಿದೆ. ಅವರು ಐಕ್ಯಗೊಂಡ ಸ್ಥಳ ದೇವಾಲಯಗಳಾಗಿವೆ; ಅಲ್ಲಿ ಮಠಗಳಾಗಿವೆ. ಮುಂದುವರಿದಂತೆಲ್ಲಾ ಜನಸಾಮಾನ್ಯರು ದೂರದ ಕ್ಷೇತ್ರಗಳಿಗೆ ಹೋಗಿ ಪೂಜ್ಯರ ಅನುಗ್ರಹ ಪಡೆಯಲು ತೊಂದರೆಯಿದ್ದ ಕಾರಣ ತಮ್ಮ ಕ್ಷೇತ್ರಗಳಲ್ಲೆ ಮಠಗಳನ್ನು ಸ್ಥಾಪಿಸಿಕೊಂಡಿದ್ದರು.

ಧಾರ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಐತಿಹಾಸಿಕ ಹಿನ್ನೆಲೆಯುಳ್ಳ ವೀರಶೈವ ಧರ್ಮವು ನೂತನ ಸಂಸ್ಕಾರಗಳೊಡನೆ ಪರಿಶ್ರುತಗೊಂಡು ಪ್ರಸಿದ್ಧವಾದುದು ಹನ್ನೆರಡನೇ ಶತಮಾನದಲ್ಲಿ ಕಲ್ಯಾಣದ ಬಸವಾದಿ ಶರಣರೇ ಇದರ ಕಾರಣಿಕರು ಇಂತಹ ಸಂಸ್ಕೃತಿಯನ್ನು ವಿಶ್ವವ್ಯಾಪಿಯಾಗಿ ಮಾಡಲು ಅನೇಕ ಮಹಾನುಭಾವರು ಶ್ರಮಿಸಿದ್ದಾರೆ. ಇಂತಹ ಸಾಧನೆಗಾಗಿ ಅಗತ್ಯವಾದ ಕಡೆಗಳಲ್ಲಿ ಕಾಲಕಾಲಕ್ಕೆ ವಿವಿಧ ವರ್ಗದ ಮಠಗಳು ಸ್ಥಾಪನೆಯಾಗುತ್ತಾ ಬಂದಿದೆ. ವೀರಶೈವ ಧರ್ಮಕ್ಕೆ ಬಂದು ವಿಶಿಷ್ಟ ಸಂಸ್ಕೃತಿ ಆಚರಣೆಯ ಆದೇಶವಿದೆ. ಸಾಧನೆಯ ಸಂಪತ್ತು ಇದೆ. ಇವುಗಳನ್ನು ಬೋಧಿಸಿ ಸಾಧಿಸುವ ಮಾರ್ಗವನ್ನು ಕೋರುವುದಕ್ಕಾಗಿ ಮಠಾಧಿಕಾರಿಯಾಗಲು ನೇಮಕಗೊಂಡಿರುತ್ತಾರೆ. ಆದುದರಿಂದ ಅಂತಹಾ ಮಠಾಧೀಶ್ವರುಗಳಿಗೆ ಧರ್ಮ ಸಂಸ್ಕಾರದ ಶಿಕ್ಷಣವನ್ನು ಕೊಡುವುದಕ್ಕೆ ಮಠಗಳು ಪ್ರಯತ್ನ ನಡೆಸುತ್ತಾ ಬಂದಿದೆ. ಒಂದು ಕಾಲದಲ್ಲಿ ಬಹುಪಾಲು ವೀರಶೈವ ಮಠಗಳ ಪೀಠಾಧೀಶರಿಗೆ ಧರ್ಮ, ಸಂಸ್ಕೃತಿಗೆ ಶಿಕ್ಷಣ ಕೊಡುವ ಹೊಣೆಗಾರಿಕೆ ಸುತ್ತೂರು ಮಠಕ್ಕೆ ಸೇರಿತ್ತು. ಮಂತ್ರಮಹರ್ಷಿಗಳೆಂದೇ ಪ್ರಸಿದ್ಧರಾದ ಜಗದ್ಗುರು ಶ್ರೀ ಶಿವರಾತ್ರಿ ಮಹಾಸ್ವಾಮಿಗಳು ತಮ್ಮ ಉತ್ತರಾಧಿಕಾರಿಯಾಗಲಿರುವ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಮಠಾಧಿಕಾರಿಗಳಾಗುವಂತಹ ಸಂಸ್ಕಾರವನ್ನು ಪಡೆಯಲೆಂದು ಸುತ್ತೂರಿನಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ತೊಡಗಿಸಿದರು. ಆಗಾಗ ಧರ್ಮಜ್ಞಾನಿಗಳಾದ ವಿದ್ವಾಂಸರನ್ನು, ಪೀಠಾಧೀಶರನ್ನು ಶ್ರೀಮಠಕ್ಕೆ ಆಹ್ವಾನಿಸಿ, ಧಾರ್ಮಿಕ ಶಿಕ್ಷಣವನ್ನು ಕೊಡಿಸುತ್ತಿದ್ದರು. ಬಹುಕಾಲದಿಂದ ಭಾರತದಲ್ಲಿ ಉಗಮವಾದ ಎಲ್ಲಾ ಧರ್ಮಗಳ ಮೂಲ ಪ್ರೇರಣೆ ಸಂಸ್ಕೃತ ಭಾಷೆಯಲ್ಲಿರುವ ವೇದ, ಉಪನಿಷತ್ತು, ಆಗಮ, ಪುರಾಣ ಇತ್ಯಾದಿ ಗ್ರಂಥಗಳಿಂದ ಜಗದ್ಗುರುಗಳು ಪೀಠಾಧಿಕಾರಿಗಳನ್ನು ಸಂಸ್ಕೃತದಲ್ಲಿ ಶಿಕ್ಷಣ ಕೊಡುವ ಅಭಿಲಾಷೆಯನ್ನು ಹೊಂದಿದ್ದರು. ಆ ಕಾಲದಲ್ಲಿ ಬಹುತೇಕ ಸಂಸ್ಕೃತ ವಿದ್ವಾಂಸರು ನೆಲೆಸಿದ್ದುದು ಮಹಾನಗರಗಳಲ್ಲಿ ಮಾತ್ರ. ಏಕೆಂದರೆ ಅಂತಹ ವಿದ್ವಾಂಸರಿಗೆ ಪೋಷಕವಾಗಿದ್ದುದು ರಾಜಾನುಗ್ರಹ. ಆದುದರಿಂದ ರಾಜರ ನೆರಳಿನಲ್ಲಿ ಸಂಸ್ಕೃತದ ವಿದ್ವಾಂಸರು ಜೀವನ ನಿರ್ವಹಣೆ ಮಾಡುತ್ತಿದ್ದರು. ಆ ಕಾಲದಲ್ಲಿ ತರ್ಕಹೀನವಾದ ಪದ್ಧತಿಯೊಂದು ಪ್ರಬಲವಾಗಿತ್ತು. ಸಂಸ್ಕೃತ ಭಾಷೆಯನ್ನು ಮತ್ತು ಧರ್ಮ ಸಂಸ್ಕೃತಿಯನ್ನು ಅಧ್ಯಯನ ಮಾಡುವ ಮತ್ತು ಅಧಿಕಾರ ಬ್ರಾಹ್ಮಣರಿಗೆ ಮಾತ್ರ ಮೀಸಲಾಗಿತ್ತು. ಬ್ರಾಹ್ಮಣರೇತರರಿಗೆ ಈ ಶಿಕ್ಷಣದ ನಿಷೇಧವಿತ್ತು. ಆಗ ವೀರಶೈವರಿಗೂ ಸಂಸ್ಕೃತದ ಧರ್ಮ ಶಿಕ್ಷಣ ಕೊಡಿಸಬೇಕೆಂಬ ದಿಟ್ಟ ಹೆಜ್ಜೆಯನ್ನಿಟ್ಟ ಧೀರ ಪುರುಷರು ಮಂತ್ರಮಹರ್ಷಿ ಶಿವರಾತ್ರಿ ಮಹಾಸ್ವಾಮಿಗಳು. ಆದಕಾರಣ ತಮ್ಮ ಶಿಷ್ಯರಿಗೆ ಈ ಶಿಕ್ಷಣವನ್ನು ದೊರಕಿಸಿಕೊಡಲು

ಮೈಸೂರು ನಗರದಲ್ಲಿ ವ್ಯವಸ್ಥೆ ಮಾಡಿದರು. ಹಾಗೆಯೇ ಅವರ ಶಿಕ್ಷಣ ಮುಂದುವರಿದಾಗ ಸಂಸ್ಕೃತ ಭಾಷೆಯಲ್ಲಿ ಶಿಕ್ಷಣ ಕೊಡುವ ವೀರಶೈವ ಅಥವಾ ಬ್ರಾಹ್ಮಣೇತರ ವಿದ್ವಾಂಸರು ದೊರೆಯುವುದು ದುರ್ಲಭವಾಗಿದೆ. ಕೆಲವು ವಿದ್ವಾಂಸರು ಆರಂಭಿಕ ದಿನಗಳಲ್ಲಿ ಗೌಪ್ಯವಾಗಿ ಈ ಶಿಕ್ಷಣ ಕೊಡುತ್ತಿದ್ದರು.

ಇದೇ ಸಮಯದಲ್ಲಿ ಶ್ರೀ ಸುತ್ತೂರು ಮಠದ ಪರಂಪರೆಗೆ ಸೇರಿದ ಕಾರ್ಯ ಮಠದಲ್ಲಿ ಪ್ರಭುಸ್ವಾಮಿಗಳೆಂಬುವವರು ವೇದಾಂತ ಮತ್ತು ಜ್ಯೋತಿಷ್ಯವನ್ನು ಗುರುಗಳ ನೆರವಿನಿಂದ ಪಡೆದಿದ್ದರು. ಆ ಕಾಲದಲ್ಲಿ ಭೌತಿಕ ಸಂಪತ್ತಿದ್ದರು ಆಧ್ಯಾತ್ಮಿಕ ಸಂಪತ್ತನ್ನು ತಿಳಿಯಲು ಮತ್ತು ಪಡೆಯಲು ಆಸಕ್ತರಾದವರು ಅನೇಕರಿದ್ದರು. ಅವರು ಪ್ರಭುಸ್ವಾಮಿಗಳ ಸಾನ್ನಿಧ್ಯಕ್ಕೆ ಅನುಗ್ರಹಕ್ಕಾಗಿ ಆಗಾಗ ಬರುತ್ತಿದ್ದರು. ಅಂತಹವರಲ್ಲಿ ಇಂದಿನ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಕ್ಯಾತನಹಳ್ಳಿ ಸಾಹುಕಾರ್ ಸಿದ್ಧಲಿಂಗಯ್ಯನವರು ಆ ಸಮಯದಲ್ಲಿ ಈ ಮಂಡ್ಯ ಜಿಲ್ಲೆಯ ವೀರಶೈವ ಶ್ರೀಮಂತರಲ್ಲಿ ಇವರು ಗಣ್ಯರು. ಇವರು ಪ್ರಭುಸ್ವಾಮಿಗಳ ಸನ್ನಿಧಿಗೆ ಬರುತ್ತಿದ್ದಾಗ ಸುತ್ತೂರು ಮಠದ ಪರಿಚಯವಾಯಿತು. ಮಂತ್ರ ಮಹರ್ಷಿಗಳಿಗೆ ಭಕ್ತರಾದರು. ಸಾಹುಕಾರ್ ಸಿದ್ಧಲಿಂಗಯ್ಯನವರು ಧರ್ಮ ಸಂಸ್ಕೃತಿಗಳು ವೀರಶೈವ ಸಮಾಜಕ್ಕೆ ಸಾಕಷ್ಟು ದೊರಕಬೇಕೆಂದು ಆಲೋಚಿಸಿದ ದಾನಿಗಳು. ಕಾರ್ಯದ ಪ್ರಭುಸ್ವಾಮಿಗಳ ಕೃಪೆ ಮತ್ತು ಮಂತ್ರ ಮಹರ್ಷಿಗಳ ಪ್ರೇರಣೆಯಿಂದ ಮೈಸೂರು ನಗರದಲ್ಲಿ ಸಂಸ್ಕೃತ, ವೇದ, ಜ್ಯೋತಿಷ್ಯವನ್ನು ವೀರಶೈವ ಮಠಾಧೀಶರಾಗುವವರಿಗೆ ಬೋಧಿಸುವ ಸಂಸ್ಥೆಯನ್ನು ಮತ್ತು ವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿ ಸೌಕರ್ಯಗಳನ್ನು ಒದಗಿಸುವ ಸಂಸ್ಥೆಯನ್ನು ಸ್ಥಾಪಿಸಲು ಅಗತ್ಯವಾದ ಧವನ ದಾನ ಮಾಡಲು ಮುಂದಾದರು. ಆ ಸಮಯದಲ್ಲಿ ಸುತ್ತೂರು ಮಠದ ಭೌತಿಕ ಸಂಪತ್ತು ಇಂತಹ ಕಾರ್ಯಗಳಿಗೆ ನೇರವಾಗಿ ಕೈಚಾಚುವ ಪರಿಸ್ಥಿತಿಯಲ್ಲಿರಲಿಲ್ಲ. ಜಗದ್ಗುರುಗಳು ಶ್ರೀ ಸಾಹುಕಾರ್ ಸಿದ್ಧಲಿಂಗಯ್ಯನವರ ಕೈಂಕರ್ಯವನ್ನು ಕೈಗೊಂಡು ಅವರ ಆಶಯವನ್ನು ಯಶಸ್ವಿಗೊಳಿಸುವ ಸಂಕಲ್ಪ ಮಾಡಿದರು. ಅದರಿಂದಾಗಿ ಎಂಬತ್ತು ವರ್ಷಗಳ ಹಿಂದೆ ಮೈಸೂರಿನ ವಾಣಿವಿಲಾಸ ರಸ್ತೆಯಲ್ಲಿ ಸಾಹುಕಾರ್ ಸಿದ್ಧಲಿಂಗಯ್ಯನವರ ಹೆಸರಿನಲ್ಲಿ ಸಂಸ್ಕೃತ ವಿದ್ಯಾಸಂಸ್ಥೆ ಮತ್ತು ವಿದ್ಯಾರ್ಥಿನಿಲಯ ಪ್ರಾರಂಭವಾಯಿತು. ಈ ಸಂಸ್ಥೆಯ ನೆರವಿನಲ್ಲಿ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು, ಶಿವರಾತ್ರಿಯಪ್ಪನವರು ತಮ್ಮ ಶಿಕ್ಷಣವನ್ನು ಮುಂದುವರಿಸಿದರು. ಶಿವರಾತ್ರಿಯಪ್ಪನವರು ಮೈಸೂರು ರಾಜ್ಯದ ಕಾವ್ಯ ಪರೀಕ್ಷೆ ಮತ್ತು ಮಹಾರಾಷ್ಟ್ರದ ಕಾವ್ಯತೀರ್ಥದ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಶಿವರಾತ್ರಿಯಪ್ಪನವರಿಗೆ ಕಾವ್ಯ, ವ್ಯಾಕರಣ, ತರ್ಕಶಾಸ್ತ್ರಗಳ ಅಧ್ಯಯನದಲ್ಲಿ ಅಷ್ಟಾಗಿ ಆಸಕ್ತಿ ಇರಲಿಲ್ಲ. ಲಿಂಗಪೂಜೆಯ ಅಗತ್ಯವಾದ ವೇದ ಮಂತ್ರಗಳ ಅಧ್ಯಯನದಲ್ಲಿ ಆಸಕ್ತರಾಗಿ ಸಾಕಷ್ಟು ಪರಿಶ್ರಮದಿಂದ ಉಪಾಸನೆಯ ಉಪಚಾರ ಮಂತ್ರಗಳನ್ನು ಕಂಠಸ್ಥಗೊಳಿಸಿಕೊಂಡರು. ಶಿವರಾತ್ರಿಯಪ್ಪನವರೂ ಸಹ ಇಲ್ಲಿ ಶಿಕ್ಷಣ ಪಡೆದರು.



ಸಾಹುಕಾರ್ ಸಿದ್ಧಲಿಂಗಯ್ಯನವರಿಗೆ ವಯಸ್ಸಾಗುತ್ತಾ ಬಂದಿತು. ಅವರು ಲಿಂಗಪೂಜಾ ನಿಷ್ಠರಾಗಿದ್ದರು. ಅವರು ಗುರುಗಳ ಸಾನ್ನಿಧ್ಯ ಮತ್ತು ಗುರುಗಳಿಂದ ತೀರ್ಥಪ್ರಸಾದವನ್ನು ಪಡೆಯುವ ಧಾರ್ಮಿಕ ಕ್ರಿಯೆಯಲ್ಲಿ ನಿಷ್ಠರಾಗಿದ್ದರು. ಇಳಿವಯಸ್ಸಿನಲ್ಲಿ ಗುರುಕೃಪೆಗಾಗಿ ದೂರಪ್ರಯಾಣ ಮಾಡಲು ಶಕ್ಯವಿರಲಿಲ್ಲ. ಆಗ ಈಗಿನಂತೆ ವಾಹನ ಸೌಕರ್ಯಗಳಿರಲಿಲ್ಲ. ಆದುದರಿಂದ ಕ್ಯಾತನಹಳ್ಳಿಯಲ್ಲಿ ಮಠ ಸ್ಥಾಪಿಸುವುದಕ್ಕೆ ಮಂತ್ರಮಹರ್ಷಿಗಳ ಒಪ್ಪಿಗೆ ಪಡೆದು ಕ್ಯಾತನಹಳ್ಳಿಯಲ್ಲಿ ಸಿದ್ಧಲಿಂಗಯ್ಯನವರು ಮತ್ತು ಅವರ ಬಂಧುವರ್ಗಕ್ಕೆ ಸೇರಿದವರ ನಾಲ್ಕೈದು ವೀರಶೈವ ಮನೆಗಳಿದ್ದವು. ಹತ್ತಿರದ ಹಳ್ಳಿಗಳಲ್ಲಿ ಸಹ ಅವರ ಬಂಧುಗಳ ಕೆಲವೇ ವೀರಶೈವ ಮನೆಗಳಿದ್ದವು. ಆದುದರಿಂದ ಮಠದ ವ್ಯವಸ್ಥೆಗಾಗಿ ಜಮೀನನ್ನು ದಾನವಾಗಿ ಬಿಟ್ಟು ಮಠಕ್ಕೆ ಅಗತ್ಯವಾದ ಕಟ್ಟಡವನ್ನು ಕಟ್ಟಿಸಿದರು. ಶಿವರಾತ್ರಿಯಪ್ಪನವರು ವಿದ್ಯಾರ್ಥಿಯಾಗಿದ್ದಾಗಲೆ ವೇದಮಂತ್ರಗಳನ್ನು ಸ್ಪಷ್ಟವಾಗಿ ಹೇಳುತ್ತಿದ್ದುದರಿಂದ ಅವರನ್ನೇ ಸದರಿ ಮಠಕ್ಕೆ ಸ್ವಾಮಿಗಳನ್ನಾಗಿ ಮಾಡಬೇಕೆಂದು ಮಂತ್ರ ಮಹರ್ಷಿಗಳಲ್ಲಿ ಪ್ರಾರ್ಥಿಸಿದರು. ಅದರಂತೆ ಶಿವರಾತ್ರಿಯಪ್ಪನವರು ಕ್ಯಾತನಹಳ್ಳಿ ಸಿದ್ದಲಿಂಗಯ್ಯನವರು ಸ್ಥಾಪಿಸಿದ ಮಠಕ್ಕೆ ಪೀಠಾಧೀಶರಾದರು. ಗುರುಗಳ ಅಪ್ಪಣೆ ಮೀರಲಾರದೆ ಮಠಾಧೀಶರಾದರು. ಆದರೆ ಅವರ ಒಲವು ನಿಲುವುಗಳೆಲ್ಲ ಸುತ್ತೂರು ಮಠದ ಶ್ರೇಯೋಭಿವೃದ್ಧಿಯಲ್ಲಿ ನೆಲೆವೀಡಾಗಿದ್ದವು. ಅಗತ್ಯವಿದ್ದಾಗ ಮಾತ್ರ ಕ್ಯಾತನಹಳ್ಳಿಗೆ ಹೋಗಿ ಪೂಜಾ ಕಾರ್ಯಗಳನ್ನು ನೆರವೇರಿಸಿ ಮೈಸೂರಿಗೆ ಬಂದು ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಒಡನಾಡಿಗಳಾಗಿ ಭಾಗಿಯಾಗುತ್ತಿದ್ದರು.

ಸರ್ವವಿದಿತವಾಗಿರುವಂತೆ ಆ ಕಾಲದಲ್ಲಿ ಮಠಗಳು ಯಾವುದಾದರು ದೊಡ್ಡ ಮಠದ ಶಾಖಾ ಮಠವಾಗಿರಬಹುದು ಅಥವಾ ಸ್ವತಂತ್ರವಾಗಿರುವುದು. ಅವುಗಳಲ್ಲಿ ಮಠಾಧೀಶರಾದವರು ತಮ್ಮ ಮಠಗಳಿಗೆ ಆಸ್ತಿಗಳನ್ನು ಮಾಡಿ ಅಭಿವೃದ್ಧಿಪಡಿಸಿದರು. ಆಸಕ್ತರಾಗಿರುತ್ತಿದ್ದರು. ಆದಕಾರಣ ಮಠಮಾನ್ಯಗಳು ಅಭಿವೃದ್ಧಿ ಹೊಂದುತ್ತಾ ಬಂದಿದ್ದವು. ಹೀಗೆ ವೀರಶೈವ ಮಠಗಳು ಪ್ರಾರಂಭವಾದುದು ವೀರಶೈವ ಜನಾಂಗ ಸಮೂಹವಿರುವ ಸ್ಥಳಗಳಲ್ಲಿ. ಆದರೆ ಕೆಲವೆಡೆ ವೀರಶೈವ ಜನಸಂಖ್ಯೆ ಕಡಿಮೆಯಿದ್ದರೂ ಅಲ್ಲಿ ಸ್ಥಾಪಿಸಿದ ಮಠಗಳು ಇಂದಿಗೂ ಪ್ರಸಿದ್ಧಿಯನ್ನು ಪಡೆಯುತ್ತಲೇ ಬಂದಿವೆ. ಏಕೆಂದರೆ ಆಗ ಮಠಾಧೀಶರು ಮತ್ತೊಬ್ಬರ ಪ್ರೇರಣೆಯಿಂದ ಆದವರಲ್ಲ. ಬಾಹ್ಯ ಸಂಪತ್ತಿನಿಂದ ಆಕರ್ಷಿತರಾದವರಲ್ಲ. ಸ್ವಯಂ ಸಂಸ್ಕಾರದಿಂದ ಸಿದ್ಧಿ ಪಡೆದವರಾಗಿದ್ದರು. ಅವರನ್ನು ಕಂಡರೆ ಎಲ್ಲಾ ವರ್ಗದ ಜಾತಿಯ ಜನರು ಭಕ್ತಿಭಾವದಿಂದ ನಡೆದುಕೊಳ್ಳುತ್ತಿದ್ದರು. ಅಂತಹವರ ತಪಸ್ಸಿದ್ಧಿಗೆ ಮಣಿಯುತ್ತಿದ್ದರು. ಅಂತಹ ಪೀಠಗಳು ಸಾರ್ವಜನಿಕ ಅಭ್ಯುದಯದ ಅನುಗ್ರಹ ಕೇಂದ್ರಗಳಾದುದರಿಂದ ಅವು ಜಾತಿಯ ಎಲ್ಲೆಯನ್ನು ಮೀರಿ ಪ್ರಸಿದ್ಧಿಗೊಳ್ಳುತ್ತಾ ಬಂದವು. ಇತ್ತೀಚಿನ ದಿನಗಳಲ್ಲಿ ಮಠಗಳು ಪೀಠಾಧೀಶರ ವ್ಯವಹಾರ ಕುಶಲತೆಯಿಂದ ಮತ್ತು ಜನೋಪಯೋಗಿ ಕಾರ್ಯಗಳನ್ನು ಕೈಗೊಂಡುದರ ಕಾರಣ ಬಾಹ್ಯದಲ್ಲಿ ಪೀಠಾಧೀಶರಿಗೆ ಗೌರವ ಸಲ್ಲುತ್ತಾ ಬಂದಿದೆ. ಇತ್ತೀಚೆಗೆ ಪ್ರತಿಯೊಂದು

ಜಾತಿಯವರು ತಮ್ಮದೇ ಆದ ಮಠವನ್ನು ರಚಿಸಿಕೊಂಡ ಕಾರಣ ವೀರಶೈವ ಮಠಗಳಲ್ಲಿ ಇತರರಿಗೆ, ಆಸಕ್ತಿ ಕಡಿಮೆಯಾಗುತ್ತಾ ಬಂದಿದೆ. ಅಲ್ಲದೆ ವೀರಶೈವರಲ್ಲೇ ವಿವಿಧ ಪಂಗಡಗಳಿವೆ. ಆಯಾ ಪಂಗಡದವರು ತಮ್ಮವರನ್ನೇ ಮಠಾಧೀಶರಾಗಿ ಮಾಡಿಕೊಳ್ಳುತ್ತಾ ಬಂದಿದ್ದಾರೆ. ಅದರಿಂದ ಮಠಗಳಿಂದ ಸಮಾಜದ ಮೇಲೆ ಆಗಬೇಕಾದ ಸಾಂಸ್ಕೃತಿಕ ಮತ್ತು ಧಾರ್ಮಿಕ ಸಂಸ್ಕಾರ ಶಿಥಿಲಗೊಂಡಿದೆ. ಆಧ್ಯಾತ್ಮಿಕ ಶಕ್ತಿಯಿಂದ ಮಾನವರ ಮೇಲೆ ಪರಿಣಾಮವನ್ನುಂಟು ಮಾಡುವ ಮಠಾಧೀಶರು ದುರ್ಲಭವೆಂಬ ಭಾವನೆ ಜನಮನದಲ್ಲಿ ಮೂಡಿದೆ. ಇಂತಹ ಪರಿಸ್ಥಿತಿಯಲ್ಲಿ ಕ್ಯಾತನಹಳ್ಳಿ ಮಠ ಪ್ರಸಿದ್ಧಿಗೆ ಬರಲು ಸಾಧ್ಯವಾಗಲಿಲ್ಲ. ಕ್ಯಾತನಹಳ್ಳಿ ಮಠಕ್ಕೆ ಪೀಠಾಧೀಶರಾದ ಶಿವರಾತ್ರಿಯಪ್ಪನವರು ಸುತ್ತೂರು ಮಠದ ಗುರುಪರಂಪರೆಯಲ್ಲಿ ಬೆಳೆದವರು. ಅವರು ಪೀಠಾಧೀಶರನ್ನಾಗಿ ಮಾಡಿದಾಗ ಅವರಿಗೆ ಶಿವಪ್ರಭುಸ್ವಾಮಿ ಎಂದು ಅಭಿಧಾನವನ್ನು ನೀಡಲಾಗಿದೆ. ಶ್ರೀಗಳವರು ತಮ್ಮ ಮಠವನ್ನು ವ್ಯವಹಾರಿಕವಾಗಿ ಅಭಿವೃದ್ಧಿಪಡಿಸಿಕೊಂಡು ಸ್ವತಂತ್ರವಾಗಿ ಕೀರ್ತಿ ಪಡೆಯಲು ಬಯಸಿದವರಲ್ಲ. ಹಾಗೆ ಅವರು ಬಯಸಿದ್ದಾರೆ, ಬಹುಶಃ ಸಿದ್ಧಲಿಂಗಯ್ಯನವರಂತೆ ಶ್ರೀಮಂತರಾದ ವೀರಶೈವ ಭಕ್ತರು ಆ ಜಿಲ್ಲೆಯಲ್ಲಿದ್ದರು. ಅನ್ಯ ಜಾತಿಯ ಶ್ರೀಮಂತರು ಗುರುಗಳು ಅಪೇಕ್ಷಿಸಿದ್ದರೆ ಮಠದ ಸಂಪತ್ತನ್ನು ಬೆಳೆಸಲು ನೆರವಾಗುತ್ತಿದ್ದರು. ಇಂತಹ ಸೌಲಭ್ಯಗಳು ವೀರಶೈವ ಜನಾಂಗದಲ್ಲೆ ಹೆಚ್ಚಾಗಿರುವ ಸ್ಥಳಗಳಲ್ಲಿ ಸ್ಥಾಪಿತವಾದ ಮಠಗಳಿಗೆ ಇರಲಿಲ್ಲ. ಆದಾಗ್ಯೂ ತನ್ನದೇ ಆದ ಒಂದು ಮಠ ಮತ್ತು ಅದಕ್ಕೆ ಸೇರಿದ ಸಂಪತ್ತು ಬೆಳೆಸಬೇಕೆಂಬ ಸ್ವಾಭಿಮಾನ ಶಿವಪ್ರಭುಸ್ವಾಮಿಗಳಿಗೆ ಇರಲಿಲ್ಲ. ಏಕೆಂದರೆ ಜನ್ಮತಃ ತಮ್ಮ ಸೇವೆಯನ್ನು ಸುತ್ತೂರು ಮಠಕ್ಕೆ ಸಲ್ಲಿಸುವ ಸಂಸ್ಕಾರವು ಬೆಳೆದಿತ್ತು. ಆದಕಾರಣ ಅವರ ಆಸಕ್ತಿ ಸುತ್ತೂರು ಮಠದ ಅಭಿವೃದ್ಧಿಯತ್ತ ಕೇಂದ್ರೀಕರಿಸಿತ್ತು.

ಶಿವಪ್ರಭುಸ್ವಾಮಿಗಳು ವ್ಯವಹಾರದ ಲೆಕ್ಕಾಚಾರದಲ್ಲಿ ಬಾಲ್ಯದಿಂದಲೂ ಶಿಸ್ತನ್ನು ಪಾಲಿಸಿಕೊಂಡು ಬಂದಿದ್ದರು. ಕನ್ನಡ ಭಾಷೆಯಲ್ಲಿ ಮುದ್ದಾಗಿ ಅಕ್ಷರಗಳನ್ನು ಬರೆಯುತ್ತಿದ್ದರು. ಇದನ್ನು ಗಮನಿಸಿದ ಮಂತ್ರಮಹರ್ಷಿಗಳು ಶಿವಪ್ರಭುಸ್ವಾಮಿಗಳನ್ನು ಶ್ರೀಮಠದ ಲೆಕ್ಕಪತ್ರಗಳ ನಿರ್ವಹಣೆಗೆ ನೇಮಿಸಿಕೊಂಡಿದ್ದರು. ಆದಾಯ ವೆಚ್ಚದ ವ್ಯವಹಾರದಲ್ಲಿ ಮಂತ್ರಮಹರ್ಷಿಗಳು ಪ್ರಾಮಾಣಿಕವಾಗಿ ಲೆಕ್ಕಪತ್ರಗಳನ್ನು ಶ್ರೀಮಠದ ವ್ಯವಹಾರಗಳನ್ನು ಸ್ವಹಸ್ತದಿಂದಲೇ ಬರೆದಿಡುತ್ತಿದ್ದರು. ಅವರ ಸಾನ್ನಿಧ್ಯದಲ್ಲಿ ಪಳಗಿದ ಶಿವಪ್ರಭುಸ್ವಾಮಿಗಳು ಮುಂದೆ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ನಡೆಸುವ ಸಾಮಾಜಿಕ ಸೇವಾಕಾರ್ಯಗಳಲ್ಲಿ ನಿಯಮ ಪಾಲನೆಗೆ ನೆರವಾಗುತ್ತಿದ್ದರು. ವ್ಯರ್ಥ ಮತ್ತು ದುಂದು ವೆಚ್ಚಕ್ಕೆ ಅವರು ಎಂದೂ ಮನಸೋತವರಲ್ಲ. ಶ್ರೀಮಠದ ಗೌರವಕ್ಕೆ ಕಾರಣವಾದ ಕಾರ್ಯಗಳ ವೆಚ್ಚಕ್ಕೆ ಅಡ್ಡಿ ಬರುತ್ತಿರಲಿಲ್ಲ. ಆದಕಾರಣ ಅವರು ಕೆಲವರಿಗೆ ವ್ಯವಹಾರಗಳಿಗೆ ಆತಂಕಕಾರಿಯಾಗಿದ್ದರು. ಅದರಿಂದ ಆಂತರಿಕವಾಗಿ ಅನೇಕರ ದೃಷ್ಟಿಯಲ್ಲಿ ಅಪ್ರಿಯರಾದರು. ಶ್ರೀಮಠದ ಕಾರ್ಯಕ್ರಮಗಳಲ್ಲಿ ಖರ್ಚು ವೆಚ್ಚಗಳ ಬಗೆಗೆ ನಿಷ್ಠೆಯಿಂದ ನಿಯಮ ಪಾಲಿಸುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಜನರ ಅಪೇಕ್ಷೆಗಳು ಅಪಾರ.



ಪೀಠಾಧೀಶರ ಎಲ್ಲರ ಎಲ್ಲಾ ಅಪೇಕ್ಷೆಗಳನ್ನು ಈಡೇರಿಸುವುದು ಎಂದಿಗೂ ಅಸಾಧ್ಯ. ಇಂತಹ ಪ್ರಸಂಗಗಳಲ್ಲಿ ತಾವು ಪ್ರವೇಶ ಮಾಡಿ ಪೀಠಾಧೀಶರ ಬಗೆಗೆ ಸಾರ್ವಜನಿಕರು ಅಪ್ರಿಯರಾಗದಂತೆ ನಿಷ್ಠೆಯಿಂದ ವರ್ತಿಸಿ ತಾವೇ ಎಲ್ಲಾ ಅಪಕೀರ್ತಿಯ ಹೊರೆಯನ್ನು ವಿಷಕಂಠನಂತೆ ಶಿವಪ್ರಭುಸ್ವಾಮಿಗಳು ಸ್ವೀಕರಿಸುತ್ತಿದ್ದರು. ಮೈಸೂರಿನಲ್ಲಿ ಜೆಎಸ್ಎಸ್ ಮಹಾವಿದ್ಯಾಪೀಠ ಸ್ಥಾಪನೆಯಾಗಿ ಸೇವಾ ಕಾರ್ಯಗಳು ವಿಸ್ತಾರಗೊಂಡಾಗ ಸುತ್ತೂರು ಮಠದ ವ್ಯವಹಾರ ಕಾರ್ಯಗಳಲ್ಲಿ ಆಸಕ್ತರಾಗಿದ್ದರು. ಶಿವಪ್ರಭುಸ್ವಾಮಿಗಳು ಮೈಸೂರಿಗೆ ಬಂದು ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಸೇವಾಕಾರ್ಯಗಳಲ್ಲಿ ನೆರವಾಗುತ್ತಿದ್ದರು. ಜಗದ್ಗುರುಗಳ ಅಪೇಕ್ಷೆಗಳನ್ನು ಕಾರ್ಯಗತಗೊಳಿಸುವುದರಲ್ಲಿ ಶಿವಪ್ರಭುಸ್ವಾಮಿಗಳ ಪಾತ್ರ ಮಹತ್ವವಾಗಿತ್ತು. ಅವರು ತಮ್ಮ ಜೀವನದುದ್ದಕ್ಕೂ ಸ್ವಾರ್ಥಕ್ಕಾಗಿ ಏನನ್ನೂ ಬಯಸಲಿಲ್ಲ. ಕೀರ್ತಿಯನ್ನು ಅಪೇಕ್ಷಿಸಲಿಲ್ಲ. ಯಾರ ಹೊಗಳಿಕೆಗೂ ಕಿವಿಗೊಡಲಿಲ್ಲ, ಯಾರನ್ನೂ ವೈಯಕ್ತಿಕವಾಗಿ ದ್ವೇಷಿಸಲಿಲ್ಲ. ವಿದ್ಯಾಪೀಠದ ಮಹತ್ಕಾರ್ಯಗಳನ್ನು ಅನೇಕ ರೀತಿಯಲ್ಲಿ ಇಂದು ಆಸ್ಪತ್ರೆಯ ಹಳೇ ಕಟ್ಟಡವಾಗಿರುವ ಒಂದು ಕಟ್ಟಡವನ್ನು ನಿರ್ಮಾಣ ಮಾಡಲು ವಿದ್ಯಾಪೀಠ ಕೈಗೊಂಡ ಮೊದಲ ಕಾರ್ಯ. ವಿದ್ಯಾರ್ಥಿನಿಲಯಕ್ಕಾಗಿ ನಿರ್ಮಾಣವಾಗುತ್ತಿದ್ದ ಕಟ್ಟಡಕ್ಕೆ ಸಾಕಷ್ಟು ಧನಸಂಪತ್ತು ವಿದ್ಯಾಪೀಠಕ್ಕೆ ಇರಲಿಲ್ಲ. ಆಗ ಸಾರ್ವಜನಿಕ ಕಟ್ಟಡಗಳ ಮೇಲೆ ಖಾಸಗಿಯವರಾಗಲಿ, ಬ್ಯಾಂಕುಗಳಾಗಲಿ ಸಾಲ ಕೊಡುತ್ತಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರದಿಂದ ದೊರೆತ ಅಲ್ಪ ಅನುದಾನಕ್ಕೆ ಜಗದ್ಗುರುಗಳಿಗೆ ಬರುತ್ತಿದ್ದ ಭಕ್ತರ ಕಾಣಿಕೆಯನ್ನು ಸೇರಿಸಿ ಕಟ್ಟಡ ನಿರ್ಮಾಣವಾಯಿತು. ಈ ಕಟ್ಟಡದ ನಿರ್ಮಾಣದ ಮೇಲ್ವಿಚಾರಣೆಯನ್ನು ಹೊತ್ತು ವ್ಯರ್ಥ ವೆಚ್ಚವಾಗದಂತೆ ಸುಭದ್ರ ಕಟ್ಟಡ ನಿರ್ಮಾಣವಾಗಲು ಶಿವಪ್ರಭುಸ್ವಾಮಿಗಳು ಪಟ್ಟ ಶ್ರಮ ಅವರ್ಣನೀಯ. ಆದರೆ ಅದು ಸಾರ್ಥಕ. ವಿದ್ಯಾರ್ಥಿನಿಲಯದ ಕಟ್ಟಡ ಮುಂದೆ ಪ್ರಯೋಗಶಾಲೆ, ಕಲಾ ವಿಜ್ಞಾನ ವಾಣಿಜ್ಯದ ಪದವಿ ಕಾಲೇಜು, ಕಾನೂನು ಕಾಲೇಜು ಇತ್ಯಾದಿ ವಿದ್ಯಾಸಂಸ್ಥೆಗಳಿಗೆ ಆಶ್ರಯಿಸಿದ ಈ ಕಟ್ಟಡ ಇಂದು ಜೆಎಸ್ಎಸ್ ಆಸ್ಪತ್ರೆಯ ಮೂಲ ಕಟ್ಟಡವಾಯಿತು. ಜೆಎಸ್ಎಸ್ ಮಹಾವಿದ್ಯಾಪೀಠದ ಧನಸಂಪತ್ತಿನ ಕೊರತೆಯಲ್ಲಿಯೂ ಅನೇಕ ಸಂಸ್ಥೆಗಳು ಸ್ಥಾಪನೆಯಾದವು. ಅವುಗಳಲ್ಲಿ ಜೆಎಸ್ಎಸ್ ವೈದ್ಯಕೀಯ ಕಾಲೇಜು, ಅಂದಿನವರು ರಾಜ್ಯದಲ್ಲಿ ಸ್ಥಾಪಿತವಾದ ಎಲ್ಲಾ ವೈದ್ಯಕೀಯ ಕಾಲೇಜುಗಳಿಗೂ ಆಯಾ ಸ್ಥಳದ ಸರ್ಕಾರಿ ಆಸ್ಪತ್ರೆಯನ್ನು ಕೆಲವು ವರ್ಷಗಳ ಕಾಲ ಶೈಕ್ಷಣಿಕ ಪ್ರಯೋಗಕ್ಕಾಗಿ ಬಳಸಿಕೊಳ್ಳಲು ಸರ್ಕಾರ ಅನುಮತಿ ಕೊಡುತ್ತಾ ಬಂದಿತು. ಜೆಎಸ್ಎಸ್ ಮಹಾವಿದ್ಯಾಪೀಠಕ್ಕೆ ವೈದ್ಯಕೀಯ ಕಾಲೇಜು ಮಂಜೂರು ಮಾಡಲು ಸುಮಾರು ಹದಿನೈದು ವರ್ಷಗಳ ಕಾಲ ಸರ್ಕಾರ ನಿರಾಕರಣೆ ಮಾಡುತ್ತಾ ಬಂದಿತು. ಅದಕ್ಕೆ ಸ್ಥಳೀಯ ರಾಜಕಾರಣವು ಬೆಂಬಲವಾಗಿತ್ತು. ಶಿವರಾತ್ರೀಶ್ವರರ ಕೃಪೆಯಿಂದ ಈಗ್ಗೆ ಇಪ್ಪತ್ತೈದು ವರ್ಷಗಳ ಹಿಂದೆ ಸರ್ಕಾರ ವೈದ್ಯಕೀಯ ಕಾಲೇಜನ್ನು ಮಂಜೂರು ಮಾಡಿತು. ಆದರೆ ಸರ್ಕಾರಿ ಆಸ್ಪತ್ರೆಯನ್ನು ಬಳಸಿಕೊಳ್ಳಲು ಸರ್ಕಾರ ಅನುಮತಿ ಕೊಡಲು ಸಾಧ್ಯವಾಗಲಿಲ್ಲ.

ನಿಯಮದಂತೆ ಒಂಬೈನೂರು ಹಾಸಿಗೆಯುಳ್ಳ ಸೌಲಭ್ಯಗಳನ್ನು ಹೊಂದಿರುವ ಸಂಸ್ಥೆಗೆ ವೈದ್ಯಕೀಯ ಮಹಾವಿದ್ಯಾಲಯ ನಡೆಸುವ ಅವಕಾಶವಿರಲಿಲ್ಲ. ಸುತ್ತೂರು ಮಠದ ಪೀಠಾಧೀಶರಿಗೆ ಇದು ಅಗ್ನಿಪರೀಕ್ಷೆಯ ಕಾಲವಾಗಿತ್ತು. ಇಂತಹ ಸಮಯದಲ್ಲಿ ಶ್ರೀ ಗುರು ಕೃಪೆಯಿಂದ ಧೈರ್ಯಗೆಡದೆ ಮುನ್ನಡೆಸಿದವರು ಜಗದ್ಗುರು ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು. ಆಸ್ಪತ್ರೆಯ ಸ್ಥಾಪನೆಗೆ ಕಾಲೇಜಿಗಾಗಿ ಬಳಸಿದ ಕಟ್ಟಡವನ್ನು ಪರಿವರ್ತನೆಗೊಳಿಸಲು ನಿರ್ಧರಿಸಲಾಯಿತು. ಅದಕ್ಕೆ ಸಾಕಾಗುವಷ್ಟು ಧನಸಂಪತ್ತನ್ನು ಸಂಗ್ರಹಿಸುವುದರಲ್ಲಿ ಮತ್ತು ಕಟ್ಟಡ ಪರಿವರ್ತನಾ ಕಾರ್ಯದಲ್ಲಿ ಪ್ರೇರಕರಾಗಿದ್ದರು ಶಿವಪ್ರಭುಸ್ವಾಮಿಗಳು. ಇಂದು ಅವರ ಸೇವಾತತ್ಪರತೆಯ ಫಲವಾಗಿ ವೈದ್ಯಕೀಯ ಕಾಲೇಜು ಮತ್ತು ಜೆಎಸ್ಎಸ್ ಆಸ್ಪತ್ರೆ ಸರ್ಕಾರಿ ಕಾಲೇಜು ಸರ್ಕಾರಿ ಆಸ್ಪತ್ರೆಗೆ ಇರುವ ಸೌಲಭ್ಯಗಳಿಗಿಂತಲೂ ಮಿಗಿಲಾದ ಆಧುನಿಕ ಉಪಕರಣಗಳನ್ನು ಹೊಂದಿರುವುದು ಪ್ರಶಂಸನೀಯ. ಇಂದು ಜೆಎಸ್ಎಸ್ ವೈದ್ಯಕೀಯ ಕಾಲೇಜಿನ ಕಾರ್ಯಪ್ರಗತಿಯನ್ನು ಗಮನಿಸಿದ ಕೇಂದ್ರ ಸರ್ಕಾರ ಜೆಎಸ್ಎಸ್ ವಿಶ್ವವಿದ್ಯಾನಿಲಯ ಸ್ಥಾಪನೆಗೆ ಅನುಮತಿ ನೀಡಿದೆ. ಇಂದು ವಿಶ್ವವಿದ್ಯಾನಿಲಯ ಸ್ಥಾಪನೆ ಆಗಿದೆ. ಈ ಎಲ್ಲ ಕಾರ್ಯಗಳ ಶ್ರೇಯಸ್ಸು, ಕೀರ್ತಿಗೆ ಆಂತರಿಕವಾಗಿ ಶಿವಪ್ರಭುಸ್ವಾಮಿಗಳ ಸೇವೆ ಅವರ ಶ್ರೀ ಸುತ್ತೂರು ಮಠದ ಶ್ರದ್ಧೆ, ನಿಷ್ಠೆ ಭಕ್ತಿಗಳು ಕಾರಣವಾಗಿವೆ. ಶ್ರೀಮಠದ ಇಂತಹ ಸೇವಾ ಕಾರ್ಯಗಳಲ್ಲಿ ಎಲ್ಲಾ ಕಷ್ಟಕಾರ್ಪಣ್ಯಗಳಲ್ಲಿ ಸಹಭಾಗಿಗಳಾಗಿದ್ದರು. ಅದನ್ನು ಹೆಚ್ಚು ಅಷ್ಟೊಂದು ವಿವರಿಸುವ ಅಗತ್ಯವಿಲ್ಲ. ಶಿವಪ್ರಭುಸ್ವಾಮಿಗಳು ಅನನ್ಯವಾದ, ಅಪೂರ್ವವಾದ ಸೇವೆಯೊಂದನ್ನು ಇಲ್ಲಿ ಸ್ಮರಿಸುವುದು ಅಗತ್ಯ. ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು. ಮೈಸೂರಿನ ಕೊನೆಯ ಮಹಾರಾಜರಾಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರು ತಮಿಳುನಾಡಿನ ರಾಜ್ಯಪಾಲರಾಗಿ ನೇಮಕಗೊಂಡರು. ಅವರ ಪ್ರಾರ್ಥನೆಯ ಮೇರೆಗೆ ಮದರಾಸಿನ ರಾಜಭವನದಲ್ಲಿ ಜಗದ್ಗುರುಗಳವರ ಲಿಂಗಪೂಜೆ ಮತ್ತು ಪಾದಪೂಜೆಯನ್ನು ಏರ್ಪಡಿಸಿದರು. ಆಗ ಜಗದ್ಗುರುಗಳವರು ಹೃದಯಾಘಾತಕ್ಕೆ ತುತ್ತಾದರು. ಆ ಸಮಯದಲ್ಲಿ ಅವರ ಹತ್ತಿರದಲ್ಲಿದ್ದು ಪರಿಚಾರಕರಂತೆ ಅವರ ಔಷಧೋಪಚಾರದ ಶುಶ್ರೂತೆ ಮಾಡಿದವರು ಶಿವಪ್ರಭುಸ್ವಾಮಿಗಳು. ಅನಂತರ ಜಗದ್ಗುರುಗಳ ಆರೋಗ್ಯ ಸುಧಾರಣೆಯಲ್ಲಿ ಕೊನೆಯ ದಿನದವರೆಗೆ ಹೆತ್ತ ತಾಯಿಗಿಂತಲೂ ಹೆಚ್ಚು ಮಮತೆಯಿಂದ ಗಮನವಿಟ್ಟು ಪೋಷಿಸಿದರು. ವಿದೇಶಿ ಭಕ್ತರ ಆಹ್ವಾನ ಮೇರೆಗೆ ಜಗದ್ಗುರುಗಳವರು ಐದು ವಾರಗಳ ಕಾಲ ಇಂಗ್ಲೆಂಡ್ ಮತ್ತು ಅಮೆರಿಕಾದೇಶದಲ್ಲಿ ಪ್ರವಾಸ ಕೈಗೊಂಡರು. ವಿದೇಶಿ ವೈದ್ಯರು ಜಗದ್ಗುರುಗಳ ಆರೋಗ್ಯವನ್ನು ಪರೀಕ್ಷಿಸಿದರು. ಇಂತಹ ಪರಿಸ್ಥಿತಿಯಲ್ಲಿ ಇವರು ಹೇಗೆ ಪ್ರವಾಸ ಮಾಡುತ್ತಿದ್ದಾರೆ ಎಂದು ಆಶ್ಚರ್ಯಪಡುತ್ತಿದ್ದರು. ಆ ಸಮಯದಲ್ಲಿ ಶಿವಪ್ರಭುಸ್ವಾಮಿಗಳು ವೈಯಕ್ತಿಕವಾಗಿ ಅವರ ಔಷಧೋಪಚಾರಗಳ ನಿರ್ವಹಣಾ ಕಾರ್ಯವನ್ನು ಶ್ರದ್ಧೆಯಿಂದ ಮಾಡುತ್ತಿದ್ದರು. ಮಾತೃವಾತ್ಸಲ್ಯದಿಂದ ಸೇವೆಗೈದರು, ಬಹುಶಃ ಆ ಕಾಲದಲ್ಲಿ ಬಹುಕಾಲ ನಿದ್ರಾ ತ್ಯಾಗ ಮಾಡಿ



ತಮ್ಮ ಶ್ರಮವನ್ನು ಲೆಕ್ಕಿಸದೆ ಜಗದ್ಗುರುಗಳ ಆರೋಗ್ಯ ರಕ್ಷಣೆಗಾಗಿ ಕಾಲಕಾಲಕ್ಕೆ ಔಷಧೋಪಚಾರ ಮಾಡುತ್ತಿದ್ದರು. ಇಂತಹ ವೈಯಕ್ತಿಕ ಸೇವೆ ಅವರ ವಾತ್ಸಲ್ಯ, ಗುರುಗಳಲ್ಲಿ ಆಸಕ್ತಿ, ಮಠದ ಹಿರಿಮೆಯ ಬಗೆಗೆ ಅಭಿಮಾನ ಇವೆಲ್ಲವೂ ಅವಿಸ್ಮರಣೀಯ ಘಟನೆಗಳು.

ಹೀಗೆ ವಿದ್ಯಾಪೀಠದ ಸೇವೆಗೆ ಜನರ ಅಭ್ಯುದಯಕ್ಕೆ ಅಪ್ರತ್ಯಕ್ಷವಾಗಿ ಅಪ್ರತಿಮ ಸೇವೆ ಸಲ್ಲಿಸಿದರು. ಶಿವಪ್ರಭುಸ್ವಾಮಿಗಳು ತೊಂಬತ್ತೇಳು ಸಂವತ್ಸರಗಳನ್ನು ದಾಟಿ ಶಿವನೊಳಗಾದರು. ಅವರು ಕ್ಯಾತನಹಳ್ಳಿ ಮಠಕ್ಕೆ ಶ್ರೀಗಳಾದ ಕಾರಣ ಕ್ಯಾತನಹಳ್ಳಿ ಗ್ರಾಮದ ಹೆಸರು ಲಕ್ಷಾಂತರ ಜನರ ಸ್ಮೃತಿಯಲ್ಲಿ ಉಳಿಯಿತು. ಇಂತಹ ತುಂಬು ಜೀವನಕ್ಕೆ ಅವರ ಲಿಂಗಪೂಜಾನಿಷ್ಠೆ ಪ್ರಬಲವಾದ ಹಿನ್ನೆಲೆಯಾಗಿತ್ತು. ಆದಿಜಗದ್ಗುರು ಶಿವರಾತ್ರೀಶ್ವರರ ಸನ್ನಿಧಿಯಲ್ಲಿ ಅಪಾರ ಭಕ್ತಿಯಿಂದ ಅನೇಕ ವರ್ಷಗಳ ಕಾಲ ಅಮೋಘವಾಗಿ ಪೂಜಾಕೈಂಕರ್ಯವನ್ನು ಸಲ್ಲಿಸಿದರು. ಎಂತಹ ಕಷ್ಟದ ಸಮಯದಲ್ಲೂ ಲಿಂಗಪೂಜಾನಿಷ್ಠೆಯನ್ನು ಕೈಬಿಟ್ಟವರಲ್ಲ. ಅಂತಿಮ ದಿನಗಳಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೊಳಗಾಗಿದ್ದರೂ ಸಂಧ್ಯಾಸಮಯದ ಇಷ್ಟಲಿಂಗಪೂಜೆ ನೆರವೇರಿಸಿ ಒಂದು ತುತ್ತು ಪ್ರಸಾದವನ್ನು ತೆಗೆದುಕೊಂಡು ಈ ಲೋಕದ ಮತ್ತೊಂದು ತುತ್ತು ನನ್ನದಲ್ಲವೆಂದು ಭಗವಂತನಿಗೆ ನಿವೇದಿಸಿಕೊಂಡು ಪ್ರಶಾಂತವಾಗಿ ಸಾವುನೋವಿನ ಯಾವ ಛಾಯೆಯೂ ಇಲ್ಲದೆ, ಭಯವೂ ಇಲ್ಲದೆ, ಆಸೆ ಆಕಾಂಕ್ಷೆಗಳಿಲ್ಲದೆ ಜೀವನದಿಂದ ಮುಕ್ತರಾದ ಮಹಾನುಭಾವರು ಶಿವಪ್ರಭುಸ್ವಾಮಿಗಳು. ಅವರ ಶ್ರೀಚರಣಕ್ಕೆ ಅನಂತ ಪ್ರಣಾಮಗಳು.

ಭಕ್ತೆಯಾನಪ್ಪೆನಯ್ಯಾ, ಕರ್ತೃಭೃತ್ಯವ ನಾನಱಿಯೆ.
ಮಾಹೇಶ್ವರಿಯಾನಪ್ಪೆನಯ್ಯಾ
ವ್ರತನೇಮಫಲವ ನಾನಱಿಯೆ.
ಪ್ರಸಾದಿಯಾನಪ್ಪೆನಯ್ಯಾ
ಅರ್ಪಿತಾನರ್ಪಿತವೆಂಬ ಭೇದವ ನಾನಱಿಯೆ.
ಪ್ರಾಣಲಿಂಗಿಯಾನಪ್ಪೆನಯ್ಯಾ
ಅನುಭಾವದ ಗಮನವ ನಾನಱಿಯೆ.
ಶರಣೆಯಾನಪ್ಪೆನಯ್ಯಾ
ಶರಣಸತಿ ಲಿಂಗಪತಿ ಎಂಬ ಭಾವನೆ ನಾನಱಿಯೆ.
ಐಕ್ಯಳಾನಪ್ಪೆನಯ್ಯಾ, ಬೆರಸಿ ಭೇದವ ನಾನಱಿಯೆ.
ಚೆನ್ನಮಲ್ಲಿಕಾರ್ಜುನಯ್ಯಾ, ಷಟ್‌ಸ್ಥಲದಲ್ಲಿ ನಿಃಸ್ಥಲವಾಗಿಪ್ಪೆನು.

**- ಅಕ್ಕಮಹಾದೇವಿ**

# ಪುಣ್ಯಹಣ್ಣಾದ
# ಶ್ರೀ ಕ್ಯಾತನಹಳ್ಳಿ ಶಿವಪ್ರಭುಸ್ವಾಮಿಗಳವರ ಪುಣ್ಯಸ್ಮರಣೆ

ಡಾ. ಎಸ್.ಎಂ. ವೃಷಭೇಂದ್ರಸ್ವಾಮಿ

ಶಿವಶರಣ ಪರಂಪರೆಯಲ್ಲಿ ಸಾಗಿಬಂದ, ಮೈಸೂರು ಜಿಲ್ಲೆಯ ಶ್ರೀ ಸುತ್ತೂರು ಸಂಸ್ಥಾನ ಮಠ – ಅಲ್ಲಿ ಆಶ್ರಯ – ಶಿಕ್ಷಣ ಪಡೆದ ನನ್ನಂಥ ಸಾವಿರಾರು ವ್ಯಕ್ತಿಗಳಿಗೆ, ಅದು "ಸಂಸ್ಕೃತಿ ತವರುಮನೆ". ಪೂಜ್ಯ ಮಂತ್ರ ಮಹರ್ಷಿಗಳಿಂದ ಮುಂದುವರಿದ "ಗುರುಪರಂಪರೆಯಲ್ಲಿ ಇಪ್ಪತ್ತನೆಯ ಶತಮಾನದ 'ಅಗ್ರಮಾನ್ಯ' ಗುರುಶ್ರೇಷ್ಠರು ಪೂಜ್ಯ ಶ್ರೀ ರಾಜೇಂದ್ರ ಮಹಾಸ್ವಾಮಿಗಳವರು. ಅವರ "ಎಡಗೈ.... ಬಲಗೈ"ಯಾಗಿ ಸಾಧನೆ ಮಾಡಿದವರು ಲಿಂ. ಪೂಜ್ಯ ಶ್ರೀ ಪ್ರಭುಸ್ವಾಮಿಗಳು (ಚಾಲ್ತಿಯಲ್ಲಿ) ಕ್ಯಾತನಹಳ್ಳಿ ಬುದ್ಧಿಯವರು. 'ಅವರ ನೆಲೆ – ಅಂದಿನ ಕ್ಯಾತನಹಳ್ಳಿ ಸಂಸ್ಕೃತ ಪಾಠಶಾಲೆ ಮತ್ತು ಪ್ರಸಾದ ಮಂದಿರ. ನನ್ನಂಥ ನೂರಾರು ಬಡ ವಿದ್ಯಾರ್ಥಿಗಳಿಗೆ, ಅವರಿಬ್ಬರೇ "ತಂದೆ-ತಾಯಿ" – ಆಲಂಕಾರಿಕವಾಗಿಯಲ್ಲ, ಅರ್ಥಪೂರ್ಣವಾಗಿ. ಅವರಿಬ್ಬರೂ ಈಗ ಇಲ್ಲ, ನಾವೆಲ್ಲ ತಬ್ಬಲಿಗಳು! ಆದರೆ, ಆ ಪುಣ್ಯಪುರುಷರ ನೆನಪು - ಮಾತು-ಕೃತಿ-ಆದರ್ಶಗಳು ನಮಗೀಗ 'ತಾಯಿ-ತಂದೆ! ಶ್ರೀ ಸುತ್ತೂರು ಸಂಸ್ಥಾನ ಮಠ ಅಂದು ಕೈಕೊಂಡ ಶಿಕ್ಷಣ-ಸಂಸ್ಕೃತಿ-ಸಾಹಿತ್ಯ ಸೇವೆಯಿಂದ ಒದಗಿದ ಲಾಭಗಳು ಅನೇಕ. ನೂರಾರು ಸಮಾಜ ಸೇವಕರನ್ನು, ನೂರಾರು ಅಧ್ಯಾಪಕ - ಪ್ರಾಧ್ಯಾಪಕ - ಕವಿ - ಲೇಖಕರನ್ನು, ರಾಜಕೀಯ ನಾಯಕರನ್ನು ಈಗ ನಾಡಿನ ತುಂಬ ಕಾಣಬಹುದು. ಹತ್ತಾರು ಸ್ವಾಮಿಗಳು ಶ್ರೀಮಠದ 'ಆದರ್ಶ'ದಂತೆ, ಧರ್ಮ-ಸಮಾಜ-ಶಿಕ್ಷಣ ಸೇವೆಯನ್ನು ಮುಂದುವರಿಸಿರುವರು. ಅಂದು 'ಬಸವ ಕಲ್ಯಾಣ' ಮಾದರಿಯ ಏಕಮಾತ್ರ ಕೇಂದ್ರವಾಗಿದ್ದರೆ, ಇಂದು, ಸುತ್ತೂರು, ಸಿದ್ಧಗಂಗೆ, ಚಿತ್ರದುರ್ಗ, ಗದಗ, ಧಾರವಾಡ, ಬೆಳಗಾವಿ, ಬಳ್ಳಾರಿ, ಶಿವಮೊಗ್ಗ, ಬೀದರ, ಬೆಂಗಳೂರು ಮತ್ತು ಪಂಚಪೀಠಾಧೀಶರ ಕೇಂದ್ರ ಹಾಗೂ ಶಾಖೆಗಳು – ಈ ಸಮಾಜೋಧಾರ್ಮಿಕ - ಶೈಕ್ಷಣಿಕ 'ಕಾಯಕ'ವನ್ನು ವೈವಿಧ್ಯಮಯವಾಗಿ, ವ್ಯಾಪಕವಾಗಿ – ಅರ್ಥಪೂರ್ಣವಾಗಿ ಮುನ್ನಡೆಯಿಸಿ, ರಾಷ್ಟ್ರಮಟ್ಟದ ಕೀರ್ತಿ ಪಡೆದಿರುವುದು ಹೆಮ್ಮೆಯ ವಿಷಯ. ಈ ಎಲ್ಲ ಸಾಧನೆಗಳಿಗೆ ಮುಖ್ಯ ಕಾರಣ – ಅಂದಂದಿನ ಅಗತ್ಯಗಳಿಗೆ ಸ್ಪಂದಿಸಿ, ತಮ್ಮ ಕ್ರಿಯಾಶೀಲ ದೂರದರ್ಶಿತ್ವದಿಂದ ಮುನ್ನಡೆಸಿದ ಪುಣ್ಯಪುರುಷ ಪರಂಪರೆಯ ಮಹನೀಯರಾದ ಪೂಜ್ಯ ಶ್ರೀಗಳವರು. ಅದೊಂದು ದೊಡ್ಡ ಇತಿಹಾಸ.



## ಪುಣ್ಯ ಹಣ್ಣಾದ ಪುಣ್ಯಾತ್ಮರು

ಪ್ರಕೃತ ನಮ್ಮ ಮೈಸೂರಿನ ಸುತ್ತೂರು ಸಂಸ್ಥಾನ ಮಠ ಇಪ್ಪತ್ತನೆಯ ಶತಮಾನದಲ್ಲಿ "ಸಾಧಿಸಿದ ಭವ್ಯತೆ"ಗೆ ಮುಖ್ಯ ಕಾರಣ. ಪೂಜ್ಯ ಶ್ರೀ ರಾಜೇಂದ್ರ ಸ್ವಾಮಿಗಳು ಮತ್ತು ಪೂಜ್ಯ ಶ್ರೀ ಕ್ಯಾತನಹಳ್ಳಿ ಬುದ್ಧಿಯವರು. ಈಚೆಗೆ ಲಿಂಗೈಕ್ಯರಾದ 'ಕ್ಯಾತನಹಳ್ಳಿ ಬುದ್ದಿ'ಯವರು – ಸುತ್ತೂರು ಸಂಸ್ಥಾನದ ಇತಿಹಾಸದಲ್ಲಿ 'ಮರೆಯಲಾರದ-ಮರೆಯಬಾರದ-ಕ್ರಿಯಾಶೀಲ ಶ್ರೀಗಳು' ಅಂದಿನ ಅನುಭಾವದ ಗೌರೀಶಂಕರವೇ ಆದ ಪೂಜ್ಯ ಶ್ರೀ ಗವಿಮಠದ ಗೌರೀಶಂಕರ ಮಹಾಸ್ವಾಮಿಗಳ 'ಪ್ರಭಾವಳಿ'ಯಲ್ಲಿ, ಬೆಳಗಿದ ಶ್ರೀ ಸುತ್ತೂರು ಸಂಸ್ಥಾನಕ್ಕೆ 'ಶೈಕ್ಷಣಿಕ ಸೇವೆಯ ವಿಸ್ತರಣೆ - ಅದಕ್ಕೆ ಮೂಲವಾದ 'ಪ್ರಸಾದನಿಲಯ'ಗಳ ಸ್ಥಾಪನೆ, ತನ್ಮೂಲಕ ಗ್ರಾಮೀಣ ಮಕ್ಕಳಿಗೆ 'ಸಂಸ್ಕಾರ-ಶಿಕ್ಷಣ-ಅವಕಾಶ'ಗಳನ್ನು ಕರುಣಿಸುವ ವಿಶಾಲ ದೃಷ್ಟಿಕೋನ ಬೆಳೆದು "ಸಾಮಾಜಿಕ ಶಾಂತ ಕ್ರಾಂತಿ"ಯನ್ನೇ ಮಾಡಿದುದು ಚರಿತ್ರಾರ್ಹ ಸಾಧನೆ. ಈ ಸಾಧನೆಗೆ "ಮೌನಕಾಯಕಯೋಗಿ"ಯಂತೆ, ಯಾವ ಸ್ಥಾನ-ಮಾನ-ಬೆಲೆ-ಗೌರವವನ್ನು ಅಪೇಕ್ಷಿಸದೆ ದುಡಿದ ಪುಣ್ಯಾತ್ಮರು ಶ್ರೀ ಕ್ಯಾತನಹಳ್ಳಿ ಪ್ರಭುಸ್ವಾಮಿಗಳವರು. ನಿನ್ನೆ-ಮೊನ್ನೆಯವರೆಗೆ ಮೈಸೂರಿನ ಬೆಟ್ಟದ ಪಾದದ ಶ್ರೀ ಸುತ್ತೂರು ಸಂಸ್ಥಾನ ಶಾಖಾ ಮಠದ 'ಕರ್ಣಧಾರತ್ವ' ಅವರದಾಗಿದ್ದಿತು. ಇಂದಿನ ಪರಮಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಶ್ರೀಗಳ ರಾಷ್ಟ್ರ-ರಾಜ್ಯ-ಅಂತಾರಾಷ್ಟ್ರ ವೈಶಾಲ್ಯಕ್ಕೆ ಹಬ್ಬಿ-ಹಸರಿಸುತ್ತಿರುವ "ಶರಣ ಸಂಸ್ಕೃತಿ ಪ್ರಸಾರ" ಮತ್ತು "ವೀರಶೈವ ಧರ್ಮ-ತತ್ವಜ್ಞಾನ ಪ್ರಸಾರ" ಕಾರ್ಯದ ಹಿಂದೆ, 'ಕಾಣದ ಕಾಯುವ ಕೈ' ಪೂಜ್ಯ ಶ್ರೀ ಪ್ರಭುಸ್ವಾಮಿಗಳು. ಶ್ರೀಮಠಕ್ಕೆ ಬರುವ ಎಲ್ಲ ಪೂಜ್ಯರ ಪೂಜಾ ವ್ಯವಸ್ಥೆ, ಗಣ್ಯ-ಮಾನ್ಯರ ಪ್ರಸಾದ-ದರ್ಶನ ಜವಾಬ್ದಾರಿ, ಅಲ್ಲದೆ ಸಂಸ್ಥಾನದ ಅಧಿಕಾರಿಗಳ, ನೌಕರರ, ಭಕ್ತಾದಿಗಳ 'ವಾಮಕ್ಷೇಮ' ಪೂಜ್ಯರದೇ! ಮಹಾಸಂಸ್ಥಾನದ ಎಲ್ಲ ಉತ್ಸವ, ಕಾರ್ಯಕ್ರಮ, ಜಾತ್ರೆ, ಶಿಕ್ಷಣ-ಪ್ರಸಾದ ಮುಂತಾದ ಎಲ್ಲ ಬಹುಮುಖ ಚಟುವಟಿಕೆಗಳ "ಗರುಡದೃಷ್ಟಿ" ಶ್ರೀಗಳದೇ ಆಗಿದ್ದಿತು. ಶ್ರೀ ಕ್ಯಾತನಹಳ್ಳಿ ಬುದ್ಧಿಯವರ "ಪೂಜೆ-ಪ್ರಸಾದ-ವಿಶ್ರಾಂತಿ"ಗಳನ್ನು ಕಂಡವರು ಯಾರೂ ಇಲ್ಲ. ಅದೆಲ್ಲ ಅವರ ನಿತ್ಯ ಬದುಕಿನ ಸೇವಾ ಕಾಯಕದೊಳಗು? ಒಂದರ್ಥದಲ್ಲಿ ಅವರು ಶ್ರೀಮಠಕ್ಕೆ ಮರುಳಶಂಕರದೇವತ್ವದ ಸೇವೆ, ಮಡಿವಾಳ ಮಾಚಯ್ಯಗಳ ಕ್ರಿಯಾಶೀಲತೆ, ಕಲ್ಯಾಣದ ಮಹಾಮನೆಯ ಅಕ್ಕನಾಗಮ್ಮನ 'ಮನೆವಾಳ್ತನ'ದ 'ಹಿರಿಯತನ'ಗಳ ಮುಪ್ಪುರಿಶಕ್ತಿಯ ಸ್ವರೂಪರಾಗಿದ್ದರು! ಅವರಿಂದ ತೆರವಾದ 'ಈ ಸ್ಥಳ' ತುಂಬಬಲ್ಲ ದಿವ್ಯಚೇತನ..... ಬಹುಶಃ ಬರಲಿಕ್ಕಿಲ್ಲ ಎಂಬುದೇ ದೊಡ್ಡ ಕೊರತೆ. ಪೂಜ್ಯ ಶ್ರೀ ಆದಿ ಜಗದ್ಗುರುವೇ ನಿತ್ಯಮಾರ್ಗದರ್ಶನ ನೀಡುವರೆಂಬ ನಂಬಿಕೆ–ಭರವಸೆ. ಪೂಜ್ಯ ಶ್ರೀ ಪ್ರಭುಸ್ವಾಮಿಗಳು ಈ ಸಂಸ್ಥಾನದ ಪುಣ್ಯ ಪರಂಪರೆಯ ಪೂಜ್ಯರುಗಳ ಸಾಲಿನಲ್ಲಿ ನಮಗೆಲ್ಲ ನಿತ್ಯ ಸ್ಮರಣೀಯರಾಗಿ, ನೆನಪುಗಳ ತೆರೆತೆರೆಯಲ್ಲಿ ಮುಖದೋರುವರು.

## ನೆನಪು ನಂದಾದೀಪ

ಅಂದು ರಾತ್ರಿ 12 ಗಂಟೆ ಸಮಯ. ನಮ್ಮ ಮನೆಯ ದೂರವಾಣಿ ಕರೆ ಬಂದಾಗ "ಕ್ಯಾತನಹಳ್ಳಿ ಪ್ರಭುಸ್ವಾಮಿಗಳು ಲಿಂಗೈಕ್ಯರಾದರಂತೆ, ಮೈಸೂರಿನಿಂದ ಕರೆ ಬಂದಿದೆ, ನಿಮಗೆ ತಿಳಿಸಲು" ಎಂದಾಗ ಒಂದು ಕ್ಷಣ ಸ್ಥಂಭೀಭೂತನಾದೆ! ಐವತ್ತು ವರ್ಷಗಳ ಹಿಂದಿನ ನನ್ನ ಮೈಸೂರು ವಿದ್ಯಾರ್ಥಿ ಜೀವನದ ನೆನಪುಗಳು ಚಿಮ್ಮಿದುವು.... ನನ್ನ ದಿನಚರಿಯ ಪುಟಗಳನ್ನು, ಮತ್ತೆ ಮತ್ತೆ ತಿರುವುಹಾಕಿದೆ! ಅಲ್ಲೆಲ್ಲ ರಾಜೇಂದ್ರ ಶ್ರೀಗಳ, ಪ್ರಭುಸ್ವಾಮಿಗಳ ಮಾತೃಹೃದಯ, ಕರ್ತವ್ಯ ನಿರ್ದೇಶನ, ಕಿರಿಯರನ್ನು ಪ್ರೇರೇಪಿಸುವ ನೂರಾರು ಸಂಗತಿಗಳ ದಾಖಲೆ ಇದೆ. ಪ್ರತಿವರ್ಷ ಸಮಸ್ತ ವಿದ್ಯಾರ್ಥಿಗಳೆಲ್ಲರು ಸಾಮೂಹಿಕವಾಗಿ ಆಚರಿಸುತ್ತಿದ್ದ ಶಿವರಾತ್ರಿ ಉತ್ಸವ; ಪ್ರತಿವರ್ಷ ವಿಶ್ವವಿದ್ಯಾನಿಲಯದ ಪದವೀದಾನ ಸಮಾರಂಭದ ನಂತರ, ತಪ್ಪದೆ ನೆರವೇರಿಸುತ್ತಿದ್ದ ವೀರಶೈವ ಪದವೀಧರ ವಿದ್ಯಾರ್ಥಿಗಳ ಸ್ನೇಹಕೂಟ, ಪೂಜ್ಯ ಶ್ರೀ ಗೌರೀಶಂಕರ ಶ್ರೀಗಳ ಆಶೀರ್ವಚನ, ಪ್ರೊ. ಮರುಳಸಿದ್ದಯ್ಯ (ಸಂಸ್ಕೃತ ಪ್ರಾಧ್ಯಾಪಕ + ವಾರ್ಡನ್) ಮುಂತಾದವರ ಮಾರ್ಗದರ್ಶನ, ಮಾತುಗಳನ್ನು ಮರೆವುದೆಂತು! ಆಗ ನನ್ನ ಮನಸ್ಸಿನಲಿ ಮೂಡಿದ ಭಾವಗಳನ್ನು ಶ್ರೀಗಳಿಗೆ ಪತ್ರದ ಮೂಲಕ ತಿಳಿಸಿದೆ. ಅದು ಇಂತಿದೆ:

ಪರಮಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು
ಶ್ರೀ ಸುತ್ತೂರು ಸಂಸ್ಥಾನ ಮಠ, ಮೈಸೂರು

ಪೂಜ್ಯರೆ,

ಪೂಜ್ಯ ಶ್ರೀ ಕ್ಯಾತನಹಳ್ಳಿ ಶ್ರೀ ಶಿವಪ್ರಭುಸ್ವಾಮಿಗಳು ಲಿಂಗೈಕ್ಯರಾದ ಸುದ್ದಿ ನನಗೆ, ನನ್ನ ಪರಿವಾರದ ಮಿತ್ರರಿಗೆ ತುಂಬ ದುಃಖದ ಸಂಗತಿಯಾಯಿತು. ನಮ್ಮ ವಿದ್ಯಾರ್ಥಿದೆಸೆಯ ಅನೇಕ ನೆನಪುಗಳು ಮೂಡಿಬಂದುವು. ಶ್ರೀ ಸುತ್ತೂರು ಸಂಸ್ಥಾನ ಮಠದ ಒಳ್ಳೆಯ ಅರ್ಥದಲ್ಲಿ - King Pin (ಮುಖ್ಯ ರೂವಾರಿ)ಯಾಗಿದ್ದ ಶ್ರೀಗಳು ವಿದ್ಯಾರ್ಥಿಗಳಾದ ನಮಗೆ ಹಸಿವೆಯಾದಾಗ ತಾಯಿಯಾಗಿ, ಖಾಯಿಲೆ ಆದಾಗ ವೈದ್ಯರಾಗಿ, ಸಂಕಟದಲ್ಲಿ ಸಿಲುಕಿದಾಗ ಪರಿಹಾರಕ ಗುರು ಆಗಿದ್ದವರು. ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ನಿಕಟವರ್ತಿಯಾಗಿ, ಮಹಾಸಂಸ್ಥಾನದ ಎಲ್ಲ ಸಂಗತಿಗಳ ಮೇಲ್ವಿಚಾರಕರಾಗಿ, ನಿತ್ಯ ನಗೆಮುಖದ ಶ್ರೀಗಳು ನಮಗೆ ಇಂದಿಗೂ ನಿತ್ಯಸ್ಮರಣೀಯರು.

ಬಳ್ಳಾರಿಯಿಂದ ಬಂದಿದ್ದ ನಾನು ಮುದ್ದುಬಸಯ್ಯ, ಮರುಳಸಿದ್ದಯ್ಯ ಮುಂತಾದ 4-6 ವಿದ್ಯಾರ್ಥಿಗಳು ತಿಂಗಳಿಗೆ ರೂ. 2/- ರಂತೆ ಕೊಡಬೇಕಾದ Light Fee ಕೊಡಲಿಲ್ಲವೆಂದು ನಮಗೆ ಅಂದಿನ ಮೇನೇಜರ್ ಊಟ ನಿಲ್ಲಿಸಿರುವರೆಂದು complain ಮಾಡಲು ವಿನಾಯಿತಿ ಕೇಳಿಕೊಳ್ಳಲು ಹಿರಿಯ ಶ್ರೀಗಳ ಕಡೆಗೆ ಹೋದಾಗ ವಿಷಯ ತಿಳಿದ ಕೂಡಲೇ 'ಯಾವನವ



ಮಕ್ಕಳಿಗೆ ಊಟ ನಿಲ್ಲಿಸಿದವ' – ಇರಲಿ, ಹೋಗಿ ಇಲ್ಲೇ ಮೊದಲು ಊಟ ಮಾಡಿ ಬನ್ನಿ... ಶ್ರೀಗಳನ್ನು ಕಾಣುವಿರಂತೆ ಎಂದ ತಾಯಿ ಹೃದಯ ಅವರದು. ನಂತರ ಶ್ರೀಗಳಲ್ಲಿ ವಿನಂತಿ ಮಾಡಿ, ನಮಗೆ ವಿನಾಯಿತಿ ಕೊಡಿಸಿದ್ದರು ಪೂಜ್ಯ ಕ್ಯಾತನಹಳ್ಳಿ ಶ್ರೀಗಳು.

ಪೂಜ್ಯ ಶ್ರೀ ಗೌರೀಶಂಕರಸ್ವಾಮಿಗಳವರ 'ಬಹುದೊಡ್ಡ ಆರಾಧನೆಯಲ್ಲಿ, Main Buildingನ ನಮ್ಮ ಅಭ್ಯಾಸಕ್ಕೆ ತೊಂದರೆ ಆಗಬಾರದೆಂದು, ಪೂಜ್ಯ ಕ್ಯಾತನಹಳ್ಳಿ ಬುದ್ದಿಯವರು ತಾವೇ ನಿಂತು, ನಮಗೆಲ್ಲ ಪ್ರಸಾದ ಬಡಿಸಿ, ನಂತರ ಪೂಜೆಗೆ ಹೋದ ವಿಷಯ ಮರೆಯುವುದೆಂತು?

ಅನೇಕ ವರ್ಷಗಳ ನಂತರ, ಶ್ರೀಮಠಕ್ಕೆ ಹಳೆಯ ವಿದ್ಯಾರ್ಥಿಗಳು ನನ್ನಂಥವರು ಭೇಟಿಕೊಟ್ಟಾಗ – ಅವರನ್ನೆಲ್ಲ, ಹೆಸರಿನಿಂದಲೇ ಕರೆದು ಕ್ಷೇಮ ವಿಚಾರಿಸುತ್ತಿದ್ದರು. ನಮ್ಮ ಪ್ರಗತಿಯನ್ನು ಕೇಳಿ 'ಹಡೆದ ತಂದೆ'ಯಂತೆ ಆನಂದಿಸಿ, ಆಶೀರ್ವದಿಸಿ 'ಹೂ' ಮೊದಲು ಪ್ರಸಾದ ತಗೊಳ್ಳಿ ಎನ್ನುತ್ತಿದ್ದರು ಶ್ರೀಗಳು.

ಒಂದು ವಿನಂತಿ: ಪೂಜ್ಯ ಶ್ರೀ ಕ್ಯಾತನಹಳ್ಳಿ ಬುದ್ದಿಯವರ ಬಗೆಗೆ ಒಂದು ಪುಸ್ತಕ ನೆನಪಿನ ಸಂಗತಿಗಳು ಅವರ ಸಾಧನೆಗಳು ಐತಿಹಾಸಿಕ – ಮಹತ್ವವಾದುವು. ಅವೆಲ್ಲ ಈಗ ಅಪತ್ರಿಕಾ ವಾರ್ತೆಗಳು! ಆದರೆ ಅವುಗಳಿಗೆಲ್ಲ ಐತಿಹಾಸಿಕ ಮಹತ್ವ ಬರುತ್ತದೆ ಮುಂದೆ.

ಶತಾಯುಷಿ ಪೂಜ್ಯ ಶ್ರೀ ಶಿವಕುಮಾರ ಶ್ರೀಗಳವರ ನೇತೃತ್ವದಲ್ಲಿ 'ಪುಣ್ಯಾರಾಧನೆ'ಯ ಧಾರ್ಮಿಕ ಸಭೆ ಸಾಂಗವಾಗಲೆಂದು ಹಾರೈಸುವೆ.

ಶರಣು ಶರಣಾರ್ಥಿಗಳು

**ತಮ್ಮ ಎಸ್.ಎಂ. ವೃಷಬೇಂದ್ರಸ್ವಾಮಿ**

ಹೀಗೆ ನಿಜವಾದ ಶರಣರಂತೆ, ಪುಣ್ಯಪುರುಷರಂತೆ, ಶಿಷ್ಯ-ಮಿತ್ರ-ಸಮಾಜ ಕ್ಷೇಮಕ್ಕಾಗಿ 'ಗಂಧದಕೊರಡಿ'ನಂತೆ ತಾವು ಸವೆದುಕೊಂಡು ಸಾವಿರಾರು ವಿದ್ಯಾರ್ಥಿಗಳಿಗೆ ಪುಣ್ಯಪ್ರದ ಬದುಕಿನ ದಾರಿ ತೋರಿದ ಪೂಜ್ಯ ಶ್ರೀ ಕ್ಯಾತನಹಳ್ಳಿ ಪ್ರಭುಸ್ವಾಮಿಗಳ ಜೀವನ ಸಾಧನೆ-ಪುಣ್ಯ ಹಣ್ಣಾದ ಪುಣ್ಯಾತ್ಮರ ಸಾಧನೆಯಲ್ಲವೆ? ಆ ದಿವ್ಯ ಚೇತನಕ್ಕೆ ಶರಣು ಶರಣಾರ್ಥಿ.

□

# ಶ್ರೀಮಠದ ಪ್ರಗತಿಗೆ ತಮ್ಮ ಜೀವನ ಮುಡಿಪಾಗಿಟ್ಟಿದ್ದ ಶ್ರೀ ಶಿವಪ್ರಭುಸ್ವಾಮಿಗಳವರು

**ಡಾ. ಚನ್ನಬಸಪ್ಪ**

97 ವರ್ಷಗಳು ತುಂಬು ಜೀವನ ನಡೆಸಿ 14.2.2010 ರಂದು ರಾತ್ರಿ 9 ಗಂಟೆಗೆ ಲಿಂಗೈಕ್ಯರಾದ ಪರಮಪೂಜ್ಯ ಶ್ರೀ ಕ್ಯಾತನಹಳ್ಳಿ ಶಿವಪ್ರಭುಸ್ವಾಮಿಯವರು ಅಸ್ತಂಗತವಾದ ವಾರ್ತೆಯನ್ನು ಕೇಳಿ ನಮ್ಮೆಲ್ಲರಿಗೆ ಅತ್ಯಂತ ಮರೆಯದ ಅಪಾರ ದುಃಖವಾಯಿತು. ಇವರು ಗುರುಭಕ್ತಿಗೆ ಹೆಸರಾದ ಸುತ್ತೂರು ಶರಣ ದಂಪತಿಗಳಾದ ಶ್ರೀ ಗುರುಸಿದ್ಧದೇವರು, ಸಿದ್ಧಲಿಂಗಮ್ಮನವರ ಸುಪುತ್ರರಾಗಿ ಜನಿಸಿ ಶ್ರೀ ಶಿವರಾತ್ರಪ್ಪನೆಂಬ ನಾಮಾಂಕಿತದಿಂದ ಪ್ರಖ್ಯಾತರಾದರು. ಬಾಲ್ಯದಿಂದಲೂ ಪರಮಪೂಜ್ಯ ಸುತ್ತೂರು ಚಿಕ್ಕಸ್ವಾಮೀಜಿಯವರ ಜೊತೆಯಲ್ಲಿ ಬೆಳೆದರು. ಇವರು ಚಿಕ್ಕಸ್ವಾಮಿಯವರಿಗಿಂತ ನಾಲ್ಕು ವರುಷ ಹಿರಿಯರು. ಸಣ್ಣ ವಯಸ್ಸಿನಿಂದಲೂ ಚಿಕ್ಕ ಸ್ವಾಮೀಜಿಯವರಂತೆ ಇವರೂ ಕೂಡ ಶಿವಪೂಜೆ, ಶಿವಧ್ಯಾನ ಮತ್ತು ಆಧ್ಯಾತ್ಮ ವಿಷಯಗಳಲ್ಲೂ ಆಸಕ್ತಿಯುಳ್ಳವರಾಗಿದ್ದರು. ಅಲ್ಲದೆ ಸದಾ ಚಿಕ್ಕಸ್ವಾಮಿಯವರ ಜೊತೆಯಲ್ಲಿ ಆಟಪಾಠಗಳಲ್ಲೂ ಜೊತೆಗೂಡುತ್ತಿದ್ದರು, ಅಲ್ಲದೆ ಪ್ರಾಥಮಿಕ ವಿದ್ಯಾಭ್ಯಾಸವನ್ನು ಇಬ್ಬರೂ ಸ್ವಾಮಿಯವರು ಸುತ್ತೂರಿನಲ್ಲಿ ಮುಗಿಸಿದರು. ಮಂತ್ರಮಹರ್ಷಿ ಹಿರಿಯ ಸ್ವಾಮಿಯವರ ಕೃಪಾಶೀರ್ವಾದದಂತೆ ಸಂಸ್ಕೃತ ವಿದ್ಯಾಭ್ಯಾಸವನ್ನು ಇಬ್ಬರೂ ಸ್ವಾಮಿಯವರು ಮೈಸೂರಿನಲ್ಲಿ ವಿದ್ವಾನ್ ಬಸವರಾಜಶಾಸ್ತ್ರಿಗಳು ಮತ್ತು ಅತ್ಯಂತ ಪಾಂಡಿತ್ಯವುಳ್ಳ ನಮಶ್ಶಿವಾಯ ಮಠದ ಸೋಮಶೇಖರ ಸ್ವಾಮಿಯವರ ನೇತೃತ್ವದಲ್ಲಿ ಅಭ್ಯಾಸ ಹೊಂದಿದರು. ಅಲ್ಲದೆ ಮೊದಲಿನಿಂದಲೂ ವಿದ್ಯಾಭ್ಯಾಸದಲ್ಲಿ ಆಸಕ್ತಿಯುಳ್ಳವರಾಗಿ, ಶ್ರದ್ಧೆ, ನಿಷ್ಠೆ, ದುಡಿಮೆಗೆ ಹೆಸರಾಗಿ ಒಳ್ಳೆಯ ವಾಗ್ಮಿಗಳಾಗಿದ್ದರು. ಮಂಡ್ಯ ಜಿಲ್ಲೆಯ ಪಾಂಡವಪುರದ ಕ್ಯಾತನಹಳ್ಳಿಯ ಧಾರ್ಮಿಕ ಪ್ರವೃತ್ತಿಗೆ ಹೆಸರಾದ ಸಾಹುಕಾರ್ ಸಿದ್ದಲಿಂಗಯ್ಯನವರು ಸುತ್ತೂರು ಮಠದ ಭಕ್ತರು. ಇವರು ಸಂಸ್ಕೃತ ವಿದ್ಯಾಭ್ಯಾಸ ಮಾಡುವ ಬಡ ವಿದ್ಯಾರ್ಥಿಗಳಿಗೆ ಅಶನವಸತಿಗಾಗಿ ಒಂದು ಕಟ್ಟಡವನ್ನು ಖರೀದಿಸಿ ಮಂತ್ರಮಹರ್ಷಿಗಳಿಗೆ ಅರ್ಪಿಸಿದರು. ಮತ್ತು ಸಂಸ್ಕೃತ ಪಾಠಶಾಲೆ ನಡೆಸಲು ಕೋರಿಕೊಂಡರು. ಅದರಂತೆ ಹಿರಿಯ ಸ್ವಾಮಿಯವರು ಅದರ ನಿರ್ವಹಣೆಯನ್ನು ಕಿರಿಯ ಸ್ವಾಮೀಯವರಾದ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಯವರಿಗೆ ವಹಿಸಿಕೊಟ್ಟರು. ಅವರೊಡನೆ ಅವರ ಒಡನಾಡಿಗಳಾದ ಶಿವರಾತ್ರಪ್ಪನವರೂ ನೋಡಿಕೊಳ್ಳಲು ತಿಳಿಸಿದರು. ಅಲ್ಲದೆ ಕ್ಯಾತನಹಳ್ಳಿ ಸಿದ್ಧಲಿಂಗಯ್ಯನವರು ಕ್ಯಾತನಹಳ್ಳಿಯಲ್ಲಿ ಒಂದು ಮಠವನ್ನು ಕಟ್ಟಿಸಿ



ಅಲ್ಲಿಗೆ ಪಟ್ಟಾಧಿಕಾರ ಮಾಡಲು ಒಬ್ಬರು ಸೂಕ್ತ ವ್ಯಕ್ತಿಗಳನ್ನು ನಿಯಮಿಸಿಕೊಡಲು ದೊಡ್ಡ ಸ್ವಾಮಿಯವರನ್ನು ಕೋರಿಕೊಂಡರು. ದೊಡ್ಡ ಸ್ವಾಮಿಯವರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಯವರ ಒಡನಾಡಿಯಾಗಿದ್ದ ಶಿವರಾತ್ರಪ್ಪನವರನ್ನು ಮುಂದೆ ಶಿವಪ್ರಭುಸ್ವಾಮಿಯೆಂದು ಹೆಸರಿಸಿ ಕ್ಯಾತನಹಳ್ಳಿ ಮಠಕ್ಕೆ ಪಟ್ಟಾಧಿಕಾರ ಮಾಡಿದರು. ಕ್ಯಾತನಹಳ್ಳಿ ಪಾಠಶಾಲೆಯಲ್ಲಿ ಒಂದು ಭಾಗದಲ್ಲಿ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಯವರು ಪಾಠಶಾಲೆ ವ್ಯವಹಾರ ನೋಡಿಕೊಂಡು ಇವರ ಒಡನಾಡಿಯಾಗಿದ್ದ ಕ್ಯಾತನಹಳ್ಳಿ ಸ್ವಾಮಿಯವರೂ ಇವರ ಜೊತೆಯಲ್ಲಿಯೂ ಪಾಠಶಾಲೆ ವ್ಯವಹಾರಗಳಲ್ಲಿ ಭಾಗಿಗಳಾಗಿ ಆಗಾಗ್ಗೆ ಕ್ಯಾತನಹಳ್ಳಿ ಮಠಕ್ಕೆ ಹೋಗಿ ಬರುತ್ತಿದ್ದರು. ಕ್ಯಾತನಹಳ್ಳಿ ಬುದ್ಧಿಯವರೆಂದು ಕರೆಯಲ್ಪಟ್ಟರು. ಅಲ್ಲದೆ ಇವರು ಶಿವರಾತ್ರಿ ರಾಜೇಂದ್ರ ಸ್ವಾಮಿಯವರ ಜೊತೆಯಲ್ಲೆ ಜೆಎಸ್‌ಎಸ್ ಇಂಜಿನಿಯರಿಂಗ್ ಕಾಲೇಜು, ಜೆಎಸ್‌ಎಸ್ ಆಸ್ಪತ್ರೆ, ಕಾಲೇಜು, ಅನ್ಯ ಸಂಸ್ಥೆಯ ಕಟ್ಟಡಗಳನ್ನು ನಿರ್ಮಿಸುವಾಗ ತಾವು ನಿತುಕೊಂಡು ಸಲಹೆ ನೀಡುತ್ತಿದ್ದರು. ಅಲ್ಲದೆ ಜಗದ್ಗುರುಗಳವರ ಪೂಜೆ, ಪ್ರಸಾದ ಸೇವನೆ ಮಾಡಲು ಒತ್ತಾಯಿಸಿ ಅವರ ಆರೋಗ್ಯ ಪರಿಪಾಲನೆಗೂ ಸಹಾಯಕರಾಗಿದ್ದರು. ಸಂಸ್ಕೃತ ಪಾಠಶಾಲೆಯಲ್ಲಿ ಅಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿಗಳು ಬೆಳಗ್ಗೆ ಐದು ಗಂಟೆಗೆ ಸಾಯಂಕಾಲ ಏಳು ಗಂಟೆಗೆ ಖಡ್ಡಾಯವಾಗಿ ಪ್ರಾರ್ಥನೆಯಲ್ಲಿ ಭಾಗವಹಿಸಬೇಕಾಗಿತ್ತು. ಕ್ಯಾತನಹಳ್ಳಿ ಸ್ವಾಮಿಯವರು ಇದನ್ನು ನೋಡಿಕೊಳ್ಳುತ್ತಿದ್ದರು. ಇಲ್ಲಿ ಅಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿಗಳು ಬೆಳಗ್ಗೆ 7 ರಿಂದ 10 ಗಂಟೆಯವರೆಗೆ ಸಂಸ್ಕೃತ ಅಭ್ಯಾಸ ಮಾಡಿ ಅನಂತರ ಸ್ಕೂಲು, ಕಾಲೇಜುಗಳಿಗೆ ಹೋಗುತ್ತಿದ್ದರು. ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಯವರು, ಶ್ರೀ ಕ್ಯಾತನಹಳ್ಳಿ ಸ್ವಾಮಿಯವರು ರಾತ್ರಿ ವೇಳೆ ಕೊಠಡಿಗಳಿಗೆ ಅನಿರೀಕ್ಷಿತ ಭೇಟಿಕೊಟ್ಟು ವಿದ್ಯಾರ್ಥಿಗಳು ಸರಿಯಾಗಿ ಅಭ್ಯಾಸ ಮಾಡುತ್ತಿದ್ದಾರೆಯೇ ಎಂದು ನೋಡಿ ಎಚ್ಚರ ಕೊಡುತ್ತಿದ್ದರು. ವಿಶೇಷ ದಿನಗಳಲ್ಲಿ ಗುರುಗಳಿಬ್ಬರೂ ಗಣ್ಯ ವ್ಯಕ್ತಿಗಳನ್ನು, ವಿದ್ವಾಂಸರುಗಳನ್ನು, ಪ್ರವಚನಕಾರರನ್ನು ಪಾಠಶಾಲೆಗೆ ಕರೆಸಿ ಆಧ್ಯಾತ್ಮ ವಿಷಯಗಳ ಬಗ್ಗೆ ಉಪನ್ಯಾಸ ಏರ್ಪಡಿಸುತ್ತಿದ್ದರು. ಅನಂತರ ವಿಶೇಷ ಭೋಜನ ಏರ್ಪಡಿಸಿ ಗಣ್ಯ ವ್ಯಕ್ತಿಗಳೊಡನೆ ವಿದ್ಯಾರ್ಥಿಗಳಿಗೂ ಭೋಜನದ ಏರ್ಪಾಡು ಮಾಡುತ್ತಿದ್ದರು. ಪೂಜ್ಯ ಶಿವರಾತ್ರಿ ಸ್ವಾಮಿಯವರ ದರ್ಶನಕ್ಕಾಗಿ ಬರುವವರನ್ನು ಮಾತನಾಡಿಸಿ ತಿಳಿವಳಿಕೆ ಕೊಟ್ಟು ಕಳುಹಿಸುತ್ತಿದ್ದರು. ಅವಶ್ಯವಿದ್ದರೆ ಪೂಜ್ಯ ಸ್ವಾಮೀಜಿಯವರನ್ನು ನೋಡಲು ಕಳುಹಿಸುತ್ತಿದ್ದರು. ಅವರಿಗೆ ಪರಿಶ್ರಮವಾಗದಂತೆ ನೋಡಿಕೊಳ್ಳುತ್ತಿದ್ದರು. ಅಲ್ಲದೆ ಹಾಸ್ಟೆಲ್ಲುಗಳ ಮೇಲ್ವಿಚಾರಣೆ, ಕಾಲೇಜುಗಳ ಮೇಲ್ವಿಚಾರಣೆ, ಶಿವರಾತ್ರೀಶ್ವರ ಜಯಂತಿ, ಜಾತ್ರೆ ಮುಂತಾದವುಗಳಲ್ಲಿ ಪೂಜ್ಯರಿಗೆ ಹೊರೆಯಾಗದಂತೆ ತಮ್ಮನ್ನು ಪೂಜ್ಯರ ಜೊತೆಯಲ್ಲಿ ತೊಡಗಿಸಿಕೊಂಡು ಸಂಸ್ಥೆಗಳ ಹಣಕಾಸು ವಿಷಯದಲ್ಲಿ ಎಚ್ಚರಿಕೆ ವಹಿಸಿ ಹಣ ಪೋಲಾಗದಂತೆ ನೋಡಿಕೊಳ್ಳುತ್ತಿದ್ದರು. ಸಂಸ್ಥೆಗಳು ಬೆಳೆದಂತೆ ಪೂಜ್ಯ ಶಿವರಾತ್ರಿ ರಾಜೇಂದ್ರ ಸ್ವಾಮಿಯವರು ಹಗಲಿರುಳು ತಮ್ಮನ್ನು ಅರ್ಪಿಸಿಕೊಂಡಂತೆ ಕ್ಯಾತನಹಳ್ಳಿ

ಬುದ್ದಿಯವರು ಅವರೊಡನೆ ತಮ್ಮ ಶರೀರವನ್ನು ಸಂಸ್ಥೆಗಳ ಕೆಲಸಕಾರ್ಯಗಳಲ್ಲಿ ತೊಡಗಿಸಿಕೊಂಡು, ಜಗದ್ಗುರುವರ್ಯರ ಆರೋಗ್ಯಭಾಗ್ಯದ ಬಗ್ಗೆ ವೈದ್ಯರ ಸಲಹೆಯಂತೆ ಪ್ರತಿದಿನ ಸಾಯಂಕಾಲ ಗಾಳಿ ಸೇವನಾರ್ಥ ಹೋಗುತ್ತಿದ್ದಾಗ ಸದಾ ಅವರ ಜೊತೆಯಲ್ಲಿಯೇ ಹೋಗುತ್ತಿದ್ದರು. ಒಂದು ದಿವಸ ಹವಾಸೇವನಾರ್ಥ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಹೋಗಿದ್ದಾಗ ಕಾರನ್ನು ಸ್ವಲ್ಪ ದೂರದಲ್ಲಿ ನಿಲ್ಲಿಸಿ ಎಂದರೆ ಸುಮಾರು ಎರಡು ಕಿಲೋಮೀಟರ್ ದೂರದಲ್ಲೆ ನಿಲ್ಲಿಸಿ ನಡೆದುಹೋಗುತ್ತಿದ್ದಾಗ ಪರಮಪೂಜ್ಯರಿಗೆ ಉಬ್ಬಸ ಉಂಟಾಯಿತು, ಕ್ಯಾತನಹಳ್ಳಿ ಸ್ವಾಮಿಯವರಿಗೆ ಮಾರ್ಗ ತೋಚದಂತಾಯಿತು, ಗಾಬರಿಗೊಂಡು ಹೇಗೆ ಹೋಗುವುದು ಎಂದು ಮನಸ್ಸುಮಾಡಿ ಪೂಜ್ಯ ಗುರುವರ್ಯರನ್ನು ಹೆಗಲ ಮೇಲೆ ಹೊತ್ತುಕೊಂಡು ಕಾರಿನ ಹತ್ತಿರ ಬಂದರು. ನಂತರ ಮಠಕ್ಕೆ ಬಂದಮೇಲೆ ಪರಮ ಪೂಜ್ಯರು ಕ್ಯಾತನಹಳ್ಳಿ ಬುದ್ದಿಯವರಿಗೆ ವಂದಿಸಿದರು. ಶಿವರಾತ್ರೀಶ್ವರ ಜಾತ್ರೆ, ಜಯಂತಿ ಇವುಗಳಲ್ಲಿ ಕಾಯ, ವಾಚಾ, ಮನಸಾ ತಮ್ಮನ್ನು ತೊಡಗಿಸಿಕೊಂಡಿರುತ್ತಿದ್ದರು. ಜಯಂತಿ ಮಹೋತ್ಸವ ಸಂದರ್ಭದಲ್ಲಿ ಪೂಜ್ಯಪಾದರನ್ನು ಬೆಳ್ಳಿಯ ಸಿಂಹಾಸನದ ಮೇಲೆ ಕುಳ್ಳಿರಿಸಿ, ಕಿರೀಟಧಾರಣೆ ಮಾಡುವುದು, ರುದ್ರಾಕ್ಷಿಮಾಲೆ, ಮುದ್ರೆ ಉಂಗುರ ಧರಿಸುವುದು ಮುಂತಾದ ಸಂದರ್ಭಗಳಲ್ಲೂ ಕ್ಯಾತನಹಳ್ಳಿ ಸ್ವಾಮಿಯವರ ಪಾತ್ರ ಸದಾ ನೆನೆಯುವಂತದ್ದು.

ಪೂಜ್ಯ ಜಗದ್ಗುರು ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರು ಜೂನ್ ಎಂಬತ್ತಾರರಲ್ಲಿ ಒಂದು ತಿಂಗಳು ಲಂಡನ್, ಅಮೆರಿಕ, ಮುಂತಾದ ಕಡೆ ಪ್ರವಾಸ ಕೈಗೊಂಡಿದ್ದಾಗ ಅವರು ಹಿಂದಿರುಗುವವರೆಗೂ ಕ್ಯಾತನಹಳ್ಳಿ ಸ್ವಾಮಿಯವರು ಅವರೊಡನೆ ದಯಮಾಡಿಸಿ ಅವರ ಆರೋಗ್ಯದ ಕಡೆ ಗಮನ ಹರಿಸಿ ನಿಗ ಇಡುತ್ತಿದ್ದರು. ಅಲ್ಲದೆ ಸ್ವಾಮೀಜಿಯವರು ಎಲ್ಲಾ ಪ್ರವಾಸಗಳಲ್ಲಿಯೂ ಅವರೊಡನೆ ಎಡಬಿಡದೆ ಅವರ ಪೂಜೆ ಪ್ರಸಾದದ ಕಡೆ ನಿಗಾ ಇಡುತ್ತಿದ್ದರು ಮತ್ತು ಎಚ್ಚರಿಸುತ್ತಿದ್ದರು.

ದಿನಾಂಕ 5.12.86ರ ಸಂಜೆ ಪೂಜ್ಯ ಜಗದ್ಗುರುವರ್ಯರು ಅಸ್ವಸ್ತರಾಗಿ ತೀರ್ವ ಹೃತ್ ಶೂಲೆ ಉಂಟಾದಾಗ ಕ್ಯಾತನಹಳ್ಳಿ ಶ್ರೀಗಳವರ ದುಗುಡ, ಆತಂಕ ಹೇಳತೀರದು, ದಿನಾಂಕ 6.12.86 ನೆಯ ಮುಂಜಾನೆ ಜಗದ್ಗುರುವರ್ಯರು ಲಿಂಗೈಕ್ಯರಾದರು ಎಂಬ ದಾರುಣ ವಾರ್ತೆ ಎಲ್ಲಾ ಕಡೆ ಹಬ್ಬಿದಾಗ ಉಂಟಾದ ದುಃಖ ಅಪಾರ ಅತ್ಯಂತ, ಈ ಸಂದರ್ಭದಲ್ಲಿ ಕ್ಯಾತನಹಳ್ಳಿ ಬುದ್ದಿಯವರು ಕೆಲವು ದಿವಸ ಪೂಜೆ, ಪ್ರಸಾದ ಸೇವಿಸುವುದನ್ನೆ ತ್ಯಜಿಸಿದರು. ಪೂಜ್ಯ ಕ್ಯಾತನಹಳ್ಳಿ ಬುದ್ದಿಯವರು ಆಶ್ರಮದಲ್ಲಿ ಶಿವಪೂಜೆ, ಶಿವಧ್ಯಾನದಲ್ಲಿ ಮಗ್ನರಾಗಿ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಅಪೇಕ್ಷೆಯಂತೆ ಹಿರಿಯರಾಗಿ ಮಠಕ್ಕೆ ಶ್ರೇಯಸ್ಸನ್ನ ಹರಸುತ್ತಿದ್ದರು. ಅಲ್ಲದೆ ಸಂಸ್ಥೆಗಳ ಅಭಿವೃದ್ಧಿಗಾಗಿ ಪೂಜ್ಯ ಜಗದ್ಗುರುಗಳೊಡನೆ ಶ್ರಮಿಸಿದ್ದಾರೆ. ನೋಡಲು ಕೆಲವು ವೇಳೆ ಕಠಿಣವಾಗಿ ಕಂಡರೂ ಅವರ ಮನಸ್ಸು ಮೃದುವಾಗಿತ್ತು. ಇದನ್ನೇ ಮಹಾತ್ಮರು ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ ಎಂದಿರುವಂತೆ ಇವರ ಮನಸ್ಸು



ಇತ್ತು. ಅವಶ್ಯವಿದ್ದಾಗ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಇವರ ಸಲಹೆ ಪಡೆಯುತ್ತಿದ್ದರು. ಇವರು ಸಂಸ್ಥೆಗಳ ಸಮಾರಂಭಗಳಲ್ಲಿ ಭಾಗಿಗಳಾಗುತ್ತಿದ್ದರು. ಸರ್ವೇಜನಾಃ ಸುಖಿನೋ ಭವಂತು ಎಂಬ ಉದಾತ್ತ ಧ್ಯೇಯವುಳ್ಳವರಾಗಿ ಅವರ ದೇಹವನ್ನು ಮಠದ ಕೆಲಸಕಾರ್ಯಗಳಿಗೆ ಅರ್ಪಿಸಿಕೊಂಡರು. ಇವರ ನೆನಪು ಮಠದಲ್ಲಿ ಹಸಿರಾಗಿ ಉಳಿದಿರುತ್ತದೆ. ಇವರ ಕೃಪಾಶೀರ್ವಾದಗಳು ನಮ್ಮೆಲ್ಲರ ಶಿರಸ್ಸಿನ ಮೇಲೆ ಸದಾ ನೆಲಸಲೆಂದು ಶ್ರೀ ಶಿವರಾತ್ರೀಶ್ವರರನ್ನು ಬೇಡಿಕೊಳ್ಳುತ್ತೇನೆ.

□

ನರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡುವೋಗದ ಮುನ್ನ,
ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ,
ಕಾಲಮೇಲೆ ಕೈಯನೂಱಿ ಕೋಲ ಹಿಡಿಯದ ಮುನ್ನ,
ಮುಪ್ಪಿಂದೊಪ್ಪವಳಿಯದ ಮುನ್ನ, ಮೃತ್ಯು ಮುಟ್ಟದ ಮುನ್ನ
ಪೂಜಿಸು ಕೂಡಲಸಂಗಮದೇವನ.

**- ಬಸವಣ್ಣ**

ಅಂಗ ಕ್ರಿಯಾಲಿಂಗವ ವೇಧಿಸಿ
ಅಂಗ ಲಿಂಗದೊಳಗಾಯಿತು.
ಮನ ಅಱಿವ ಬೆರೆಸಿ ಜಂಗಮ ಸೇವೆಯ ಮಾಡಿ
ಮನ ಜಂಗಮ ಲಿಂಗದೊಳಗಾಯಿತು.
ಭಾವ ಗುರುಲಿಂಗದೊಳಗೆ ಬೆರೆಸಿ ಮಹಾಪ್ರಸಾದವ ಭೋಗಿಸಿ
ಭಾವ ಗುರುಲಿಂಗದೊಳಗಾಯಿತು.
ಚನ್ನಮಲ್ಲಿಕಾರ್ಜುನಾ, ನಿಮ್ಮ ಒಲುಮೆಯಿಂದ ಸಂದಳಿದು
ಸ್ವಯಲಿಂಗವಾದೆನಯ್ಯಾ ಪ್ರಭುವೆ.

**- ಅಕ್ಕಮಹಾದೇವಿ**

# ನಾನು ಕಂಡಂತೆ ಕ್ಯಾತನಹಳ್ಳಿ ಬುದ್ಧಿಯವರು

ಎ.ಎಸ್. ಜಯರಾಂ

ಇತ್ತೀಚೆಗೆ ಲಿಂಗೈಕ್ಯರಾದ ಪೂಜ್ಯ ಶಿವಪ್ರಭುಸ್ವಾಮಿಗಳು, (ಕ್ಯಾತನಹಳ್ಳಿ ಬುದ್ಧಿಯವರು) ಎಲೆಯ ಮರೆಯ ಹಣ್ಣಿನಂತೆ, ನೆಲದ ಮರೆಯ ನಿಧಾನದಂತೆ, ನೆನೆಯೊಳಗಣ ಕಂಪಿನಂತೆ ಇದ್ದವರು. ಅವರ ನಿಜ ವ್ಯಕ್ತಿತ್ವ, ಘನತೆ ಎದ್ದುಕಾಣುತ್ತಿರಲಿಲ್ಲ; ಕಾಣುತ್ತಿದ್ದುದು ಅವರ ಗಟ್ಟಿಮಾತಿನ, ದೃಢನಿಲುವಿನ ಚರದೇಹ ಮಾತ್ರ, ಅನೇಕರ ಪಾಲಿಗೆ ಕಂಡದ್ದು ಅಷ್ಟೆ.

ಆದ್ದರಿಂದ ಸಾಮಾನ್ಯವಾಗಿ ಅವರ ಬಗ್ಗೆ ಭಯಮಿಶ್ರಿತ ಭಕ್ತಿ. ಅಳುಕು; ಅವರನ್ನು ನಿವಾರಿಸಿಕೊಂಡು ಶ್ರೀ ರಾಜೇಂದ್ರ ಸ್ವಾಮಿಗಳನ್ನು ಸಂದರ್ಶಿಸಿದರೆ ತಮ್ಮ ಬೇಡಿಕೆ ಈಡೇರುತ್ತದೆ ಎಂಬ ಅನಿಸಿಕೆ ಆ ಕಾಲದಲ್ಲಿ ಬಹಳಷ್ಟು ಭಕ್ತರಲ್ಲಿ, ಆರ್ತರಲ್ಲಿ, ನೌಕರವರ್ಗದಲ್ಲಿ ವಿದ್ಯಾರ್ಥಿವೃಂದದಲ್ಲಿ ಇದ್ದದ್ದು ನಿಜ. ಮಂದಿ, ತಮ್ಮ ತಮ್ಮ ಖಾಸಗಿ ಚರ್ಚೆಯಲ್ಲಿ ಅವರನ್ನು ಕುರಿತು "ವೀರಭದ್ರ", "ನಂದಿ" ಎಂದವರುಂಟು ; "ಮುಳ್ಳುಬೇಲಿ" ಎಂದು ಮೂಗು ಮುರಿದವರೂ ಉಂಟು.

ಆದರೆ ಅಂಥ ನಿಷ್ಠುರ ವ್ಯಕ್ತಿತ್ವವನ್ನು ತಾನಾಗಿ ಆರೋಪಿಸಿಕೊಂಡು, ಅವರು ಸಂಸ್ಥೆಗಾಗಿ ಮಾಡಿದ ಮಹೋಪಕಾರ, ಸೇವೆ ಅನನ್ಯವಾದುದು, ವಿಶಿಷ್ಟವಾದುದು. (ಲೋಕದ ಕಣ್ಣಿಗೆ ಮರುಳಾಗಿ ತೋರುವುದು ಶರಣ ಚಾರಿತ್ರ)

ಕಳೆದ ಸುಮಾರು ಐವತ್ತೈದು ವರ್ಷಗಳಿಂದ ನಾನು ಅವರನ್ನು ದೂರದಿಂದ, ಹತ್ತಿರದಿಂದ ಕಂಡಿದ್ದೇನೆ. ಆದ್ದರಿಂದ ಅವರ ಬಗ್ಗೆ ನಾಲ್ಕು ಮಾತು ಬರೆಯುವ ಅರ್ಹತೆ ಇದೆ ಎಂದುಕೊಂಡಿದ್ದೇನೆ. ಆ ಧೈರ್ಯದಿಂದಲೇ ನೆನಪಿನ ಉಗ್ರಾಣಕ್ಕೆ ಕೈ ಹಚ್ಚಿದ್ದೇನೆ.

ನಾನು ಅವರನ್ನು ಹತ್ತಿರದಿಂದ ಕಂಡದ್ದು 1963-64ರ ಸುಮಾರಿಗೆ. ಲಿಂಗೈಕ್ಯ ಜಗದ್ಗುರು ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ನೆರಳಿನಂತೆ, ಸಹವರ್ತಿಯಾಗಿ, ಸಮೀಪವರ್ತಿಯಾಗಿ ಸುಮಾರು ಅರ್ಧಶತಮಾನಗಳಷ್ಟು ಕಾಲಾವಧಿ, ಅವರ ಬೆಂಬಿಡದೆ, ಕಣ್ಣೆವೆ ಕಣ್ಣನ್ನು ಕಾಯುವಂತೆ ಅವರನ್ನು ಕಾಯುತ್ತ, ಅವರ ಪರೋಕ್ಷದಲ್ಲಿ ತೀವ್ರ ಯಾತನೆಯನ್ನು ನುಂಗುತ್ತ ಶೇಷಾಯುಷ್ಯವನ್ನು ಮುಗಿಸಿದವರು ಕ್ಯಾತನಹಳ್ಳಿ ಬುದ್ಧಿಯವರು.

1963-64 ರಲ್ಲಿ, ಅಂದಿನ 'ಆನೆಕರೋಟಿ' ಆವರಣದಲ್ಲಿ ಜೆಎಸ್‌ಎಸ್ ವಿದ್ಯಾಸಂಸ್ಥೆ ನಿಧಾನವಾಗಿ ಕಾಲೂರುತ್ತಿತ್ತು. ನಾನು ಕಂಡಾಗ ಆ ವಿಶಾಲ ಆವರಣದಲ್ಲಿ (ಇಂದಿನ



ಜೆಎಸ್‌ಎಸ್ ಆಸ್ಪತ್ರೆ ಸಮುಚ್ಚಯದ ಪ್ರದೇಶ) ಒಂದು ಮೂಲೆಯಲ್ಲಿ ಹಳೆಯ ಕಟ್ಟಡದ ಭಾಗದಲ್ಲಿ ಪ್ರಸಾದನಿಲಯ. ಮತ್ತೊಂದು ಕಡೆ ಹೊಸದಾಗಿ ಎದ್ದ, ನೆಲ ಅಂತಸ್ತಿನ ಜೆಎಸ್‌ಎಸ್ ಪ್ರೌಢಶಾಲೆ, ಜೆಎಸ್‌ಎಸ್ ಪ್ರೌಢಶಾಲೆಗೆ ಆಗತಾನೆ ಹನ್ನೊಂದನೆಯ ತರಗತಿ (ಒಂದು ವರ್ಷದ ಪದವಿಪೂರ್ವ ತರಗತಿಗೆ ಪರ್ಯಾಯವಾಗಿ) ತೆರೆಯಲು ಅನುಮತಿ ದೊರೆತಿತ್ತು.

ಪ್ರೌಢಶಾಲೆಯ ಬಹುಪಾಲು ವಿದ್ಯಾರ್ಥಿಗಳು ಪ್ರಸಾದನಿಲಯದ ಆಸರೆಯನ್ನು ನೆಮ್ಮಿ, ಗ್ರಾಮಾಂತರಗಳಿಂದ, ವಿದ್ಯೆಯನ್ನು ಮುಂದುವರಿಸಲು, ಮೈಸೂರಿಗೆ ಬಂದವರು. 'L' ಆಕಾರದ ನೆಲ ಅಂತಸ್ತಿನ ಹೊಸ ಕಟ್ಟಡದಲ್ಲಿ ಪ್ರೌಢಶಾಲಾ ತರಗತಿಗಳು ನಡೆಯುತ್ತಿದ್ದವು. ಮುಖ್ಯೋಪಾಧ್ಯಾಯರ ಕೊಠಡಿ, ಅಧ್ಯಾಪಕರ ಕೊಠಡಿ, ಕಾರ್ಯಾಲಯ, ತರಗತಿಗಳು, ಪ್ರಯೋಗಾಲಯ – ಎಲ್ಲವು ಇನ್ನು ಸುಣ್ಣ ಬಣ್ಣ ಕಾಣದ ಆ ಹತ್ತಾರು ಕೊಠಡಿಗಳಲ್ಲೇ!

ಆದರೆ ಅತ್ಯಂತ ಉತ್ಸಾಹಿಗಳಾದ, ಪ್ರಾಮಾಣಿಕರಾದ, ಯುವಕರೂ, ಮಧ್ಯವಯಸ್ಕರು, ಹಿರಿಯರು ಅಧ್ಯಾಪಕ ವೃಂದದಲ್ಲಿದ್ದರು. ಇಂದು, ಬೃಹದಾಕಾರವಾಗಿ, ಶಾಖೋಪಶಾಖೆಯಾಗಿ ನೂರೆಂಟು ಶಿಕ್ಷಣದ ಶಿಸ್ತುಗಳಿಗೆ ಮೈಚಾಚಿಕೊಂಡಿರುವ ಜೆಎಸ್‌ಎಸ್ ಮಹಾವಿದ್ಯಾಪೀಠದ ಬೀಜಾಂಕುರವಾದುದು ಬಹುಶಃ ಇಲ್ಲಿ.

ಆಗ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿ, ಬಹುಶಃ ನಿವೃತ್ತಿಯ ಅನಂತರ ಮರು ನೇಮಕಗೊಂಡ, ಅನುಭವಿ ಶ್ರೀ ಕುಡುಬಿಯವರಿದ್ದರು. ಅವರ ದಕ್ಷ ತಂಡದಲ್ಲಿ, ದೇವರಾಜಮೂರ್ತಿ, ಮಲ್ಲಪ್ಪ, ಗೋಪಿನಾಥ್, ಶ್ರೀನಿವಾಸಮೂರ್ತಿ, ಸುಬ್ರಹ್ಮಣ್ಯಂ, ಸಾಕಮ್ಮ, ಶಾಂತಾ, ಮೊದಲಾದ ಉತ್ತಮ ಶಿಕ್ಷಕರಿದ್ದರು. ಶಾಲೆ ಉತ್ತಮ ಫಲಿತಾಂಶ ಪಡೆದು ಪ್ರಸಿದ್ಧವಾಗಿತ್ತು.

ಶಾಲೆಗೆ ಸರ್ಕಾರದ ಪೂರ್ಣಪ್ರಮಾಣದ ಅನುದಾನ ಲಭ್ಯವಾಗದೆ ಇದ್ದ ಕಾಲದಲ್ಲಿ, ಆಡಳಿತ ಮಂಡಲಿಯ ಸಂಕಷ್ಟದಲ್ಲಿ ಪಾಲುಗಾರರಾಗಿ, ಸ್ವಸಂತೋಷದಿಂದ ವೃತ್ತಿಬದ್ಧತೆಯುಳ್ಳ ಕಾಯಕ ಸಿದ್ಧರಾದ ಶಿಕ್ಷಕವೃಂದವೇ ಅಲ್ಲಿದ್ದುದು ಒಂದು ಅಪೂರ್ವ ಯೋಗ!

ಆ ದಿನಗಳಲ್ಲಿ 'ಕ್ಯಾತನಹಳ್ಳಿಯವರು' ಶಾಲೆಯ ಮೊಗಸಾಲೆಯಲ್ಲಿ ಕಾಣಿಸಿಕೊಳ್ಳುತ್ತ, ಅಡ್ಡಾಡುತ್ತಿರುವ ವಿದ್ಯಾರ್ಥಿಗಳನ್ನು ಕರೆದು ಯಾವ ತರಗತಿ! ಅಧ್ಯಾಪಕರಿಲ್ಲವೆ? ಯಾರು ಅಧ್ಯಾಪಕರು? ಬಿಡುವಿದ್ದರೆ ಲೈಬ್ರರಿಗೆ ಹೋಗು ಎಂದು ಆದೇಶಿಸುತ್ತ ಇಡೀ ವಾತಾವರಣವನ್ನೇ ಪ್ರಭಾವಿಸುತ್ತಿದ್ದರು. ವಿರಾಮ ವೇಳೆಯಲ್ಲಿ ಹತ್ತಾರು ಬಾರಿ ಕಾಫಿ/ಸಿಗರೇಟು ಸೇವನೆಗೆ, ಗುಂಪುಗೂಡಿಕೊಂಡು ಹೊರಗೆ ಹೋಗುತ್ತಲಿದ್ದ ಅಧ್ಯಾಪಕರು ಸ್ವಾಮೀಜಿಯವರನ್ನು ಕಂಡೊಡನೆ ನಮಸ್ಕರಿಸಿ, ಅಧ್ಯಾಪಕರ ಕೊಠಡಿ ಸೇರಿಕೊಳ್ಳುತ್ತಿದ್ದರು.

ಆ ದಿನಗಳಲ್ಲೆ ಮೈಸೂರು ನಗರವಾಸಿಯಾದ ನಾನು ಬೆಂಗಳೂರಿನ ಕಾಲೇಜೊಂದರಲ್ಲಿ ಒಂದು ವರ್ಷ ಉಪನ್ಯಾಸಕನಾಗಿ ದುಡಿದು ಕೌಟುಂಬಿಕ ಒತ್ತಡಗಳ ನಿಮಿತ್ತ ಮತ್ತೆ ಮೈಸೂರಿಗೆ

ಬಂದು, ಈ ಪ್ರೌಢಶಾಲೆಯಲ್ಲಿ ಕನ್ನಡ ಅಧ್ಯಾಪಕನಾಗಿ ಸೇರಿಕೊಂಡಿದ್ದೆ.

ಅದೇ ವರ್ಷ ಪ್ರೌಢಶಾಲೆಯ ಕಟ್ಟಡದಲ್ಲೆ ಕಾಲೇಜು ತರಗತಿಗಳು ಪ್ರಾರಂಭವಾದುವು. ಹೊಸ ಕಾಲೇಜಿನಲ್ಲಿ ಒಂದು ವರ್ಷದ ಪಿ.ಯು. ತರಗತಿಯು, ಸಮಾನಾಂತರವಾಗಿ ಪ್ರೌಢಶಾಲೆಯಲ್ಲಿ ಹನ್ನೊಂದನೆಯ ತರಗತಿಯು ನಡೆಯುತ್ತಿದ್ದವು. ಆಗ ಹೊಸದಾಗಿ ಅಸ್ತಿತ್ವಕ್ಕೆ ಬಂದ ಕಾಲೇಜಿಗಾಗಿ, ಪ್ರೌಢಶಾಲೆಯ ಕೆಲವು ಕೊಠಡಿಗಳನ್ನು ತೆರವು ಮಾಡಿಕೊಡಬೇಕಾಯಿತು. ಅಲ್ಲದೆ ತುರ್ತಾಗಿ, ಕಾಲೇಜಿಗಾಗಿ ಅದೇ ಆವರಣದಲ್ಲಿ ಕೆಲವು ಕೊಠಡಿಗಳನ್ನು ನಿರ್ಮಿಸಬೇಕಾಗಿತ್ತು.

ತರಗತಿಗಳು ಜರುಗುತ್ತಿದ್ದ ಸಂದರ್ಭದಲ್ಲೇ, ಮೊದಲ ಅಂತಸ್ತಿನಲ್ಲಿ ಕಾಲೇಜಿಗಾಗಿ ಹೊಸ ಕೊಠಡಿಗಳನ್ನು ನಿರ್ಮಿಸುವ ಕಾಮಗಾರಿ ತುಂಬ ಬಿರುಸಿನಿಂದ ನಡೆಯುತ್ತಿತ್ತು. ಆ ಕಾಮಗಾರಿಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದ ಕಾವಿಧಾರಿ ಸ್ವಾಮಿಗಳೊಬ್ಬರು, ನಿಂತಲ್ಲಿ ನಿಲ್ಲದೆ, ಪಾದರಸದಂತೆ ಓಡಾಡುತ್ತ, ಕೆಲಸಗಾರರನ್ನು ಗದರಿಸುತ್ತ ಸೂಚನೆ ಕೊಡುತ್ತ, ದಿನವಿಡಿ ಬಿಸಿಲಿನಲ್ಲಿಯೇ, ಧೂಳಿನಲ್ಲಿಯೇ ಸೊರಗುತ್ತ, ಕಟ್ಟಡ ಕೆಲವೇ ತಿಂಗಳಲ್ಲಿ ಮೈನಿಮಿರಿ ನಿಲ್ಲುವಂತೆ 'ಪವಾಡ' ಎಸಗಿದರು. ಅವರೇ ಕ್ಯಾತನಹಳ್ಳಿ ಬುದ್ಧಿಯವರು. ಅಂದಿನ ಪ್ರಾರಂಭ ಕಾಲದಲ್ಲಿ, ವಿದ್ಯಾಪೀಠದ ಪರಿಮಿತ ಸಂಪನ್ಮೂಲ, ಸೀಮಿತ ಕಾಲಾವಕಾಶಗಳ ಹಿನ್ನೆಲೆಯಲ್ಲಿ ಬುದ್ಧಿಯವರ ದೂರದೃಷ್ಟಿ, ದೈಹಿಕ ಮಾನಸಿಕ ಶ್ರಮ, ಅದಮ್ಯವಾದ ಸಂಕಲ್ಪಶಕ್ತಿಯೇ, ದುಸ್ಸಾಧ್ಯವಾದುದನ್ನು ಸಾಧ್ಯಮಾಡಿ ತೋರಿಸಿತ್ತು. ನಾನು ಕಂಡ, ಇತರರು ಕ್ಷುಲ್ಲಕವೆನ್ನಬಹುದಾದ, ಕೆಲವು ಸಂಗತಿಗಳನ್ನು ಇಲ್ಲಿ ದಾಖಲಿಸುವುದು ಅಪ್ರಸ್ತುತವಾಗಲಾರದು. ಕಟ್ಟಡ ಕಾಮಗಾರಿಗಾಗಿ, ಶಾಲೆಯು ಮುಂದಿನ ಆವರಣದಲ್ಲಿ ಮರಳು, ಜಲ್ಲಿ, ಇಟ್ಟಿಗೆ, ಸಿಮೆಂಟು ರಾಶಿ ರಾಶಿ ಜಮಾವಣೆಯಾಗುತ್ತಿತ್ತು. ಶಾಲೆ ಬಿಟ್ಟಾಗ, ಆಟಗುಳಿ ವಿದ್ಯಾರ್ಥಿಗಳು ಜಲ್ಲಿಯನ್ನು ಮುಷ್ಟಿಯಲ್ಲಿ ಹಿಡಿದು ದೂರಕ್ಕೆ ತೂರುತ್ತಿದ್ದರು. ಕೆಲವು ಬಾಲಕರಂತು ಇಟ್ಟಿಗೆಯ ರಾಶಿಯ ಮೇಲೆ ಕುಣಿದಾಡಿ ಹತ್ತಾರು ಇಟ್ಟಿಗೆಗಳನ್ನು ಪುಡಿಗಟ್ಟಿದರು. ಎಲ್ಲಿಂದಲೋ ಧಾವಿಸಿ ಬಂದ ಸ್ವಾಮೀಜಿಯವರು ಆ ಬಾಲಕರನ್ನು ಹಿಡಿದು, ಗದರಿಸಿ, ಅವರಿಗೆ ಬುದ್ಧಿ ಹೇಳಿ, ಒಂದು ಇಟ್ಟಿಗೆ ಬೆಲೆ ಎಷ್ಟು ಗೊತ್ತಾ? "ಎಂಟಾಣೆ, ಎಂಟಾಣೆ" (ಅಂದಿನ ಬೆಲೆ) ಯಾರು ಕೊಡುವವರು? ಇನ್ನೊಮ್ಮೆ ನಿನ್ನನ್ನು ಇಲ್ಲಿ ಕಂಡರೆ ಮರಕ್ಕೆ ಕಟ್ಟಿಹಾಕಿಬಿಡುತ್ತೇನೆ ಎಂದು ಗದರಿಸುತ್ತಿದ್ದರು. ನಮಗೆ ಅಂದು ಅದು ವಿಚಿತ್ರವಾಗಿ ಕಾಣುತ್ತಿತ್ತು. ಆದರೆ ಅವರ ಎಚ್ಚರ, ಸಾತ್ತ್ವಿಕ ಕೋಪ, ಅಮೂಲ್ಯವಾದ ಮಠದ ಪಡಿಪದಾರ್ಥಗಳು ಅಪವ್ಯಯವಾಗಬಾರದೆಂಬ ಕಳಕಳಿ. – ಇವೆಲ್ಲ ಪ್ರಾಮಾಣಿಕ, ಕರ್ತವ್ಯನಿಷ್ಠ ಕಾಯಕ ತಪಸ್ವಿಗೆ ಮಾತ್ರ ಗೊತ್ತಿರಬಹುದಾದ ತತ್ತ್ವ ಎಂದು ಇಂದು ಅವರ ಬಗ್ಗೆ ಅಭಿಮಾನ, ಗೌರವ ಇಮ್ಮಡಿಯಾಗಿ ತಲೆಬಾಗುವಂತಾಗುತ್ತದೆ. ಇದು ಕ್ಯಾತನಹಳ್ಳಿ ಬುದ್ಧಿಯವರ ಪ್ರಚಾರ ಬಯಸದ ತಪಸ್ಸು.

ಇಂದು ಮುಗಿಲೆತ್ತರ, ಜಗದಗಲ ಬೃಹದಾಕಾರವಾಗಿ ವ್ಯಾಪಿಸಿರುವ ಜೆಎಸ್ಎಸ್



ವಿದ್ಯಾಪೀಠದ ಅಂಗಸಂಸ್ಥೆಗಳು ಅಂದು ಆಗತಾನೆ ಬೀಜಾಂಕುರಗೊಂಡು, ಕಾಲೂರುತ್ತಿದ್ದ, ತಲೆಯೆತ್ತುತ್ತಿದ್ದ ಪ್ರಾಥಮಿಕಾವಸ್ಥೆಯಲ್ಲಿ ಕ್ಯಾತನಹಳ್ಳಿ ಬುದ್ಧಿಯವರ, ಪ್ರಾಮಾಣಿಕ, ದಕ್ಷ ನಿರ್ವಹಣೆ, ನಿರಂತರ ಎಚ್ಚರ ಎಂಥ ಸದೃಢವಾದ ಬುನಾದಿಗೆ ಕಾರಣವಾಯಿತೆಂಬುದನ್ನು ಊಹಿಸಿಯೇ ತಿಳಿಯಬಹುದು.

ನಾನು ಜೆಎಸ್ಎಸ್ ಪ್ರೌಢಶಾಲೆಯಲ್ಲಿ ಕನ್ನಡ ಅಧ್ಯಾಪಕನಾಗಿ ಸೇರಿ, ಎರಡು ಮೂರು ತಿಂಗಳಾಗಿರಬೇಕು. ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗದಿಂದ, ಸಂಶೋಧನ ವಿದ್ಯಾರ್ಥಿಯಾಗಿ ನಾನು ಆಯ್ಕೆಯಾದ ಆದೇಶಪತ್ರ ನನ್ನ ಕೈ ತಲುಪಿತು. ಅದು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಪ್ರಥಮ ಬಾರಿಗೆ ದೊರೆತ ಶಿಷ್ಯವೇತನವಾಗಿತ್ತು. ಅದನ್ನು ನಾನು ಒಪ್ಪಿಕೊಳ್ಳುವುದಾದರೆ ಅಧ್ಯಾಪಕವೃತ್ತಿಗೆ ರಾಜೀನಾಮೆ ಕೊಡಬೇಕಾಗಿತ್ತು. ಶಾಲೆಯ ಮುಖ್ಯೋಪಾಧ್ಯಾಯರು, ನ್ಯಾಯವಾಗಿಯೇ ಶೈಕ್ಷಣಿಕ ವರ್ಷದ ಮಧ್ಯದಲ್ಲಿ ನನ್ನನ್ನು ಬಿಡುಗಡೆ ಮಾಡಲು ಸಿದ್ಧವಿರಲಿಲ್ಲ. ನಾನು ನನ್ನ ಶೈಕ್ಷಣಿಕ ಪ್ರಗತಿಯ ದೃಷ್ಟಿಯಿಂದ, ಲಾಭದಾಯಕವಾದ ಈ ಶಿಷ್ಯವೇತನವನ್ನು ಒಪ್ಪಿಕೊಳ್ಳಲು ಕಾತರನಾಗಿದ್ದು, ಪೂಜ್ಯ ರಾಜೇಂದ್ರ ಸ್ವಾಮೀಜಿಯವರಲ್ಲಿ ವಿನಂತಿಸಿಕೊಂಡೆ. ಅವರಿಗೆ ನನ್ನ ಸಂಕಟ ಅರ್ಥವಾಯಿತು. ಆದರೆ ಮಧ್ಯಂತರದಲ್ಲಿ ಅಧ್ಯಾಪಕರು ದೊರೆಯುವುದು ಕಷ್ಟ. ನೀನೇ ದಕ್ಷ ಅಧ್ಯಾಪಕರನ್ನು ನಿನ್ನ ಸ್ಥಾನದಲ್ಲಿ ತಂದಿರಿಸಿ ಬಿಡುಗಡೆ ಪಡೆಯಬಹುದೆಂದರು. ಇದು ಕ್ಯಾತನಹಳ್ಳಿ ಬುದ್ಧಿಯವರಿಗೆ ತಿಳಿಯಿತು. ನನ್ನ ಎದುರಿಗೆ ಬಂದು ನಿಂತು ನನ್ನನ್ನು ಕಟುವಾಗಿಯೇ ತರಾಟೆಗೆ ತೆಗೆದುಕೊಂಡರು.

"ಅಲ್ಕಣಯ್ಯ ನಿನಗೆ ಕೆಲ್ಸ ಬೇಕಾದಾಗ ಬಂದು ಕಾಲ್ಹಿಡಿತ್ತೀರಿ, ನೀವೇಗತಿ ಅಂತ..... ನಿಮಗೆ ಇನ್ನೆಲ್ಲೊ ಲಾಭವಾಗುವುದಾದರೆ ವಿದ್ಯಾರ್ಥಿಗಳನ್ನು ನಡುನೀರಲ್ಲಿ ಕೈ ಬಿಟ್ಟು ಪಲಾಯನ ಮಾಡ್ತೀರಿ.... ಅಹ್, ಅಹ್, ಭಲೆ! ಎಂಥ ಜಾಣಕಣಯ್ಯ...." ಎಂದು ಗುಡುಗಿದರು. ಅಂದು ನನಗೆ ಅವರ ಮಾತು ಕಹಿಯಾಗಿ ಕಂಡಿರಬೇಕು! ಆದರೆ ಅನಂತರ ಮತ್ತು ಈಗ ವಿಚಾರ ಮಾಡಿದರೆ. 'ಸ್ವಾಮಿಗಳ ಮಾತು ಎಷ್ಟು ನಿಜ. ನಾವು ಸ್ವಾರ್ಥಿಗಳು' ಎಂದು ಮನಸ್ಸು ಪಿಸುಗುಟ್ಟುತ್ತದೆ.

ಅಂತು ನಾನು ನನ್ನ ಗೆಳೆಯರೊಬ್ಬರನ್ನು ಒಪ್ಪಿಸಿ, ನನ್ನ ಸ್ಥಾನದಲ್ಲಿರಿಸಿ, ನಾನು ಬಿಡುಗಡೆ ಪಡೆದೆ. ಆದರೆ ಆಗ ಮತ್ತೊಂದು ಸಮಸ್ಯೆ ಉಳಿಯಿತು.

ಪಿ.ಯು.ಸಿ. ತರಗತಿಗೆ ಸಮನಾದ, ಪ್ರೌಢಶಾಲೆಯ ಹನ್ನೊಂದನೆಯ ತರಗತಿಗೆ ಬೋಧಿಸಲು ಸ್ನಾತಕೋತ್ತರ ಪದವೀಧರರೇ ಆಗಬೇಕೆಂಬ ನಿಯಮವಿತ್ತು. ಜೆಎಸ್ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳ ಹನ್ನೊಂದನೆಯ ತರಗತಿಗೆ ವಾರಕ್ಕೆ ನಾಲ್ಕು ಗಂಟೆ, ನಾನೇ ಬೋಧಿಸಬೇಕೆಂದು ಸೂಚಿಸಿದರು.

ಆಗ ಕ್ಯಾತನಹಳ್ಳಿ ಬುದ್ಧಿಯವರು, ಮುಖ್ಯೋಪಾಧ್ಯಾಯರೊಡನೆ ಚರ್ಚಿಸಿ, ವಾರಕ್ಕೆ

ನಾಲ್ಕು ದಿನ, ಸಂಜೆ 4 ರಿಂದ 5 ಗಂಟೆ, ಕೊನೆಯ ಪಿರಿಯಡ್ಡನ್ನು ನನಗೆ ಕೊಡುವಂತೆ ಏರ್ಪಾಡು ಮಾಡಿಕೊಟ್ಟರು. ನಾನು ಮಾನಸಗಂಗೋತ್ರಿಯಿಂದ, ಸೈಕಲ್ ತುಳಿಯುತ್ತಾ ಬಂದು ಆ ಕೊನೆಯ ಗಂಟೆ ಪಾಠವನ್ನು ತಪ್ಪದೆ ನಾಲ್ಕು ತಿಂಗಳಲ್ಲಿ ಮುಗಿಸಿಕೊಟ್ಟೆ.

ಇದೇ ಪ್ರಸ್ತಾವದಲ್ಲಿ ಈ ಹನ್ನೊಂದನೆಯ ತರಗತಿಯ ವಿದ್ಯಾರ್ಥಿಗಳಿಂದ ನನ್ನ ಪಾಠದ ಬಗ್ಗೆ ಮೆಚ್ಚುಗೆ ವ್ಯಕ್ತವಾದಾಗ, ಕ್ಯಾತನಹಳ್ಳಿ ಬುದ್ಧಿಯವರು ನನ್ನನ್ನು ಕರೆಯಿಸಿ ನಾಲ್ಕು ಒಳ್ಳೆಯ ಮಾತುಗಳನ್ನು ಆಡಲು ಸಹ ಮರೆಯಲಿಲ್ಲ. ಅದು ಅವರ ದೊಡ್ಡ ಗುಣ.

ಇನ್ನೊಂದು ಪ್ರಸಂಗವನ್ನು ಇಲ್ಲಿ ಸ್ಮರಿಸಿ ಈ ನೆನಪಿನ ಲಹರಿಯನ್ನು ನಿಲ್ಲಿಸಬಹುದೆಂದು ತೋರುತ್ತದೆ. ಯೋಗಾಯೋಗದಿಂದ ಮತ್ತೆ ನಾನು, 1967 ರಲ್ಲಿ ಜೆಎಸ್‌ಎಸ್ ವಿದ್ಯಾಸಂಸ್ಥೆಯ ಪದವಿ ಕಾಲೇಜು ಶಿಕ್ಷಣ ವ್ಯವಸ್ಥೆಯಲ್ಲಿ ಉಪನ್ಯಾಸಕನಾಗಿ ನೇಮಕಗೊಂಡು, ಪ್ರಾಚಾರ್ಯನಾಗಿ, ಪ್ರಾಂಶುಪಾಲನಾಗಿ ಅನೇಕ ಕರ್ತವ್ಯಗಳನ್ನು ನಿರ್ವಹಿಸಿ, ನನ್ನ ಮೈ ಮನಗಳನ್ನು ಪುಳಕಿಸಿಕೊಂಡು, ಧನ್ಯತೆಯಿಂದ ನಿವೃತ್ತನಾದೆ.

ಈ ಸೇವಾವಧಿಯಲ್ಲಿ ಒಂದು ಕಹಿ ಪ್ರಸಂಗ ಜರುಗಿತು. ಬಹುಶಃ 1975-76 ಇರಬೇಕು. ಶತಮಾನೋತ್ಸವ ಭವನದಲ್ಲಿ ಕುವೆಂಪು ಅಧ್ಯಕ್ಷತೆಯಲ್ಲಿ ಜರುಗಿದ ಜಾತಿ ವಿನಾಶಕ ಸಮ್ಮೇಳನದಲ್ಲಿ ಭಾಗವಹಿಸಿ, ಅದರ ಅಂಗವಾಗಿ ಮಾರನೆಯ ದಿನ ಹೊರಟ ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗವಹಿಸಿ, ಸಾಗುತ್ತಿದ್ದಾಗ, ಯಾರೋ ಕೆಲವು ಕಿಡಿಗೇಡಿಗಳು, ಮೆರವಣಿಗೆ ಸುತ್ತೂರು ಮಠದ ಮುಂದೆ ಬಂದಾಗ, ಶ್ರೀಮಠದ ವಿರುದ್ಧ ಅಚಾನಕವಾಗಿ ಘೋಷಣೆ ಕೂಗಿದರು. ಒಂದು ವರ್ಗದ ವಿದ್ಯಾರ್ಥಿಗಳು ಆ ಮೆರವಣಿಗೆಯಲ್ಲಿದ್ದ ನಮ್ಮನ್ನು ಖಂಡಿಸಿ ಮರು ಪ್ರತಿಭಟನೆ, ತರಗತಿ ಬಹಿಷ್ಕಾರ ಮಾಡಿದರು. ನಾನು ಮತ್ತು ನನ್ನ ಗೆಳೆಯ ಪ್ರೊ. ಬಿ. ಸೋಮಶೇಖರಪ್ಪ, ಆ ಮೆರವಣಿಗೆಯಲ್ಲಿದ್ದುದರಿಂದ, ವಿದ್ಯಾರ್ಥಿಗಳ ಆಕ್ರೋಶ ನಮ್ಮ ಮೇಲೆ ಎರಗಿತು.

ಅದು ವಿಚಾರಣೆಗೆ ಬಂದಾಗ, ನಾವು ಮುಗ್ಧರಾಗಿ (ದಡ್ಡರಾಗಿ?) "ನಮಗೆ ಇದು ಇಂಥ ಅಸಹ್ಯರೂಪ ತಾಳಬಹುದೆಂದು ಗೊತ್ತಿರಲಿಲ್ಲ" – ಎಂದು ನೊಂದುಕೊಂಡೆವು. ನಮ್ಮ ನಿಷ್ಠೆ, ನಮ್ಮ ವಿಚಾರಗಳನ್ನು ಸ್ಪಷ್ಟಪಡಿಸಿದೆವು. ಪೂಜ್ಯರಾದ ರಾಜೇಂದ್ರಸ್ವಾಮಿಗಳು ಅತ್ಯಂತ ಸಾವಧಾನಚಿತ್ತದಿಂದ ನಮ್ಮ ವಿವರಣೆಯನ್ನು ಆಲಿಸಿ, "ನೋಡಿ ಇದು ವಿದ್ಯಾರ್ಥಿಗಳ ಕೈಗೆ ಸಿಕ್ಕಿದೆ; ನೀವು ಅವರಿಗೆ ಸಮಜಾಯಿಸಿ ಕೊಡಿ" ಎಂದು ಸುಮ್ಮನಾದರು. ವಿದ್ಯಾರ್ಥಿನಾಯಕರ ಪ್ರತಿಭಟನೆ ನಮ್ಮ ವಿರುದ್ಧ ಕಾವು ಏರುತ್ತಿತ್ತು. ಈ ಸಂದರ್ಭದಲ್ಲಿ ಎಲ್ಲಿಂದಲೋ ಧಾವಿಸಿ ಬಂದ ಕ್ಯಾತನಹಳ್ಳಿಯವರು ನಮ್ಮಿಬ್ಬರನ್ನು ಕುರಿತು

"ಅಹ ಅಹ, ಕೇಳಪ್ಪ, ಇವರು ಪ್ರಾಜ್ಞರು, ಪ್ರೊಫೆಸರುಗಳು ವಿದ್ಯಾರ್ಥಿಗಳಿಗೆ ಪಾಠ ಹೇಳುವ ಬುದ್ಧಿವಂತರು, – ಏನು ಮಾಡಿದರೆ ಏನಾಗುತ್ತದೆ ಅಂತ ಗೊತ್ತಾಗದ ಮುಠ್ಠಾಳರು! ಯಾರೋ ಕರೆದರಂತೆ ಇವರು ಯೋಚಿಸದೆ ಸೇರಿಕೊಂಡರಂತೆ! – ಚೆನ್ನಾಗಿದೆ ಕಣ ನ್ಯಾಯ!" ಅಂತ ನಮ್ಮ ಮುಖಕ್ಕೆ ನೀರಿಳಿಸಿದರು. ಅವರ ಮಾತು ಪರುಷವಾಗಿತ್ತು. ಆದರೆ ಸತ್ಯವಾಗಿತ್ತು. ಪೂರ್ವಾಪರ ವಿವೇಚಿಸದೆ ಯಾವುದೋ ಗುಂಪಿನ ಜೊತೆ ಸೇರಿಕೊಂಡದ್ದು ನಮ್ಮ ಪಾಲಿನ ಮಹಾಪರಾಧವಾಗಿತ್ತು. ಇದು ಕ್ಯಾತನಹಳ್ಳಿ ಬುದ್ಧಿಯವರು. - ಸತ್ಯಪ್ರಿಯ, ನ್ಯಾಯನಿಷ್ಠುರ, ಕಾಯಕ ತಪಸ್ವಿಯ, ಬಣ್ಣದ ಮಾತು ಗೊತ್ತಿಲ್ಲದ, ನೇರ ನುಡಿಯ ಈ ಕಾವಿಧಾರಿಯ ನಡೆ, ನುಡಿ ಎಲ್ಲ ಗುಂಡು ಸಿಡಿದಂತೆ.



1960ರ ದಶಕದ ಮಾತು. ಸುತ್ತೂರು ಮಠದ ಉಚಿತ ಪ್ರಸಾದ ವ್ಯವಸ್ಥೆಯಿಂದ ಅಸಂಖ್ಯಾತ ವಿದ್ಯಾರ್ಥಿ ಸಮುದಾಯ ತನ್ನ ಅಶನ ಪ್ರಶ್ನೆಯನ್ನು ಪರಿಹರಿಸಿಕೊಂಡು ವಿದ್ಯಾರ್ಜನೆ ಮಾಡುತ್ತಿದ್ದರು. ನಗರದ ವಿವಿಧ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಈ ವ್ಯವಸ್ಥೆಯಿಂದ ಉಪಕೃತರಾದವರೇ! ದಿನ ದಿನ ಈ ಸಂಖ್ಯೆ ಏರುತ್ತಿತ್ತು. ಇಂಥ ಒಂದು ದಿನದಲ್ಲಿ ಪೂಜ್ಯ ಶಿವಪ್ರಭುಸ್ವಾಮಿಗಳು ಮಠದ ಆವರಣದಲ್ಲಿ, ಬಾಗಿಲ ಬಳಿ ಕುರ್ಚಿ ಹಾಕಿಕೊಂಡು ಕುಳಿತಿದ್ದಾರೆ – ಹತ್ತಾರು ವಿದ್ಯಾರ್ಥಿಗಳು ಪ್ರಸಾದ ವ್ಯವಸ್ಥೆ ಮಾಡಿಕೊಡಬೇಕೆಂದು ಪ್ರಾರ್ಥಿಸಲು ಬಂದಿದ್ದಾರೆ. ಅವರನ್ನು ಇವರು ಸುತ್ತೂರು ಶ್ರೀಗಳನ್ನು ಭೇಟಿಯಾಗಲು ಬಿಡಲೇ ಇಲ್ಲ. ಇವರೇ ಅವರು ಊರು, ವಿದ್ಯೆ, ಆರ್ಥಿಕ ಹಿನ್ನೆಲೆಯ ವಿವರಗಳನ್ನು ಪಡೆದುಕೊಂಡು "ನಾಳೆ ಬನ್ನಿ" ಎಂದು ವಾಪಸ್ಸು ಕಳುಹಿಸಿದರು. ಅವರು "ಬುದ್ಧಿ ನಿನ್ನೆಯು ಬಂದಿದ್ದೆವು" – ಎಂದರು.

"ಸರಿ, ಆಯ್ತು, ನಾಳೆ ಬನ್ನಿ ನೋಡೋಣ" – ಎಂದು ಕಳುಹಿಸಿದರು. ನನಗೆ ಹಿಂದಿನಿಂದ ಗೊತ್ತಾಯಿತು. ನಿಜವಾದ ಅರ್ಹ ಬಡ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವ ವಿಧಾನ ಇದು ಎಂದು. ನಿಜವಾದ ಅನಿವಾರ್ಯವಾದ ಅಗತ್ಯವಿದ್ದವರು ನಾಲ್ಕಾರುಬಾರಿ ಅಲೆಯುತ್ತಾರೆ, ಎಂದೂ, ಅಂಥವರಿಗೆ ಕೊಟ್ಟ ಅನ್ನದಾನ ಸಾರ್ಥಕ ಎಂಬ ತರ್ಕ ಉಪಾಯ ಇದು.

ಹೀಗೆ ಎಲ್ಲಿಂದಲೋ ಬಂದು (ಮಂಡ್ಯದ ಕ್ಯಾತನಹಳ್ಳಿ ಮಠದ ಹಿನ್ನೆಲೆ) ಸುತ್ತೂರು ಮಠದಲ್ಲಿ ಹತ್ತಾರು ವರ್ಷ ನಿಂತು, ತ್ರಿಕರಣಶುದ್ಧಿಯಿಂದ ಮಠದ ಸಾಧನಸಂಪತ್ತು ವ್ಯರ್ಥವಾಗದಂತೆ, ಅಹರ್ನಿಶೆ ಕಾಯಕನಿರತರಾಗಿದ್ದು, ಶ್ರೀಮಠದ ಗುಪ್ತಗಾಮಿನಿ ಶಕ್ತಿಧಾರೆಯಾಗಿದ್ದವರು ಕ್ಯಾತನಹಳ್ಳಿ ಬುದ್ಧಿಯವರು. ಅವರನ್ನು ಯಾರೊಡನೆಯು ಹೋಲಿಸಲು ಬಾರದು; ಅವರಿಗೆ ಅವರೇ ಸಮ!

□

# ಕ್ಯಾತನಹಳ್ಳಿ ಶ್ರೀಗಳೊಡನೆಯ ಘಟನೆಗಳ ಕೆಲವು ನೆನಪುಗಳು

**ಕೆ.ಎಂ. ನಾಗಣ್ಣಾಚಾರ್**

ಕ್ಯಾತನಹಳ್ಳಿ ಸ್ವಾಮೀಜಿಯವರ ಸಂಪರ್ಕ ನನಗೆ 1949ನೇ ಇಸವಿಯಿಂದ ಅಂದರೆ ನಾನು ಜೂನಿಯರ್ ಇಂಟರ್‌ಮೀಡಿಯೇಟ್ ಸೇರಲು ಮೈಸೂರಿಗೆ ಬಂದಾಗಿನಿಂದಲೂ ಇತ್ತು. ಕ್ಯಾತನಹಳ್ಳಿ ಸ್ವಾಮೀಜಿಯವರು ನನ್ನ ಬಗ್ಗೆ ಬಹಳ ಅಭಿಮಾನ ಇಟ್ಟುಕೊಂಡಿದ್ದರು. ವಿದ್ಯಾರ್ಥಿ ದಿಸೆಯಲ್ಲಿ ಅವರು ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಗೆ ನನ್ನ ಬಗ್ಗೆ ಅನೇಕ ಸಂದರ್ಭಗಳಲ್ಲಿ ಶಿಫಾರಸ್ಸು ಮಾಡಿ ನನ್ನ ವಿದ್ಯಾಭ್ಯಾಸ ಮುಂದುವರಿಸಲು ಸಹಾಯ ಮಾಡಿದ್ದಾರೆ. ನನ್ನನ್ನು ಆತ್ಮೀಯವಾಗಿ ನೋಡಿಕೊಂಡು ಬಹಳಷ್ಟು ನೆರವು ನೀಡಿ ನನ್ನ ಏಳಿಗೆಗೆ ಕಾರಣವಾಗಿದ್ದುದರಿಂದ ಲೇಖನ ಬರೆದಿದ್ದೇನೆ.

ಅವರನ್ನು ಕುರಿತು ಅನೇಕ ಘಟನೆಗಳು, ನನ್ನ ನೆನಪಿನ ಪಟಲದ ಮೇಲೆ ಹಾದು ಹೋದವು. ಆ ಎಲ್ಲಾ ಸನ್ನಿವೇಶಗಳನ್ನು ಬರೆಯಬೇಕೆಂದು ಪ್ರಾರಂಭಿಸಿದಾಗ, ಅವೆಲ್ಲವೂ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ವ್ಯಕ್ತಿತ್ವವನ್ನು ಉನ್ನತೀಕರಿಸುವ ಸನ್ನಿವೇಶಗಳಾಗಿದ್ದುವೇ ಹೊರತು ಕ್ಯಾತನಹಳ್ಳಿ ಸ್ವಾಮೀಜಿಯವರ ವ್ಯಕ್ತಿತ್ವದ ಬಗ್ಗೆ ಓದುಗರಿಗೆ ಒಳ್ಳೆಯ ಅಭಿಪ್ರಾಯ ಬರುವ ಬದಲು ಕ್ಯಾತನಹಳ್ಳಿ ಸ್ವಾಮೀಜಿಯವರು ಬಲು ಬಿಗಿ ಸ್ವಭಾವದವರು; ಹಣದ ಸಹಾಯ ಸಂದರ್ಭದಲ್ಲಿ ಜಿಗುಟು; ಪೂಜ್ಯರ ಒಪ್ಪಿಗೆ ಪಡೆಯುವುದು ಸುಲಭವಾಗಿದ್ದ ಸಂದರ್ಭದಲ್ಲಿಯೂ ಪೂರ್ವಭಾವಿಯಾಗಿ ಕ್ಯಾತನಹಳ್ಳಿ ಸ್ವಾಮೀಜಿಯವರ ಒಪ್ಪಿಗೆ ಪಡೆಯುವುದು ಕಷ್ಟವಾಗುತ್ತಿತ್ತು ಎಂಬ ಅಭಿಪ್ರಾಯ ಬರುವಂತಾಗಿದೆ. ಆದರೆ ಇದು ವಾಸ್ತವ ಸಂಗತಿ. ಆದರೂ ಅವರ ಮನಸ್ಸಿನಲ್ಲಿ ಬಡ ವಿದ್ಯಾರ್ಥಿಯಾದ ನಾನು ಮುಂದೆ ಬರಬೇಕೆಂಬ ಆಸೆ ವ್ಯಕ್ತವಾಗುತ್ತಿರುವುದನ್ನು ಕಾಣಬಹುದು.

ಜ್ಞಾಪಕವಿರುವ ಕೆಲವೇ ಘಟನೆಗಳನ್ನು ಬರೆಯಲು ಪ್ರಯತ್ನಿಸುತ್ತಿದ್ದೇನೆ.

1949ರಲ್ಲಿ ನಾನು ಇಂಟರ್‌ಮೀಡಿಯೆಟ್‌ಗೆ ಸೇರಲು ಬಂದಾಗ ಚಾಮರಾಜನಗರದ ಹಾಸ್ಟೆಲ್‌ನ ಹಳೆಯ ವಿದ್ಯಾರ್ಥಿಯೂ, ನನ್ನ ಸಂಬಂಧಿಯೂ ಆದ ಗುಂಡ್ಲುಪೇಟೆ ತಾಲ್ಲೂಕು ಹಂಗಳದ ಹೆಚ್.ಬಿ. ದೊರೆಸ್ವಾಮಿಯವರ ಜೊತೆ, ಕ್ಯಾತನಹಳ್ಳಿ ಹಾಸ್ಟೆಲ್‌ನಲ್ಲಿದ್ದ (ಆಗ ಅದೇ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಕಚೇರಿಯಾಗಿತ್ತು) ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿಯವರನ್ನು ಬೇಟಿ ಮಾಡಲು ಹೋದಾಗ, ಕ್ಯಾತನಹಳ್ಳಿ ಸ್ವಾಮೀಜಿಯವರು ಈಗಾಗಲೇ ನೀನು ಹಳೆಯ



ವಿದ್ಯಾರ್ಥಿಯಾಗಿರುವುದರಿಂದ ನಮ್ಮಲ್ಲಿ ಸೇರಿರುವುದು ಸರಿ, ಆದರೆ ಈ ಹುಡುಗನನ್ನು (ನನ್ನನ್ನು) ನಿಮ್ಮ ಮತದ ಮಠಕ್ಕೆ ಸೇರಿಸು ಎಂದು ಸೂಚಿಸಿದರು. ನಾನು ಮತ್ತು ದೊರೆಸ್ವಾಮಿಯವರು ಅಲ್ಲಿಗೆ ಸೇರಲಾಗಲಿಲ್ಲವೆಂದು ದೊಡ್ಡ ಸ್ವಾಮೀಜಿಯವರನ್ನು ಭೇಟಿ ಮಾಡಲು ಅವಕಾಶ ಮಾಡಿಕೊಡಿ ಎಂದು ಪ್ರಾರ್ಥಿಸಿಕೊಂಡಾಗ ಉದಾರವಾಗಿ ನಮ್ಮಿಬ್ಬರೊಡನೆ ಬಂದು ಈ ಹುಡುಗನನ್ನು ಕ್ಯಾತನಹಳ್ಳಿ ಹಾಸ್ಟೆಲ್‌ಗೆ ಸೇರಿಸಿ ಎಂದು ಶಿಫಾರಸ್ಸು ಮಾಡಿದರು. ಹೊರಗೆ ಬಂದಾಗ ತಮ್ಮ ಸಹಾಯ ದೊಡ್ಡದು ಆದರೆ ಪ್ರಾರಂಭದಲ್ಲಿ ನೀವು ಒಪ್ಪದಿದ್ದರೂ ನೀವೇ ಮೊಕ್ತ ಬಂದದ್ದು ಮಹದುಪಕಾರವಾಯಿತು ಎಂದಾಗ, ನಾವು ಜೊತೆಯಲ್ಲಿ ಬರದೆ ಇದ್ದರೆ ನೀನು ಮೇಯಿನ್ ಬಿಲ್ಡಿಂಗ್ ಸೇರಲು ಕೋರುತ್ತಿದ್ದೆ. ಅದಕ್ಕೆ ಪೂಜ್ಯರು ಒಪ್ಪುವ ಸಂಭವವೂ ಇತ್ತು ಎಂದು ಕ್ಯಾತನಹಳ್ಳಿ ಹಾಸ್ಟೆಲ್‌ಗೆ ಕಳುಹಿಸಿಕೊಟ್ಟರು. ನನಗೆ ಅಷ್ಟೇ ಸಾಕಾಗಿತ್ತು.

ನಮ್ಮೂರು ಚಾಮರಾಜನಗರ ತಾಲ್ಲೂಕು ಕುದೇರು. 1949-50 ರಲ್ಲಿ ಮೈಸೂರಿನಿಂದ ಕುದೇರಿಗೆ ಹೋಗಲು ಆಗ 0-14 ಆಣೆ ಬಸ್‌ಚಾರ್ಜಿತ್ತು. ರಜೆ ಬಂದಾಗಲೆಲ್ಲ ಎಲ್ಲಾ ವಿದ್ಯಾರ್ಥಿಗಳು ಊರಿಗೆ ಹೋಗುತ್ತಿದ್ದರು. ಆಗ ಊರಿಗೆ ಹೋಗಬೇಕೆಂದು ನಾನು ಸ್ವಾಮೀಜಿಯವರನ್ನು ಕೇಳಿದೆ. ಅಲ್ಲೇ ಇದ್ದ ಕ್ಯಾತನಹಳ್ಳಿ ಸ್ವಾಮೀಜಿಯವರು ಊರಿಗೆ ಹೋಗು, ಬೇಡವೆಂದವರ್ಯಾರು ಎಂದರು. ನನ್ನ ಮುಖಭಾವವನ್ನು ಅರಿತ ಶ್ರೀ ರಾಜೇಂದ್ರ ಸ್ವಾಮೀಜಿಯವರು ಬಸ್ ಚಾರ್ಜು ಇಲ್ಲವೆಂದು ಕಾಣುತ್ತೆ ಕೊಟ್ಟು ಕಳುಹಿಸಿ ಎಂದರು. ಒಂದು ರೂಪಾಯಿ ಕೊಟ್ಟು, ಬರುವಾಗ ನಿಮ್ಮ ಮನೆಯಿಂದ ಬಸ್ ಚಾರ್ಜು ಹಾಕಿಕೊಂಡು ಬಾ ಹೋಗು ಎಂದರು. ನನ್ನ ಕೋರಿಕೆ ಅರ್ಧ ಫಲಿಸಿತ್ತು. ಪಾವತಿಯಾದ ಹಣವನ್ನು ಅವರು ಚೀಟಿಯಲ್ಲಿ ಬರೆದುಕೊಳ್ಳುತ್ತಿದ್ದರು.

ನಾನು ಚಿನ್ನಗೆಲಸ ಮಾಡುವ ಕುಟುಂಬದಿಂದ ಬಂದವನು. ಕ್ಯಾತನಹಳ್ಳಿ ಸ್ವಾಮೀಜಿಯವರು ಒಮ್ಮೆ ಕ್ಯಾತನಹಳ್ಳಿ ಹಾಸ್ಟೆಲ್ ಮುಂಭಾಗದಲ್ಲಿದ್ದ ನಾನೂ ಹೆಚ್.ಎಸ್. ಗುರುಮಲ್ಲಯ್ಯನವರೂ ಇದ್ದ ನಮ್ಮ ಕೊಠಡಿಗೆ ಬಂದರು. ಬಂದ ಕೂಡಲೇ ನನ್ನನ್ನು ಚಿನ್ನಗೆಲಸ ಮಾಡುವವರ ಬಗ್ಗೆ ಮಾಹಿತಿ ಕೇಳಿದರು. ಚಿನ್ನಗೆಲಸ ಮಾಡುವವರು ಎಷ್ಟೇ ನಂಬಿಕಸ್ಥರಾದರೂ ಸ್ವಲ್ಪವಾದರೂ ಚಿನ್ನ ಉಳಿಸಿಕೊಳ್ಳುತ್ತಾರೆ ಎಂದು ಗಾದೆಯೇ ಇದೆ. ನಿಜವೇ ಎಂದರು? ನನಗೆ ಚಿನ್ನಗೆಲಸ ಕಲಿಯಬಾರದು ಎಂದು ನಮ್ಮ ತಂದೆಯವರ ಆಶಯವಾಗಿತ್ತು. ಈಗೇಕೆ ಆ ವಿಷಯ ಎಂದೆ. ಅದಕ್ಕೆ ನಮ್ಮಲ್ಲಿ ಚಿನ್ನದ ಕರಡಿಗೆ ಒಂದಿದೆ ಅದನ್ನು ತೆಗೆದುಕೊಂಡು ಹೋಗಿ ದೊಡ್ಡಸ್ವಾಮೀಜಿಯವರಿಗೆ(ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಗೆ) ರುದ್ರಾಕ್ಷಿ ಸರ ಮಾಡಿಸು ಎಂದರು. ನಾನು ಸಂತೋಷದಿಂದ ಒಪ್ಪಿಕೊಂಡೆ. ಒಳಗೆ ಹೋಗಿ ಹಳೆಯ ಚಿನ್ನದ ಕರಡಿಗೆಯೊಂದನ್ನು ಪೂಜ್ಯರ ಕೈಯಲ್ಲಿ ಕೊಟ್ಟು ನಾಗಣ್ಣಾಚಾರಿಗೆ ಕೊಡಿ, ಅವನು ರುದ್ರಾಕ್ಷಿ ಸರ ಮಾಡಿಸುತ್ತಾನೆ ಎಂದರು. ನಾನಾಗಲೇ

ಜೂನಿಯರ್ ಬಿ.ಎಸ್ಸಿ ಓದುತ್ತಿದ್ದೆ. ಎಷ್ಟು ತೂಕವಿದೆ ಎಂದೆ. ಎಂಟೂವರೆ ತೊಲಾ ಇದೆ, ತೆಗೆದುಕೊಂಡು ಹೋಗಿ ಮಾಡಿಸು ಎಂದರು. ಆಗ ನಮ್ಮ ಮನೆಯಲ್ಲಿ ನನ್ನ ಭಾವನವರು ಚಿನ್ನಗೆಲಸ ಮಾಡುತ್ತಿದ್ದರು. ಅದನ್ನು ತೂಕ ಮಾಡಿದಾಗ ಆರೂವರೆ ತೊಲಾ ಇತ್ತು. ಕೂಡಲೇ ನಮ್ಮ ಮನೆಯ ಪಕ್ಕದಲ್ಲಿದ್ದ ಪೋಸ್ಟ್ ಆಫೀಸಿಗೆ ಹೋಗಿ ಗಾಬರಿಯಿಂದ ಟ್ರಂಕ್‌ಕಾಲ್ ಮಾಡಿ ಮಾತನಾಡಿದೆ. ಪೂಜ್ಯರಿಗೆ ಇದು ಎಂಟೂವರೆ ತೊಲಾ ಇಲ್ಲ ಆರೂವರೆ ತೋಲಾ ಇದೆ ಎಂದೆ. ಪೂಜ್ಯರು ಕೂಡಲೇ ಸರಿಯಾಗಿದೆ ಮಾಡಿಸು ಎಂದರು. ಸಮಾಧಾನದಿಂದ ಮಾಡಿಸಿದೆ. ಮನೆಯಲ್ಲಿ ಮಾಡಿಸಿ ಪ್ರತಿ ಹಂತದಲ್ಲಿಯೂ ನಾನು ಚಿನ್ನ ತೂಕ ಮಾಡಿಕೊಳ್ಳುತ್ತಿದ್ದೆ. ರುದ್ರಾಕ್ಷಿ ಸರ ಮಾಡಿಸಿ ಬಹಳ ಸಂತೋಷದಿಂದ ಪೂಜ್ಯರಿಗೆ ಕೊಟ್ಟೆ. ಕ್ಯಾತನಹಳ್ಳಿ ಸ್ವಾಮೀಜಿಯವರೂ ಚೆನ್ನಾಗಿದೆ ಎಂದು ಪ್ರಶಂಸೆ ಮಾಡಿದರು. ಆದರೆ ಅವರಿಗೆ ಅನುಮಾನ ಕಾಡತೊಡಗಿತು. ಇದರಲ್ಲಿ ಆರೂವರೆ ತೋಲಾ ಚಿನ್ನ ಇದೆ ಎಂದು ಹೇಗೆ ಕಂಡುಹಿಡಿಯುವುದು ಎಂದರು. ಅದಕ್ಕೆ ಸಮಜಾಯಿಸಿ ಕೊಡಬೇಕಾಯಿತು. ಸರದಲ್ಲಿರುವಷ್ಟೇ ಬೇರೆ ರುದ್ರಾಕ್ಷಿ ತೂಕ ಮಾಡಿ, ಇದರ ತೂಕ ಮಾಡಿ ಕಳೆಯಿರಿ ಎಂದೆ. ಅದನ್ನು ಸೇರಿಸುವಾಗ ಅದರ ಮಧ್ಯ ಅರಗು ಇದೆ ಎಂದು ಅವರಿಗೇನು ಗೊತ್ತು. ಆದರೂ ದೊಡ್ಡವರು ಆ ಎಲ್ಲಾ Verification ಬೇಡ ಎಂದು ಸಂತೋಷದಿಂದ ಧರಿಸಿದರು. ಸಂತೋಷವಾಯಿತು. ಪ್ರತಿ ಜಯಂತಿ ನಡೆಯುವಾಗಲೂ ಧರ್ಮಪೀಠಾರೋಹಣ ಮಾಡುವಾಗ ಪೂಜ್ಯರು ಈ ರುದ್ರಾಕ್ಷಿ ಸರ ಹಾಕಿಕೊಳ್ಳುತ್ತಿದ್ದರು. ನನಗೆ ನಾನೇ ಅದನ್ನು ಮಾಡಿಸಿಕೊಟ್ಟಷ್ಟು ಸಂತೋಷವಾಗುತ್ತಿತ್ತು.

ನಾನು ಬಿ.ಎಸ್ಸಿಯನ್ನು ಮುಗಿಸಿದ ಮೇಲೆ ರೆವಿನ್ಯೂ ಇಲಾಖೆಗೆ ಪ್ರಥಮ ದರ್ಜೆ ಗುಮಾಸ್ತನಾಗಿ ಬನ್ನೂರು ಮುನಿಸಿಪಾಲಿಟಿಗೆ ಸೇರಿಕೊಂಡೆ. ಪೂಜ್ಯರು ಕರೆಸಿ, ಈಗ ನೀನು ಸೇರಿರುವ ಕೆಲಸ ಸರಿಯಿಲ್ಲ ನಿನ್ನ ಸಂಬಳದಷ್ಟೆ Stipend ಬರುತ್ತದೆ. ಬಿ.ಎಡ್. ಸೇರು ಎಂದರು. Scholarship ಕೂಡಾ ಕೊಡಿಸಿದರು. ಕೆಲಸ ಬಿಟ್ಟು ಬಿ.ಎಡ್. ಸೇರಿಕೊಂಡೆ. ಬಿ.ಎಡ್. ಓದುವಾಗ ವಿದ್ಯಾರ್ಥಿಗಳನ್ನು ಪ್ರವಾಸಕ್ಕೆ ಕರೆದುಕೊಂಡು ಹೋಗುವುದು ಬಿ.ಎಡ್. ಕಾಲೇಜು ಶಿಕ್ಷಣದ ಒಂದು ಅಂಗ. ಪ್ರವಾಸದಲ್ಲಿ ಮೂರು ಗುಂಪು. ಒಂದು ಮದ್ರಾಸಿಗೆ (ಈಗಿನ ಚೆನ್ನೈಗೆ) ಇನ್ನೊಂದು ತಂಡ ಬೊಂಬಾಯಿಗೆ ಮತ್ತೊಂದು ತಂಡ ದೆಹಲಿಗೆ. ಇದಕ್ಕೆ 1954ನೇ ಇಸವಿಯಲ್ಲಿ ಪ್ರವಾಸದ ಖರ್ಚಿಗಾಗಿ ಕ್ರಮವಾಗಿ ರೂ. 60-00 ರೂ. 100-00 ಮತ್ತು ರೂ. 200-00 ಪಾವತಿಸಬೇಕಾಗಿತ್ತು. ಪೂಜ್ಯರನ್ನು ಭೇಟಿ ಮಾಡಿ ಮರಿಮಲ್ಲಪ್ಪ ಟೀಚರ್ಸ್ ಕಾಲೇಜಿನ ಸುತ್ತೋಲೆಯನ್ನು ಪೂಜ್ಯರಿಗೆ ನೀಡಿದೆ. ಕ್ಯಾತನಹಳ್ಳಿ ಸ್ವಾಮೀಜಿಯವರ ಪ್ರಶ್ನೆ ಬಿ.ಎಡ್. ಮಾಡಬೇಕಾದರೆ ಪ್ರವಾಸ ಏಕೆ ಹೋಗಬೇಕು ಎಂದರು? ಬೊಂಬಾಯಿಗಾದರೂ ಹೋಗಿ ಬರಲು ಕೇಳಬೇಕೆಂದಿದ್ದ ನನಗೆ ತಣ್ಣೀರೆರಚಿದಂತಾಯಿತು. ಸುಮ್ಮನಿದ್ದೆ. ಪೂಜ್ಯರ ಅಪ್ಪಣೆಗಾಗಿ ಕಾದಿದ್ದೆ. ಪೂಜ್ಯರು ದೆಹಲಿಗೆ ಹೋಗಿ ಬಾ ಎಂದರು. ಅನಿವಾರ್ಯವಾಗಿ ಕ್ಯಾತನಹಳ್ಳಿ ಶ್ರೀಯವರು ಪ್ರವಾಸದ ಖರ್ಚು ಕೊಟ್ಟರು. ಬಿ.ಎಡ್.



ಪಾಸಾದ ನಂತರ ಜೆಎಸ್‌ಎಸ್ ಮಹಾವಿದ್ಯಾಪೀಠವು ಮೊಟ್ಟಮೊದಲು ಪ್ರಾರಂಭಿಸಿದ ಜೆಎಸ್‌ಎಸ್ ಹೈಸ್ಕೂಲ್‌ನ ಸೈನ್ಸ್ ಟೀಚರ್ ಆಗಿ ಕೆಲಸ ಮಾಡಲು ಸೇರಿಕೊಂಡೆ. ಕ್ಯಾತನಹಳ್ಳಿ ಶ್ರೀಗಳು ನಾವೇ ಓದಿಸಿರುವುದರಿಂದ ವೇತನ ಕಡಿಮೆ ತೆಗೆದುಕೊ ಎಂದರು. ಪೂಜ್ಯರು ಬೇಡ ಎಲ್ಲರಂತೆ ಅವನಿಗೂ ಸಂಬಳ ಕೊಡಿ ಎಂದರು. ಕ್ಯಾತನಹಳ್ಳಿ ಸ್ವಾಮೀಜಿಯವರ ವಾದ ಸರಿಯಿದ್ದರೂ ಶ್ರೀ ರಾಜೇಂದ್ರ ಮಹಾಸ್ವಾಮೀಜಿಯವರ ಔದಾರ್ಯ ದೊಡ್ಡದಾಗಿತ್ತು.

ಇದೆಲ್ಲವೂ ವಿದ್ಯಾರ್ಥಿ ದಿಶೆಯಲ್ಲಿ ನಡೆದ ಕೆಲವು ಘಟನೆಗಳು.

ಸರ್ಕಾರಿ ಕೆಲಸಕ್ಕೆ 1956 ರಲ್ಲಿ ಸೇರಿಕೊಂಡ ಮೇಲೆ 1960ರಲ್ಲಿ Probationer ಆಗಿ ಆಯ್ಕೆ ಆದೆ. ಭವಾನಿ ಸಾಗರಕ್ಕೆ ಟ್ರೈನಿಂಗ್ ಹೋಗಬೇಕು. ಅದಕ್ಕೆ 200 ರಿಂದ 250 ರೂ.ಗಳು ಬೇಕಾಗಿತ್ತು. ಅಷ್ಟೊಂದು ಹಣ ಎಲ್ಲಿತ್ತು. ಪೂಜ್ಯ ಸ್ವಾಮೀಜಿಯವರಿಗೆ Probationer ಆಗಿ ಆಯ್ಕೆ ಆಗಿರುವ ವಿಷಯ ತಿಳಿಸಿ, ತಮಿಳುನಾಡಿನ ಭವಾನಿ ಸಾಗರ್‌ಗೆ ಟ್ರೈನಿಂಗ್ ಹೋಗಬೇಕಾಗಿರುವ ವಿಷಯವನ್ನು ತಿಳಿಸಿದೆ. ಹೋಗಿ ಬಾ ಎಂದರು. ಕನಿಷ್ಠ 200 ರೂ.ಗಳು ಬೇಕೆಂದೆ. ಏನೂ ಮಾತನಾಡದೆ ಚೀಟಿ ಒಂದನ್ನು ಕೊಟ್ಟರು. ಕಾರ್ಯದರ್ಶಿಗಳಾದ ಶ್ರೀ ಹೆಚ್.ಸಿ. ಬಸವಣ್ಣನವರನ್ನು ಭೇಟಿ ಮಾಡಿ ತೆಗೆದುಕೊಂಡು ಹೋಗು ‘ಒಳ್ಳೆಯದಾಗಲಿ’ ಎಂದು ಹೇಳಿದರು. ನೇರವಾಗಿ ಹಣ ಕೊಡದಿದ್ದಾಗ ತಂದೆ ಮೇಲೆ ಮಗನು ಕೋಪಿಸಿಕೊಳ್ಳುವಂತೆ ಚೀಟಿಯನ್ನು ಅಲ್ಲೇ ಬಿಟ್ಟು ಆನೆಕರೋಟಿ ಆಫೀಸಿನಿಂದ ಹೊರ ನಡೆದೆ. ತಕ್ಷಣ ಕ್ಯಾತನಹಳ್ಳಿ ಸ್ವಾಮೀಜಿಯವರು ನನ್ನನ್ನು ಕೂಗಿ ಕರೆದು ಭವಾನಿಸಾಗರಕ್ಕೆ ತರಬೇತಿಗೆ ಹೋಗಲು ಧನಸಹಾಯ ನೀಡಿದರು. ಚೀಟಿ ವಾಪಸ್ಸು ತೆಗೆದುಕೊಳ್ಳುವುದನ್ನು ಮರೆಯಲಿಲ್ಲ.

ಸರ್ಕಾರಿ ಸೇವೆಯಲ್ಲಿ 23 ವರ್ಷ ಸೇವೆ ಸಲ್ಲಿಸಿದ ನಂತರ 1978-79 ರಲ್ಲಿ ಮಂಡ್ಯ ಜಿಲ್ಲೆಯ ಪಾಂಡವಪುರ ಸರ್ಕಾರಿ ಸಕ್ಕರೆ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕನಾಗಿದ್ದೆ (Manageing Director). ಪಾಂಡವಪುರ ತಾಲ್ಲೂಕಿನಲ್ಲಿ ಪ್ರವಾಸಕ್ಕೆ ಬಂದಿದ್ದ ಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಇದ್ದಕ್ಕಿದ್ದಂತೆ ನಮ್ಮ ಮನೆಗೆ ಬಂದರು. ಆಶ್ಚರ್ಯ ಮತ್ತು ಸಂತೋಷದಿಂದ ಹಾಲ್‌ನಲ್ಲಿ ಕೂರಿಸಿ, ಪೂಜ್ಯರನ್ನು ಸತ್ಕರಿಸಿ ಕಳುಹಿಸಿಕೊಡಲು ಪ್ರಯತ್ನಿಸಿದೆ. ಕ್ಯಾತನಹಳ್ಳಿ ಶ್ರೀಗಳವರು ಅಡುಗೆ ಮನೆಗೆ ಬಂದು ಪೂಜ್ಯರಿಗೆ ಇಡುತ್ತಿದ್ದ ಕಾಣಿಕೆ ಕವರನ್ನು ನೋಡಿ, ನಿನ್ನ ಯೋಗ್ಯತೆಗೆ ಸರಿಯಾಗ ಕಾಣಿಕೆ ಇಡು ಎಂದರು. ನನ್ನ ಘನತೆ ಹೆಚ್ಚಿಸಲು ಸೂಚಿಸಿದಂತೆ ರೂ. 1,000 ಕಾಣಿಕೆ ಇಟ್ಟ ಮೇಲೆ ಸಮಾಧಾನದಿಂದ ಯೋಗಕ್ಷೇಮ ವಿಚಾರಿಸಿದರು. ಪೂಜ್ಯ ರಾಜೇಂದ್ರ ಮಹಾಸ್ವಾಮೀಜಿಯವರು ಹಸನ್ಮುಖಿಗಳಾಗಿ ನನ್ನನ್ನು ಆಶೀರ್ವದಿಸಿ ಚೆನ್ನಾಗಿ ಕೆಲಸ ಮಾಡು ಎಂದು ಹರಸಿ ಹೊರಟರು. ಅನಿರೀಕ್ಷಿತವಾಗಿ ಸ್ವಾಮೀಜಿಯವರು ನನ್ನ ಮನೆಗೆ ಬಂದು ಆಶೀರ್ವದಿಸಿದುದು ನನ್ನಲ್ಲಿ ಎಲ್ಲಿಲ್ಲದ ಸಂತೋಷವನ್ನು ಉಂಟುಮಾಡಿ, ನನ್ನ ಕಣ್ಣಲ್ಲಿ ನೀರು ತಂದಿತು.

ಮೈಸೂರು ಜಿಲ್ಲೆಯ ವಿಶೇಷ ಜಿಲ್ಲಾಧಿಕಾರಿ (ಅಭಿವೃದ್ಧಿ)ಯಾಗಿ ಸೇವೆ ಸಲ್ಲಿಸುತ್ತಿದ್ದೆ. 1986 ರಲ್ಲಿ ನನ್ನ ಮಗ ಪಿಯುಸಿಯಲ್ಲಿ ಉತ್ತಮ ದರ್ಜೆಯಲ್ಲಿ ಪಾಸಾಗಿದ್ದು ಅದನ್ನು ಪೂಜ್ಯ ರಾಜೇಂದ್ರ ಮಹಾಸ್ವಾಮೀಜಿಗಳಿಗೆ ತಿಳಿಸಲು ಶ್ರೀಮಠಕ್ಕೆ ಹೋದೆ. ಕ್ಯಾತನಹಳ್ಳಿ ಸ್ವಾಮೀಜಿಯವರು ಮುಂದೇನು ಓದುತ್ತಾನೆ ಎಂದರು. ಮೆಡಿಕಲ್‌ಗೆ ಸೇರಿಸಬೇಕೆಂದು ಕೊಂಡಿದ್ದೇನೆ ಬುದ್ಧಿ ಎಂದಾಗ, ಸಂತೋಷಪಟ್ಟು ಕೂಡಲೇ ಪೂಜ್ಯರಿಗೆ ಶಿಫಾರಸ್ಸು ಮಾಡಿದರು. ಮೆಡಿಕಲ್‌ಗೆ ಸೇರಿಸುವಷ್ಟು ಹಣ ನನ್ನಲ್ಲಿಲ್ಲ ಎಂದೆ. ಜಗದ್ಗುರುಗಳವರು ನಿನ್ನನ್ನು ಹಣ ಯಾರು ಕೇಳಿದರು ಸೇರಿಸು ಎಂದರು. ಉದಾರತೆಗೂ ಮಿತಿ ಇರಬೇಕೆಂದು ಮನಸ್ಸಿನಲ್ಲೇ ಅಂದುಕೊಂಡು ಆಶೀರ್ವಾದ ಪಡೆದು ಹೊರಕ್ಕೆ ಬಂದೆ. ಹೊರಗೆ ಬಂದ ಮೇಲೆ ನಿನ್ನ ಮಗ ಡಾಕ್ಟರ್‌ರಾದರೆ ನಮಗೇನು ಲಾಭ ಎಂದು ನಗುತ್ತಾ ಕ್ಯಾತನಹಳ್ಳಿ ಶ್ರೀಗಳು ಕೇಳಿದರು. ನಿಮ್ಮಿಂದ ನನ್ನ ಜೀವನ ಉದ್ಧಾರವಾಗಿದೆ. ಈಗ ನನ್ನ ಮಗನ ಜೀವನವೂ ಉದ್ಧಾರವಾಗುತ್ತದೆ ಅಲ್ಲವೇ? ಅದೇ ನಿಮಗೆ ಬರುವ ಲಾಭ ಎಂದೆ. ಕ್ಯಾತನಹಳ್ಳಿ ಸ್ವಾಮೀಜಿಯವರು ಮತ್ತಷ್ಟು ನಕ್ಕು ಬೆನ್ನುತಟ್ಟಿ ಓದಿಸು ಓದಿಸು ಎಂದು ಹೇಳಿ ಕಳುಹಿಸಿದರು.

1989ರಲ್ಲಿ ನಿವೃತ್ತಿಯಾದ ಮೇಲೆ ಪರಮ ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ವಿದ್ಯಾಪೀಠದಲ್ಲಿ ಸೇವೆ ಸಲ್ಲಿಸಲು ಅವಕಾಶ ನೀಡಿದರು. ಆಡಳಿತಾಧಿಕಾರಿ (ಅಭಿವೃದ್ಧಿ) ಆಗಿ ಸೇರಿದೆ. ವಿದ್ಯಾಪೀಠದಲ್ಲಿ ಕೆಲಸ ಹೇಗೆ ನಡೆಯುತ್ತಿದೆ ಎಂಬುದನ್ನು ಕ್ಯಾತನಹಳ್ಳಿ ಶ್ರೀಗಳವರು ಆಗಿಂದಾಗ್ಗೆ ನನ್ನಲ್ಲಿ ವಿಚಾರಿಸುತ್ತಿದ್ದರು. ಎಲ್ಲವೂ ಸರಿ ಆದರೆ ವಿದ್ಯಾಪೀಠದಲ್ಲಿ ದುಂದುವೆಚ್ಚ ಮಾಡಬಾರದಲ್ಲವೆ? ಎಂದು ಸೂಚಿಸುತ್ತಿದ್ದರು. ಶ್ರೀಮಠಕ್ಕೆ ಮುಖ್ಯಮಂತ್ರಿಗಳು ಬಂದ ಸನ್ನಿವೇಶ ಒಂದರಲ್ಲಿ ವ್ಯವಸ್ಥೆಯನ್ನು ನೋಡಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಸ್ವಾಗತಿಸುವ ಅವಶ್ಯಕತೆ ಇದೆಯೇ ಎಂಬ ಅಭಿಪ್ರಾಯ ಸೂಚಿಸುತ್ತಾ, ನೀನು ಸ್ವಾಮೀಜಿಯವರಿಗೆ ಸಲಹೆ ಕೊಡಬೇಕು ಎಂದರು. ಪೂಜ್ಯರ ಗಮನಕ್ಕೆ ತರುತ್ತೇನೆ ಎಂದೆ. ಆದರೆ ನಮ್ಮನ್ನು ಹೇಳಿದರು ಎಂದು ಹೇಳಬಾರದು ಎಂದರು. ಹಿರಿಯ ಜಗದ್ಗುರುಗಳವರೊಡನೆ ನೆರಳಿನಂತೆ ನಿಂತು, ಅನೇಕ ಎಡರು ತೊಡರುಗಳನ್ನು ದಾಟಿ ಶ್ರೀ ಮಠವನ್ನು ಕಟ್ಟಿದ ಜೀವಕ್ಕೆ ಈ ತೆರನ ಆಲೋಚನೆ ಬರುವುದು ಸಹಜವೇ. ಅವರ ಆಲೋಚನೆಯ ಕ್ರಮವನ್ನು ನಾವು ಆ ಸ್ತರದಲ್ಲಿಯೇ ನಿಂತು ಪರಿಭಾವಿಸಬೇಕು ಅಷ್ಟೆ. ಕಾಲ ಪ್ರವಾಹದಲ್ಲಿ, ಬದಲಾದ ಜೀವನಕ್ರಮದಲ್ಲಿ ಹೇಗೆ ಕೆಲವು ನಡಾವಳಿಗಳು ಅಪರಿಹಾರ್ಯವೂ, ಅನಿವಾರ್ಯವೂ ಆಗುತ್ತದೆ ಎನ್ನುವುದು ಅಷ್ಟೇ ಮುಖ್ಯವಾಗುತ್ತದೆ ಎನ್ನುವುದೂ ಅಷ್ಟೇ ಸತ್ಯ ಸಮಷ್ಟಿ ಹಿತದ ದೃಷ್ಟಿಯಿಂದ.

ಕಷ್ಟದಿಂದ ಸಂಸ್ಥೆ ಬೆಳೆಸಲು ತ್ಯಾಗ ಮಾಡಿದ ಕ್ಯಾತನಹಳ್ಳಿ ಶ್ರೀಗಳು ಅನಾರೋಗ್ಯದ ನಿಮಿತ್ತ ಕಳೆದ 7-8 ವರ್ಷಗಳಿಂದ ಶ್ರೀಮಠದಲ್ಲಿ ಉಳಿದುಕೊಂಡಾಗಲೂ ಎಲ್ಲಾ ಕಾರ್ಯಕ್ರಮಗಳಲ್ಲಿಯೂ ಸಂತೋಷದಿಂದ ಭಾಗಿಯಾಗುತ್ತಿದ್ದರು. ಅವರ ಹುಟ್ಟು ಹಬ್ಬವನ್ನು ವೈಭವದಿಂದ ಆಚರಿಸುವ ವ್ಯವಸ್ಥೆ ಮಾಡಿದಾಗಲೂ ಇಷ್ಟೊಂದು ಖರ್ಚಿನ ವ್ಯವಸ್ಥೆ ಬೇಕೆ



ಎಂದು ತಮ್ಮ ಎಂದಿನ ಧೋರಣೆಯಲ್ಲಿಯೇ ಹೇಳುತ್ತಿದ್ದರು. ಅವರು 97ನೇ ವರ್ಷಕ್ಕೆ ಲಿಂಗೈಕ್ಯರಾದರು. 4-5 ವರ್ಷಗಳ ಹಿಂದೆಯೇ ಅವರ ಹೆಸರಿಗಿದ್ದ ಎಲ್ಲಾ ಸ್ಥಿರ, ಚರ ಆಸ್ತಿಗಳನ್ನು ಶ್ರೀಮಠಕ್ಕೆ ವಿಲ್ ಮಾಡಿದರು. ಕ್ಯಾತನಹಳ್ಳಿ ಸ್ವಾಮೀಜಿಯವರಿಗೆ ಸರಿಸಾಟಿಯಾಗಿ ಕೆಲಸ ಮಾಡಿದವರು ಮತ್ತೊಬ್ಬರು ಕಾಣುತ್ತಿಲ್ಲ. ಅವರು ಶತಾಯುಗಳಾಗಬೇಕಿತ್ತು; ಆಗಲಿಲ್ಲ, ಅದು ನಮ್ಮ ದುರ್ದೈವ.

ಮೇಲಿನ ಘಟನೆಗಳಲ್ಲಿ ಅವರ ಮನಸ್ಸಿನ ಔದಾರ್ಯತೆಯನ್ನು ಕಾಣಬಹುದು. ಕ್ಯಾತನಹಳ್ಳಿ ಶ್ರೀಗಳವರು ಶ್ರೀಮಠ ಮತ್ತು ಜೆಎಸ್‌ಎಸ್ ಮಹಾವಿದ್ಯಾಪೀಠಕ್ಕೆ ಮಾಡಿರುವ ಸೇವೆ ಅವಿಸ್ಮರಣೀಯ.

□

ಲೇಸೆನಿಸಿಕೊಂಡು ಅಯ್ದು ದಿನ ಬದುಕಿದಡೇನು ?
ಲೇಸೆನಿಸಿಕೊಂಡು ನಾಲ್ಕು ದಿನ ಬದುಕಿದಡೇನು ?
ಲೇಸೆನಿಸಿಕೊಂಡು ಮೂಱು ದಿನ ಬದುಕಿದಡೇನು ?
ಲೇಸೆನಿಸಿಕೊಂಡು ಎರಡು ದಿನ ಬದುಕಿದಡೇನು ?
ಜೀವಿತಂ ಶಿವಭಕ್ತಾನಾಂ ವರಂ ಪಂಚದಿನಾನಿ ಚ |
ಅಜಕಲ್ಪಸಹಸ್ರೇಭ್ಯೋ ಭಕ್ತಿಹೀನಸ್ಯ ಶಾಂಕರಿ || ಎಂಬುದಾಗಿ
ಕೂಡಲಸಂಗನ ಶರಣರ ವಚನದಲ್ಲಿ
ಲೇಸೆನಿಸಿಕೊಂಡು ಒಂದು ದಿನ ಬದುಕಿದಡೇನು !

- ಬಸವಣ್ಣ

ಪಾತಾಳದಿಂದತ್ತ ಮಾತ ಬಲ್ಲವರಿಲ್ಲ.
ಗಗನದಿಂದ ಮೇಲೆ ಅನುಭಾವ ತಾನಿಲ್ಲ.
ಒಳಗಣ ಜ್ಯೋತಿಯ ಬೆಳಗ ಬಲ್ಲವರಿಲ್ಲ.
ಹೊಱಗಣ ಹೊಱಗನು ಅಱಿಯ ಬಲ್ಲವರಿಲ್ಲ.
ಹಿಂದಣ ಹಿಂದನು, ಮುಂದಣ ಮುಂದನು
ತಂದೆ ತೋಱಿದ ನಮ್ಮ ಗುಹೇಶ್ವರನು.

- ಅಲ್ಲಮಪ್ರಭುದೇವರು

# ಕಲ್ಲುಸಕ್ಕರೆ ನುಡಿಯ ವಾಸ್ತವಿಕ ಸತ್ಯವಾದಿ!

**ಪ್ರೊ. ಮ.ಗಂ. ರೇಣುಕ ಪ್ರಸನ್ನ**

ಇನ್ನು ಎರಡು ವರ್ಷ ಇಹಲೋಕವಾಸಿಯಾಗಿದ್ದರೆ ಶತಾಯುಷಿ ಆಗಬಹುದಾಗಿದ್ದ ಕ್ಯಾತನಹಳ್ಳಿ ಬುದ್ಧಿಯವರು ಈಗ ನೆನಪು ಮಾತ್ರ. ಹೌದು, ಅವರು 'ಕ್ಯಾತನಹಳ್ಳಿ ಬುದ್ಧಿ'ಯವರೆಂದೇ ಚಿರಪರಿಚಿತರು. ಅವರ ಹೆಸರು ಶ್ರೀ ಶಿವಪ್ರಭುಸ್ವಾಮಿಗಳು ಎಂದರೆ 'ಯಾರವರು?' ಎಂದು ಕೇಳಿದವರೂ ಉಂಟು! ಜೆಎಸ್ಎಸ್ ಮಹಾವಿದ್ಯಾಪೀಠದ ಕಾಯಕದಲ್ಲಿ ತೊಡಗಿದ ಎಷ್ಟೋ ವರ್ಷಗಳ ಬಳಿಕವೇ ಈ ಇಬ್ಬರೂ ಒಬ್ಬರೇ ಎಂದು ತಿಳಿದುಕೊಳ್ಳಲು ನನಗೂ ಸಾಧ್ಯವಾದದ್ದು! ಹೆಸರಿನ ಕೆಸರಿಗಂಟಿಕೊಳ್ಳದೆ ಸುತ್ತೂರು ಮಠಕ್ಕೆ, ಜೆಎಸ್ಎಸ್ ಸಂಸ್ಥೆಗಳಿಗಾಗಿ ದುಡಿದ-ತುಡಿದ ಜೀವ ಅದು.

* * *

1970ರ ದಶಕದ ಆರಂಭದ ವರ್ಷಗಳು. ರಾಜ್ಯಾದ್ಯಂತ ಕಾಲೇಜು ಶಿಕ್ಷಕರು ಸಂಘಟಿತವಾಗುತ್ತಿದ್ದ ಕಾಲ. ನಾನು ಅಧ್ಯಾಪಕನಾಗಿ ನಾಲ್ಕೈದು ವರ್ಷಗಳಾಗಿತ್ತು. ಮೈಸೂರು ಜೆಎಸ್ಎಸ್ ಕಾಲೇಜಿನ (ಕಾಲೇಜು ಆಗ ರಾಮಾನುಜ ರಸ್ತೆಯಲ್ಲಿ ಈಗ ಆಸ್ಪತ್ರೆ ಇರುವ ಸ್ಥಳದಲ್ಲಿತ್ತು) ಅಧ್ಯಾಪಕರ ಸಂಘದ ಅಧ್ಯಕ್ಷನಾಗಿದ್ದ ನಾನು, ಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳನ್ನು ಭೇಟಿಯಾಗಲು ಹೋದ ಸಂದರ್ಭ (ಆಗ ಶ್ರೀಮಠ ಈಗ ಮಹಾವಿದ್ಯಾಪೀಠದ ಕಾರ್ಯಾಲಯವಿರುವ ಆವರಣದಲ್ಲಿತ್ತು) ಭೇಟಿ ಮುಗಿಸಿಕೊಂಡು ಹೊರಬಂದು ಚಪ್ಪಲಿಗಾಗಿ ಹುಡುಕಾಡುತ್ತಿದ್ದೆ. ನನ್ನ 'ಹೊಸ ಚಪ್ಪಲಿ'ಗಳು ಮಾಯವಾಗಿದ್ದುವು! ನನ್ನ ಹುಡುಕಾಟ ನೋಡಿ ಅಲ್ಲಿಯೇ ಸನಿಹದಲ್ಲಿ ಕುಳಿತಿದ್ದ ಕ್ಯಾತನಹಳ್ಳಿ ಬುದ್ಧಿಯವರು ಕೇಳಿದರು: "ಏನು? ಏನು ಹುಡುಕಾಡುತ್ತಿರುವುದು?' 'ಬುದ್ಧೀ, ನನ್ನ ಚಪ್ಪಲಿಗಳು ಕಾಣುತ್ತಿಲ್ಲ. ಯಾರೋ ಕದ್ದುಬಿಟ್ಟಿದ್ದಾರೆ. ಹೊಸ ಚಪ್ಪಲಿಗಳು ಬುದ್ಧೀ.'

'ಮತ್ತೆ, ಇನ್ನೇನಾಗುತ್ತೆ? ಒಳ್ಳೇ ಮನಸ್ಸಿನಿಂದ ಬಂದು ಬುದ್ಧಿಯವರ ದರ್ಶನ ಆಶೀವಾದ ಪಡೆದರೆ ಹಿಂಗಾಗುತ್ತಾ? ನೀನು ಮೇಷ್ಟ್ರುಗಳನ್ನು ಕಟ್ಟಿಕೊಂಡು ಯುದ್ಧಕ್ಕೆ  ಬಂದರೆ ಇನ್ನೇನಾಗುತ್ತೆ? ಇದರಿಂದಲಾದರೂ ನಿನ್ನ ತಪ್ಪನ್ನು ಅರ್ಥಮಾಡಿಕೋ' ಎಂದು ಸಿಡುಕು-ಸಿಟ್ಟಿನಿಂದಲೇ ನುಡಿದರು ಕ್ಯಾತನಹಳ್ಳಿಯವರು.

ನಾನು ಹೆಚ್ಚು ಮಾತನಾಡಲಿಲ್ಲ. 'ಅಧ್ಯಾಪಕರ ನ್ಯಾಯಸಮ್ಮತ ಬೇಡಿಕೆಗಳ ಈಡೇರಿಕೆಗಾಗಿ



ನಡೆಸುವ ನನ್ನ ಪ್ರಯತ್ನ ಸರಿಯೋ? ತಪ್ಪೋ? ಕಾಲವೇ ನಿರ್ಧರಿಸಬೇಕು ಬುದ್ಧಿ' ಎಂದಷ್ಟೇ ಹೇಳಿ ಅವರ ಪಾದಕ್ಕೆ ನಮಸ್ಕರಿಸಿ ಹೊರಟುಬಂದೆ

* * *

ಕಾಲ ಉರುಳಿತು. ಅಧ್ಯಾಪಕರ ಮುಖ್ಯ ಬೇಡಿಕೆಗಳನ್ನು ಸರ್ಕಾರ ಈಡೇರಿಸುತ್ತ ಬಂದ ಕಾರಣ ಕಾಲೇಜುಗಳಲ್ಲಿ ಅಧ್ಯಾಪಕರು ನೆಮ್ಮದಿಯಿಂದ ಕಾಯಕ ನಿರ್ವಹಿಸುತ್ತಿದ್ದರು. ನಾನು ನಿವೃತ್ತಿಯ ಅಂಚಿಗೆ ಬಂದಿದ್ದೆ. 21ನೆಯ ಶತಮಾನ ಹೊಸ ಸಹಸ್ರಮಾನದ ಆರಂಭ 2000 ದಲ್ಲಿ ಸರಸ್ವತಿಪುರಂ ಜೆಎಸ್ಎಸ್ ಮಹಿಳಾ ಕಾಲೇಜಿನಲ್ಲಿ ಪ್ರಥಮಶಿಕ್ಷಕನಾಗಿ (Principal) ಕಾರ್ಯ ನಿರ್ವಹಿಸುತ್ತಿದ್ದೆ. 2001ನೇ ಜನವರಿ 26. ಗಣರಾಜ್ಯೋತ್ಸವವನ್ನು ಕಾಲೇಜಿನ ಬಯಲು ಒಳಾಂಗಣದಲ್ಲಿ ವಿಶಿಷ್ಟವಾಗಿ ಆಚರಿಸಲು ಆಯೋಜಿಸಿದ್ದೆವು. ರಾಷ್ಟ್ರಧ್ವಜದಡಿಯಲ್ಲಿ, ರ್‍ಯಾಂಕ್ ವಿಜೇತ 'ಸುವರ್ಣ ಸರಸ್ವತಿ'ಯರ ಮತ್ತು ವಿಶಿಷ್ಟ ಸಾಧನೆಗೈದ 'ಕ್ರೀಡಾಕಲಿ'ಗಳನ್ನು ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಅಭಿನಂದಿಸುವ ಕಾರ್ಯಕ್ರಮ ರೂಪಿತವಾಗಿತ್ತು. ಆದರೆ ಅನಿವಾರ್ಯ ಕಾರ್ಯಬಾಹುಳ್ಯದಿಂದ ಪೂಜ್ಯರು ಸಮಾರಂಭಕ್ಕೆ ದಯಮಾಡಿಸಲಾಗಲಿಲ್ಲ. ಅವರ ಪ್ರತಿನಿಧಿಯಾಗಿ ಕ್ಯಾತನಹಳ್ಳಿ ಬುದ್ಧಿಯವರು ಆಗಮಿಸಿ ಸಾನ್ನಿಧ್ಯ ವಹಿಸಿ ಸಮಾರಂಭವನ್ನು ಯಶಸ್ವಿಗೊಳಿಸಿ ನಡೆಸಿಕೊಟ್ಟು ಆಶೀರ್ವದಿಸಿದರು. ಅವರು ಅಂದು ಆಡಿದ ನುಡಿಗಳು ಇಂದಿಗೂ ನನ್ನ ಕಿವಿಯಲ್ಲಿ ಅನುರಣಿಸುತ್ತವೆ.

"ನಮಗೆ ಭಾಷಣ ಮಾಡಲು ಬರುವುದಿಲ್ಲ. ಆದರೂ ಎರಡು ಮಾತು ಆಡ್ತೀವಿ. ರ್‍ಯಾಂಕ್ ಬಂದಿದ್ದೀರಿ. ಸ್ಪೋರ್ಟ್ಸ್‌ನಲ್ಲೂ ಬಹುಮಾನ ಗಳಿಸಿದ್ದೀರಿ. ಸಂತೋಷ. ಆದರೆ ಇನ್ನೂ ಮೇಲ್ಮಟ್ಟದ ಸಾಧನೆ ಮಾಡಬೇಕು. ಒಂದು ಮಾತು ಹೇಳ್ತೀವಿ; ರೇಣುಕ ಪ್ರಸನ್ನ ಅಂಥ ಪ್ರಿನ್ಸಿಪಾಲರು ನಿಮಗೆ ಸಿಕ್ಕೋದು ಕಷ್ಟ. ಅವರ ಮಾರ್ಗದರ್ಶನದಲ್ಲಿ ಅವರಿಗೆ, ಕಾಲೇಜಿಗೆ, ದೇಶಕ್ಕೆ ಇನ್ನೂ ಒಳ್ಳೇ ಹೆಸರು ತನ್ನಿ. ಪೂಜ್ಯ ಗುರುಗಳ ಆಶೀರ್ವಾದ ನಿಮ್ಮೆಲ್ಲರನ್ನು ಅನುಗ್ರಹಿಸಿ ಕಾಪಾಡಲಿ."

ಈ ಮೆಚ್ಚುಗೆಗೆ ಎಷ್ಟು ಅರ್ಹನೋ ನಾನರಿಯೆ. ಆದರೆ 1970-80ರ ದಶಕದಲ್ಲಿ ಕಾಲೇಜು ಶಿಕ್ಷಕರ ಚಳವಳಿಯಲ್ಲಿ ಸಕ್ರಿಯನಾಗಿದ್ದ ನನ್ನ ಬಗ್ಗೆ ಆಗಾಗ್ಗೆ ಕ್ಯಾತನಹಳ್ಳಿ ಬುದ್ಧಿಯವರು ಆಡುತ್ತಿದ್ದ ಮಾತುಗಲು ಆಗ ಕಲ್ಲೇಟುಗಳು ಅನಿಸುತ್ತಿತ್ತು. ಆದರೆ ಈ ಅಂತಃಕರಣದ ಮೆಚ್ಚುಗೆಯ ಮಾತುಗಳೊಂದಿಗೆ ಎರಡನ್ನೂ ಮೆಲುಕುಹಾಕಿದರೆ ಅವರ ಮಾತುಗಳು ಕಲ್ಲುಸಕ್ಕರೆ! ಕಲ್ಲುಸಕ್ಕರೆಯ ಏಟು ತಿಂದವರು ಸುಂದರ ಸಕ್ಕರೆ ಬೊಂಬೆಗಳಾಗಬಹುದಷ್ಟೆ.

* * *

ಜೆಎಸ್‌ಎಸ್ ಮಹಾವಿದ್ಯಾಪೀಠ, ವಿದ್ಯಾಪೀಠದ ನಿವೃತ್ತ ನೌಕರರನ್ನು ಗೌರವಿಸಿ ಬೀಳ್ಕೊಡುವ ಸಂದರ್ಭದಲ್ಲಿ ಸಂಸ್ಥೆಯ ಸ್ಥಾಪಕರಾದ ಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತಿ (ಪ್ರತಿವರ್ಷ ಆಗಸ್ಟ್ 29) ಯಂದು, ನೌಕರರ ಸೇವೆಯನ್ನು ದಾಖಲಿಸುವ ಕಿರು ಹೊತ್ತಗೆ 'ತೇರನೆಳೆದವರು' ಕೃತಿಯನ್ನು ಹೊರ ತರುತ್ತಿದೆ. ಇದರ ಮೊದಲ ಸಂಪಾದಕ (1996 ರಲ್ಲಿ)ರಲ್ಲೊಬ್ಬನಾದ ನಾನು (ಇನ್ನೊಬ್ಬರು ಪ್ರೊ. ಕ.ಪು. ಮಹಾದೇವಪ್ಪ) ಕೃತಿಯ ಪ್ರತಿಯನ್ನು ಕ್ಯಾತನಹಳ್ಳಿ ಬುದ್ಧಿಯವರಿಗೆ ಕೊಟ್ಟಾಗ, ಪುಟಗಳ ಮೇಲೆ ಕಣ್ಣಾಡಿಸಿ ಅವರು ವ್ಯಕ್ತಪಡಿಸಿದ ಪ್ರತಿಕ್ರಿಯೆ:

"ಮಹಾವಿದ್ಯಾಪೀಠ ಸರಸ್ವತಿಯ ಒಂದು ತೇರು. ಇಲ್ಲಿ ಕೆಲಸ ಮಾಡುವವರೆಲ್ಲ ಆ ತೇರನ್ನು ಎಳೆಯುವ ಭಕ್ತರು ಅಂತ ಬರೆದಿದ್ದೀರಿ, ಸರಿ. ಆದರೆ ಇವರಲ್ಲಿ ಕೆಲಸ ಮಾಡದೆ ಕಳ್ಳಾಟ ಆಡಿ ಸಂಬಳ ತಕ್ಕಳ್ಳ ಮೈಗಳ್ಳರಿಲ್ವೆ? ನಿಮ್ಮ ಮೇಷ್ಟ್ರುಗಳ ಎಲ್.ಐ.ಸಿ. ದುಡ್ಡು ನುಂಗಿಹಾಕಿದವರಿಲ್ವಾ? ಸಂಸ್ಥೆಯ ಹಣ ಗುಳುಂ ಮಾಡಿದವರಿಲ್ವಾ? ಇಂಥವರ ವಿಚಾರಾನೂ ಪ್ರಿಂಟ್ ಮಾಡಿ ಹಂಚುತ್ತೀರಾ? ಇಂಥವರೆಲ್ಲ ಸಂಸ್ಥೆಗೆ ತೆರೆಯೆಳೆದವರಲ್ವಾ? ತೇರನೆಳೆದವರ ಜತೆಗೆ ಈ ತೆರೆಯೆಳೆದವರ ವಿಷಯಾನೂ ಪ್ರಿಂಟ್ ಮಾಡಿ ಫೋಟೋ ಹಾಕಿ ಹಂಚುತೀರಾ? ಹೇಳಿ ರೇಣುಕ ಪ್ರಸನ್ನ?

ಕ್ಯಾತನಹಳ್ಳಿಯವರಿಗೆ ಮಾರುತ್ತರ ನೀಡಲು ನನ್ನ ಬಳಿ ಮಾತಿರಲಿಲ್ಲ, ಉಸಿರೆತ್ತಲು ಶಕ್ತಿಯೂ ಇರಲಿಲ್ಲ. 'ಮಿಥ್ಯವ ನುಡಿವ ಮರ್ತ್ಯಲೋಕ'ದಲ್ಲಿ ಸತ್ಯವಾಣಿ ಗುಡುಗಾಡಿತ್ತು. ಆ ವಾಣಿ ಇನ್ನೂ ನನ್ನ ಕಿವಿಗಳಲ್ಲಿ ಅನುಕರಣಿಸುತ್ತಲೇ ಇದೆ. ಅಪ್ರಿಯ ಕಟುಸತ್ಯವನ್ನಾಡಿದ ಕ್ಯಾತನಹಳ್ಳಿ ಬುದ್ಧಿಯವರು ಅದೆಂಥ ವಾಸ್ತವಿಕ ಸತ್ಯವಾದಿಯೆಂದು ನಾಲಗೆ ಉದ್ಗರಿಸುತ್ತಿದೆ.

* * *

ಬರಬರುತ್ತ ಬುದ್ಧಿಯವರು ನನ್ನನ್ನು ಬಹುವಚನದಲ್ಲಿ ಮಾತನಾಡಲಾರಂಭಿಸಿದ್ದರು. ಆಗ ನಾನವರನ್ನು ಕೇಳಿಕೊಂಡೆ: "ಬುದ್ಧೀ, ಮೊದಲಿನಂತೆಯೇ ನನ್ನನ್ನು ನೀವು ಏಕವಚನದಲ್ಲಿ ಮಾತನಾಡಿಸಿದರೇ ನನಗೆ ಸಂತೋಷ. ಗುರುಗಳು, ಹಿರಿಯರು ಕಿರಿಯರನ್ನು ಹಾಗೆ ಮಾತನಾಡಿಸುವುದೇ ಅವರಿಗೆ ಆಶೀರ್ವಾದ ಅನುಗ್ರಹ."

ಅವರ ಮೌನವೇ ಉತ್ತರವಾಯಿತು. ಈಗ ಆ ಲೋಕದಲ್ಲಿರುವ ಕ್ಯಾತನಹಳ್ಳಿ ಶ್ರೀ ಶಿವಪ್ರಭು ಬುದ್ಧಿಯವರು ಅಲ್ಲಿಂದಲೇ ತಮ್ಮ ಸಹಜ ಕಲ್ಲುಸಕ್ಕರೆಯ ನುಡಿಗಳ ಮಳೆಗರೆಯುತ್ತ ನಮ್ಮನ್ನು ಅನವರತ ಎಚ್ಚರಿಸುತ್ತ ರಕ್ಷಿಸಲಿ.

□

# ಅಪೂರ್ವ ನಿಷ್ಕಾಮಯೋಗಿ

**ಜೀಮಾರಹಳ್ಳಿ ಗುರುಸಿದ್ದಪ್ಪ**

ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳಲ್ಲೇ ಹೆಚ್ಚುಕಾಲ ಓದಿ ಅಲ್ಲೇ ನೌಕರನಾಗಿದ್ದು ಇತ್ತೀಚೆಗೆ ನಿವೃತ್ತನಾಗಿರುವ ನಾನು ಪೂಜ್ಯ ಶ್ರೀ ಶಿವಪ್ರಭುಸ್ವಾಮಿಗಳನ್ನು ನನ್ನ ಬಾಲ್ಯದಿಂದಲೂ ಚೆನ್ನಾಗಿ ಬಲ್ಲವನು. ಬಾಲ್ಯವೆಂದರೆ ಅತಿಬಾಲ್ಯದಿಂದಲ್ಲ. ನನ್ನೂರಲ್ಲೇ ಪ್ರಾಥಮಿಕ ಶಿಕ್ಷಣ ಮುಗಿಸಿ ಮಾಧ್ಯಮಿಕಶಾಲಾ ಶಿಕ್ಷಣಕ್ಕೆ ಸುತ್ತೂರಿನ ಸರ್ಕಾರಿ ಮಾಧ್ಯಮಿಕ ಶಾಲೆಗೆ ಸೇರಿ ಎಂಟನೆಯ ತರಗತಿವರೆಗೆ ಊರಿಂದ ಇಲ್ಲಿಗೆ ಹೋಗಿ ಬಂದು ಮಾಡುತ್ತ ಓದು ಮುಗಿಸಿದ್ದೆ. ಇಲ್ಲಿಯವರೆಗೆ (1961) ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ರಾಗೂ ಶ್ರೀ ಶಿವಪ್ರಭುಸ್ವಾಮಿಗಳನ್ನು ನೋಡಿರಲಿಲ್ಲ. ಆದರೆ ಸುತ್ತೂರು ಮಠದ ಇನ್ನಿತರರೆಲ್ಲರ ಪರಿಚಯ ನನಗಿದ್ದಿತು. ಮಂತ್ರಮಹರ್ಷಿಗಳು ಆಗಿನ್ನು ಸುತ್ತೂರಿನಲ್ಲೇ ಇದ್ದರು. ಜಗದ್ಗುರುಗಳ ಪೂರ್ವಾಶ್ರಮದ ತಂದೆ ಶ್ರೀ ಮಲ್ಲಿಕಾರ್ಜುನಸ್ವಾಮಿಗಳು, ಅಜ್ಜಿ ಮಲ್ಲಮ್ಮಯ್ಯನವರನ್ನೂ ನೋಡಿ ಬಲ್ಲವನಾಗಿದ್ದೆನು.

1961ರಲ್ಲಿ ಸುತ್ತೂರಿನಲ್ಲಿ ಪ್ರೌಢಶಾಲೆಯನ್ನು ಪ್ರಾರಂಭಿಸುವ ಹಿನ್ನೆಲೆಯಲ್ಲಿ ಈ ಈರ್ವರು ಗುರುವರರು ಸುತ್ತೂರಿಗೆ ಬಂದಿದ್ದರು. ಪ್ರಾರಂಭದ ದಿನವೇ ಪ್ರವೇಶ ಪಡೆಯಲು ಹೋಗಿದ್ದ ನಾನು ಇವರನ್ನು ಪ್ರಥಮಬಾರಿಗೆ ನೋಡಿದೆನು. ಇಲ್ಲಿ ನಾನು ಮೂರು ವರ್ಷ ವಿದ್ಯಾರ್ಥಿ. ಮೂರೂ ವರ್ಷ ನಾನೇ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ. ಒಂಬತ್ತನೆಯ ತರಗತಿಯಲ್ಲಿದ್ದಾಗ ಶಾಲಾ ವಾರ್ಷಿಕೋತ್ಸವ ಸಂದರ್ಭದಲ್ಲಿ ಅಭಿನಯಿಸಲ್ಪಟ್ಟ 'ಕಂಬಳಿನಾಗಿದೇವ' ನಾಟಕದಲ್ಲಿ ಬಿಜ್ಜಳನ ಪಾತ್ರ ವಹಿಸಿದ್ದ ನನ್ನನ್ನು ತಮ್ಮ ಹತ್ತಿರಕ್ಕೆ ಕರೆಯಿಸಿಕೊಂಡು ನನ್ನ ಪೂರ್ವಾಪರ ಕುರಿತು ಕೇಳುತ್ತಿದ್ದ ಜಗದ್ಗುರುಗಳ ಜೊತೆಗೆ ಶ್ರೀ ಶಿವಪ್ರಭುಸ್ವಾಮಿಗಳೂ ಕೂಡ ಅದೇನೇನೋ ಕೇಳಿದ್ದರು. ಇದಾದ ಮೇಲೆ ಎಸ್‌ಎಸ್‌ಎಲ್‌ಸಿ ಮುಗಿಸುವಷ್ಟರಲ್ಲಿ ಜಗದ್ಗುರುಗಳೊಡನೆ ಸುತ್ತೂರಿಗೆ ಬಂದು ಹೋಗುತ್ತಿದ್ದ ಇವರನ್ನು ಸಾಕಷ್ಟು ಸಲ ನೋಡಿದ್ದೆ.

1964-65ನೇ ಸಾಲಿನಲ್ಲಿ ಮೈಸೂರಿನ ಜೆಎಸ್‌ಎಸ್ ಕಾಲೇಜಿಗೆ ಸೇರಿದ್ದೆ. ಆನೆ ಕರೋಟಿಯ ಜಾಗದಲ್ಲಿನ ಇದರ ಕಟ್ಟಡದ ಕೆಲಸ ಇನ್ನೂ ನಡೆಯುತ್ತಿತ್ತು. ಶ್ರೀ ಶಿವಪ್ರಭುಸ್ವಾಮಿಗಳು ಮಂಡಿವರೆಗೆ ಪಂಚೆ ಎತ್ತಿಕಟ್ಟಿ ನಿಂತು ಕೆಲಸಗಾರರಿಂದ ಕೊಟ್ಟ ಕೂಲಿಗೆ ತಕ್ಕಂತೆ ಕೆಲಸ ಮಾಡಿಸುತ್ತಿದ್ದುದನ್ನು ನಾನು ಸಾಕಷ್ಟು ಬಾರಿ ನೋಡಿದ್ದೆ. ಜೆಎಸ್‌ಎಸ್ ಸಂಸ್ಥೆ ಕಟ್ಟಿ

ಬೆಳೆಯಿಸುವಲ್ಲಿ ಇವರ ಪಾತ್ರವೂ ಇದೆ ಎಂಬುದು ನನಗೆ ತಂತಾನೇ ಮನವರಿಕೆಯಾದುದು ಈ ಸಂದರ್ಭದಲ್ಲೇ.

ಮೈಸೂರಿನಲ್ಲಿ ಪಿಯುಸಿ ಓದುತ್ತಿದ್ದ ನಾನು ಆಂಗ್ಲ ಮಾಧ್ಯಮ ಬೋಧನೆ, ವಿಜ್ಞಾನ ವಿಷಯಗಳನ್ನು ಅರಗಿಸಿಕೊಳ್ಳಲಾಗದೆ ಅನುತ್ತೀರ್ಣನಾಗಿ ಒಂದು ವರ್ಷ ಊರಲ್ಲೇ ಇದ್ದೆ. 1968 ರಲ್ಲಿ ನಂಜನಗೂಡಿನಲ್ಲಿ ಕಾಲೇಜು ಪ್ರಾರಂಭಿಸಿದಾಗ ಜಗದ್ಗುರುರವರು ಇಲ್ಲಿಗೆ ಸೇರಿಕೊಳ್ಳುವಂತೆ ಒಬ್ಬರ ಮೂಲಕ ಹೇಳಿ ಕಳುಹಿಸಿದ್ದರು. ಸೇರಿಕೊಂಡೆ. ಇಲ್ಲಿ ಖಾಸಗಿಯವರು ಕಾಲೇಜು ಸ್ಥಾಪಿಸುವುದು ಬೇಡ ಎಂದು ಮುಷ್ಕರ ಮಾಡುತ್ತಿದ್ದವರನ್ನು ವಿರೋಧಿಸಿ ನಿಂತೆ. ಸಂಸ್ಥೆಯ ಪರವಾಗಿದ್ದವರನೇಕರ ಸಹಕಾರ ನನಗೆ ಇತ್ತು. ಈ ಘಟನೆ ಮುಂದೆ ನಾನು ಎರಡು ಮೂರು ವರ್ಷ ವಿದ್ಯಾರ್ಥಿ ನಾಯಕನಾಗಿ ರಾರಾಜಿಸಲು ನಾಂದಿ ಹಾಡಿತ್ತು. ನಂಜನಗೂಡಿನಲ್ಲಿ ಇದುವರೆವಿಗೂ ನಡೆದಿರದಂತಹ ಸಾಹಿತ್ಯಕ, ಸಾಂಸ್ಕೃತಿಕ ಕಾರ್ಯಕ್ರಮಗಳು ನಮ್ಮ ಕಾಲೇಜಿನ ಮೂಲಕ ನಡೆಯುವಂತಾದವು. ಮಂತ್ರಿವರ್ಯರು, ಸಾಹಿತ್ಯಕ್ಷೇತ್ರದ ಘಟಾನುಘಟಿಗಳು ಬರಲಾರಂಭಿಸಿದರು. ಇದಕ್ಕೆಲ್ಲಾ ಶ್ರೀಗಳವರ ರಕ್ಷೆಯಿದ್ದಿತ್ತು. ಈ ಕಾರ್ಯಕ್ರಮಗಳನ್ನು ರೂಪಿಸುವ ಹಿನ್ನೆಲೆಯಲ್ಲಿ ಶ್ರೀಮಠಕ್ಕೆ ಹೋಗುತ್ತಿದ್ದೆ. ಶ್ರೀಗಳವರ ದರ್ಶನಕ್ಕೂ ಮುಂಚೆ ಶ್ರೀ ಶಿವಪ್ರಭುಸ್ವಾಮಿಗಳೊಡನೆ ಹೆಚ್ಚೆಚ್ಚು ಮಾತನಾಡುತ್ತಿದ್ದವನಾಗಿದ್ದೆ. ಒಮ್ಮೆ ನನ್ನ ಸಂಬಂಧಿಕರೂ, ನನಗೆ ಲೆಕ್ಚರರ್ ಆಗಿದ್ದವರ ಮದುವೆಗೆ ಹೋಗಲು (ಕುದೇರು) ದೇವಸ್ಥಾನದ ಬಳಿ ಬಸ್ ಕಾಯುತ್ತ ನಿಂತಿದ್ದೆ. ಜಗದ್ಗುರುಗಳ ಪ್ಲೇಮೌತ್ ಕಾರು ಬಂತು. ಸ್ವಲ್ಪ ದೂರ ಕ್ರಮಿಸಿದ್ದ ಕಾರು ಥಟ್ಟನೆ ನಿಂತಿತು. ಕಾರಿನಿಂದ ಹೊರಬಂದ ಡ್ರೈವರ್ ನನ್ನನ್ನು ಕೈಸನ್ನೆ ಮೂಲಕ ಕರೆದರು. ಹತ್ತಿರ ಹೋದ ನನ್ನನ್ನು, ಅಲ್ಲಿ ನಿಂತಿದ್ದಕ್ಕೆ ಕಾರಣ ಕೇಳಿದ ಜಗದ್ಗುರುಗಳು 'ನೋಡ್ದಾ, ಕ್ಯಾತನಹಳ್ಳಿ ಬುದ್ಧಿಯವರು ಅವನೂ ಕುದೇರಿಗೆ ಬರ್ತಾನೆ ಅಂತ ಕಾಣ್ಸುತ್ತೆ, ಕರೀಸಿ ಅಂದಿದ್ರು, ನಾವೂ ಅಲ್ಲಿಗೆ ಹೋಗ್ತಿದ್ದೀವಿ ಕುಳಿತ್ಕೊ ಬಾ' ಎಂದು ಕಾರಲ್ಲಿ ಕರೆದೊಯ್ದಿದ್ದರು. ಇದು ನನಗೊಂದು ರೋಮಾಂಚನಕಾರಿ ಅನುಭವ.

1972-73 ರಲ್ಲಿ ಸುತ್ತೂರು ಜಾತ್ರೆ ಬಡಾಯಿಸುವ ಹಿನ್ನೆಲೆಯಲ್ಲಿ ಸಮಾಲೋಚನೆ ನಡೆಸಲು ತಾಲ್ಲೂಕಿನ ಗಣ್ಯರು ನಮ್ಮ ಕಾಲೇಜಿನ ಸಭಾಂಗಣದಲ್ಲಿ ನೆರೆಯುವಂತೆ ಆಹ್ವಾನವಿತ್ತಿದ್ದರು. ಅಂದಿನ ಸಭೆ ಮುಕ್ತಾಯದ ಹಂತ ತಲುಪಿದ್ದ ಸಮಯದಲ್ಲಿ ನನ್ನನ್ನು ಹುಡುಕುತ್ತ ಬಂದಿದ್ದ ಲೆಕ್ಚರರೊಬ್ಬರು 'ಬುದ್ದಿಯವರು ಕರೀತಿದ್ದಾರೆ ಹೋಗು ಹೋಗು' ಎಂದಿದ್ದರು. ಹೋದೆ. ಶ್ರೀ ಶಿವಪ್ರಭುಸ್ವಾಮಿಗಳು "ನಾವು ಸಂಸ್ಥೆಯಿಂದ ತರುತ್ತಿರುವ 'ಪ್ರಸಾದ' (ಆಗ ತ್ರೈಮಾಸಿಕ ನಿಯತಕಾಲಿಕೆ) ಬಗ್ಗೆ ಇಲ್ಲಿರುವವರಿಗೆ ಗೊತ್ತಾಗುವಂತೆ ಮಾತನಾಡು" ಎಂದಿದ್ದರು. ಅವರ ಇಂಗಿತಕ್ಕೆ ತಕ್ಕಂತೆ ಮಾತನಾಡಿದೆ. ಅಲ್ಲಿದ್ದವರೆಲ್ಲಾ ಅಲ್ಲೆ ನಗದು ಹಣ ಸಂದಾಯ ಮಾಡಿ ಚಂದಾದಾರರಾದರು. ಇದಕ್ಕೆ ನನ್ನ ಮಾತಿನ ಪರಿಣಾಮ ಎನ್ನುವುದಕ್ಕಿಂತ ಅಂದು ಜನರು ಅವರಿಬ್ಬರ ಬಗ್ಗೆ ಇಟ್ಟಿದ್ದ ಭಕ್ತಿ ಗೌರವಗಳೇ ಕಾರಣವಾಗಿದ್ದವೆಂಬುದು



ನನಗೆ ಗೊತ್ತಿತ್ತು. ಆದರೆ ಈ ಎಲ್ಲ ಗಣ್ಯರ ಪರಿಚಯ ನನಗೆ ಶಾಶ್ವತವಾಗಿ ಉಳಿಯಿತು.

ನಾನು ಸಾಕಷ್ಟು ಸ್ಥಿತಿವಂತ ಕುಟುಂಬದಿಂದ ಬಂದವನಾಗಿದ್ದರೂ, ಬಿ.ಎ. ಮುಗಿಸಿದ್ದ ಸಮಯದಲ್ಲಿ ಮುಂದೆ ಓದಲು ಅಡ್ಡಿಯಾಗಿತ್ತು. ಚಿಂತಾಕ್ರಾಂತನಾಗಿ ಮಠಕ್ಕೆ ಹೋಗಿದ್ದೆ. ಮಂತ್ರಾಲೋಚನೆ ಕೋಣೆಯಲ್ಲಿ ಇಬ್ಬರೂ ಇದ್ದರು. ಸಂಕೋಚ ಬಲವಾಗಿದ್ದರೂ ಘಟ್ಟಿ ಮನಸ್ಸುಮಾಡಿ ವಿಷಯ ಪ್ರಸ್ತಾಪಿಸಿದೆ. ಕ್ಯಾತನಹಳ್ಳಿ ಬುದ್ದಿಯವರು 'ಆ ಟಿ.ಎ.ಪೈ ಗೆ (ಆಗಿನ ಕೇಂದ್ರ ಸಚಿವರು) ಒಂದು ಪತ್ರ ಕೊಡಿಸಿಬಿಡಿ, ಸಿಂಡಿಕೇಟ್ ಬ್ಯಾಂಕಿನಲ್ಲಿ ಸಾಲ ಕೊಡಿಸ್ತಾರೆ' ಎಂದು ಸಲಹೆ ನೀಡಿದ್ದರು. ಜಗದ್ಗುರುವರರು ಪತ್ರ ಟೈಪ್ ಮಾಡಿಸಿ ಸಹಿ ಹಾಕಿಕೊಟ್ಟು ಮಂಗಳೂರಿಗೆ ಹೋಗುವಾಗ ಬಾ ಉಡುಪಿ ಮಠಕ್ಕೆ ನಾವೊಂದು ಪತ್ರ ಕೊಡುತ್ತೇವೆ ತಲುಪಿಸುವೆಯಂತೆ ಎಂದಿದ್ದರು. (ಆಗ ತಾನೆ ಅವರು ಉಡುಪಿ ಮಠಕ್ಕೆ ಹೋಗಿ ಬಂದಿದ್ದರು). ಅದೊಂದು ದಿನ ಹೋದೆ. ಕಾಗದಗಳನ್ನು ಹೊತ್ತು ಹೋಗಿ ತಲುಪಿಸಿದ ನನಗೆ ಉಡುಪಿ ಮಠದಲ್ಲಿ ಹಾಗೂ ಮಣಿಪಾಲ್‌ನ ಟಿ.ಎ.ಪೈ ಮನೆಯಲ್ಲಿ ನಡೆದಿದ್ದ ರಾಜಾಥಿತ್ಯವನ್ನೆಂದಿಗೂ ಮರೆಯಲಾರೆ. ಒಂದೇ ವಾರದಲ್ಲಿ ನನಗೆ ಸಾಲ ದೊರೆತಿತ್ತು (ಇದಲ್ಲದೆ ನಾನು ಎರಡನೇ ವರ್ಷ ಎಂ.ಎ. ಮಾಡುತ್ತಿದ್ದಾಗ ನನ್ನ ಕೋರಿಕೆ ಮನ್ನಿಸಿ ಜಗದ್ಗುರುಗಳು ಒಂದೆರಡು ಸಲ ಎಂ.ಒ. ಮೂಲಕವೂ ಹಣ ಕಳುಹಿಸಿಕೊಟ್ಟಿದ್ದನ್ನು ಸ್ಮರಿಸುತ್ತಿದ್ದೇನೆ). ಹೀಗೆ ಅಂದು ಕ್ಯಾತನಹಳ್ಳಿ ಬುದ್ಧಿಯವರು ನೀಡಿದ್ದ ಸಮಯೋಚಿತ ಸಲಹೆಯಿಂದಾಗಿ ನಾನು ಎಂ.ಎ. ಓದಲು ಸಹಕಾರಿಯಾಗಿದ್ದಿತು.

ಚಾಮರಾಜನಗರದ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ Honourary Teacher ಆಗಿ ಸೇವೆ ಸಲ್ಲಿಸುತ್ತಿದ್ದ ಸಮಯದಲ್ಲಿ "ಘನ ಮಹಿಮ ಶ್ರೀಗುರು ಶಿವರಾತ್ರೀಶ" ಹಾಗೂ "ಸುತ್ತೂರು ಶ್ರೀ" ಎಂಬೆರಡು ಪದ್ಯಗಳನ್ನು ಬರೆದಿದ್ದ ನಾನು ಅವುಗಳನ್ನು ಜಗದ್ಗುರುಗಳಿಗೆ ತೋರಿಸಲೆಂದು ಮಠಕ್ಕೆ ಹೋಗಿದ್ದೆ. ಜಗದ್ಗುರುಗಳನ್ನು ಭೇಟಿಯಾಗುವುದು ಸ್ವಲ್ಪ ತಡವಾಗುವುದೆಂಬುದು ಗೊತ್ತಾದುದರಿಂದ ಇವರಿಗೇ ಕೊಟ್ಟೆ. ಬಹು ಗಂಭೀರವಾಗಿಯೇ ಓದಿದ ಅವರು 'ಪದ್ಯಗಳು ಚೆನ್ನಾಗಿವೆ, ಬುದ್ಧಿಯವರಿಗೆ ತೋರ್ಸು, ನಮ್ಮ ಪ್ರಸಾದ ನಿಯತಕಾಲಿಕೆಗೆ ಕೊಡು' ಎಂದಿದ್ದರು. ಹೀಗೆ ಮತ್ತೊಂದು ಸಲ ಮಠಕ್ಕೆ ಹೋಗಿದ್ದಾಗ ಅಂದಿಗೆ ಸಾಹಿತ್ಯಲೋಕದಲ್ಲಿ ಖ್ಯಾತನಾಮರಾಗಿದ್ದ ಶ್ರೀಕೃಷ್ಣ ಆಲನಹಳ್ಳಿಯವರು ಬಂದಿದ್ದು ತಾವು ಬರೆದಿದ್ದ 'ಕಾಡು' ಕೃತಿಯನ್ನು ಕೊಡುತ್ತಿದ್ದಾಗ 'ಹೇಯ್ ಕೃಷ್ಣ ನೀನು ಈ ಹಿಂದೆ ಕೊಟ್ಟಿದ್ದ ಪುಸ್ತಕ ಓದಿದೆ, ತುಂಬಾ ಚೆನ್ನಾಗಿದೆ. ಹೀಗೆ ನೀನು ಬರೆಯುವುದನ್ನೆಲ್ಲಾ ತಂದುಕೊಡ್ತಾ ಇರು, ಓದಿ ಹೇಗಿದೆ ಅಂತ ಹೇಳ್ತೀನಿ, ಆದ್ರೆ ಕಾಸು ಮಾತ್ರ ಕೇಳ್ಬೇಡ' ಎಂದು ತಮಾಷೆಯಾಗಿ ಮಾತನಾಡಿದ್ದರು. ಕೃಷ್ಣ ಅವರ ಜೊತೆಗೂಡಿ ಚೆನ್ನಾಗಿ ನಕ್ಕಿದ್ದೆ. ಇದಲ್ಲದೆ ಅವರು ಕುಳಿತುಕೊಳ್ಳುತ್ತಿದ್ದ ಜಾಗದಲ್ಲಿ ಒಂದಲ್ಲ ಒಂದು ಸಾಹಿತ್ಯಕೃತಿ ಇರುತ್ತಿದ್ದುದನ್ನೂ, ಮಠಕ್ಕೆ ಬಂದು ಹೋಗುತ್ತಿದ್ದ ಡಾ. ಎಲ್. ಬಸವರಾಜು, ಡಾ. ಹೆಚ್. ತಿಪ್ಪೇರುದ್ರಸ್ವಾಮಿ, ಸಿದ್ದಯ್ಯ ಪುರಾಣಿಕ್, ಸಾ.ಶಿ.

ಮರುಳಯ್ಯ ಮುಂತಾದ ಸಾಹಿತಿಗಳನ್ನು, ಕಲಾವಿದರಾದ ಮ.ಈ. ಗುರು, ಪಿ.ಆರ್. ತಿಪ್ಪೇಸ್ವಾಮಿ ಮುಂತಾದವರೊಡನೆ ಆತ್ಮೀಯವಾಗಿ ಅವರು ಮಾತನಾಡಿಸುತ್ತಿದ್ದುದನ್ನೂ ಗಮನಿಸಿದ್ದೇನೆ. ಅವರಿಗೆ ಭಕ್ತಿಪ್ರಧಾನ ನಾಟಕಗಳೆಂದರೆ ಬಲು ಇಷ್ಟ. ಜೆಎಸ್‌ಎಸ್ ಕಲಾಮಂಟಪದ ಕಲಾವಿದರಾದ ನಾವು ಅಭಿನಯಿಸುತ್ತಿದ್ದ ಎಲ್ಲ ನಾಟಕಗಳನ್ನು ಜಗದ್ಗುರುಗಳ ಬಳಿ ಕುಳಿತು ಇಡಿಯಾಗಿ ನೋಡಿ ನಮ್ಮಲ್ಲಿ ಕೆಲವರನ್ನು ಕರೆದು ತಪ್ಪು ಒಪ್ಪುಗಳ ಬಗ್ಗೆ ತಿಳಿಸುತ್ತಿದ್ದರು.

ನನ್ನನ್ನವರು ಗುರುಸಿದ್ದಯ್ಯ ಎಂದೇ ಕರೆಯುತ್ತಿದ್ದರು. ಇವರ್‍ಯಾಕೆ ಹೀಗೆ ಕರೆಯುತ್ತಾರೆ ಎಂದು ಅಂದುಕೊಳ್ಳುತ್ತಲೇ ಇದ್ದ ನನಗೆ ಒಮ್ಮೆ ಅವರೊಡನೆ ನನ್ನ ಸ್ನೇಹಿತರೊಡಗೂಡಿ ಲೋಕಾಭಿರಾಮವಾಗಿ ಮಾತನಾಡುವ ಅವಕಾಶ ಸಿಕ್ಕಿದ್ದಾಗ 'ಅಲ್ಲಾ ಬುದ್ಧಿ ನನ್ನ ಹೆಸರು ಗುರುಸಿದ್ದಪ್ಪ ಅಂತ, ನೀವ್ಯಾಕೆ ಗುರುಸಿದ್ದಯ್ಯ ಅಂತ ಕರೀತಿರಿ' ಎಂದು ಕೇಳಿದ್ದಕ್ಕೆ ಅವರು 'ನಾನು ಕೆಲವರನ್ನು ಹಾಗೆಯೇ ಕರೆಯೋದು, ಡ್ರಿಲ್ ನಾಗಯ್ಯ (ಡ್ರಿಲ್ ಟೀಚರ್ ನಾಗಣ್ಣ), ಶಾಂತಯ್ಯ (ಪ್ರಿನ್ಸಿಪಾಲ್ ಶಾಂತಪ್ಪ), ಎನ್.ಎಸ್. ಮಹಾದೇವಯ್ಯ, ಡಿ.ಎಂ. ಸಿದ್ದಯ್ಯ ಅನ್ನೋ ಹಾಗೆ ನೀನು ಗುರುಸಿದ್ದಯ್ಯ' ಎಂದಿದ್ದರು. ಅವರು ಹಾಗೆ ಕರೆಯುತ್ತಿದ್ದುದರಲ್ಲಿ ಅದೊಂದು ಬಗೆಯ ಆತ್ಮೀಯತೆ ಇದ್ದಿತ್ತು ಎನ್ನುವುದು ನನಗೆ ಅರ್ಥವಾದದ್ದು – ಬಹು ತಡವಾಗಿ.

ಶ್ರೀ ಶಿವರಾತ್ರಿ ರಾಜೇಂದ್ರರು ಹಾಗೂ ಶ್ರೀ ಶಿವಪ್ರಭುಸ್ವಾಮಿಗಳಲ್ಲಿದ್ದ ಅನ್ಯೋನ್ಯತೆ ಅನನ್ಯವಾದುದು. ಅವರಲ್ಲಿದ್ದ ಆ ಸಮರಸದ ಅನುಬಂಧ ಅತಿಬಾಲ್ಯದಿಂದಲೂ ಬೆಸೆದು ಬಂದದ್ದೆಂದು ಬಲ್ಲವರು ಹೇಳುತ್ತಿದ್ದುದರಿಂದಷ್ಟೇ ಅಲ್ಲದೆ ನಾನವರನ್ನು ನೋಡುವಂತಾದ ಐದು ದಶಕಗಳಿಗೂ ಮಿಗಿಲು ಅವಧಿಯಲ್ಲಿ ಸ್ವತಃ ಕಂಡುಂಡವನು. ಮಠದ ಒಳಗೆ ಎಂತೋ ಅಂತೆಯೇ ಜಗದ್ಗುರುಗಳು ಕಾರ್ಯಾರ್ಥ ಎತ್ತ ಹೊರಟರೂ ಅವರ ಜೊತೆ ಇವರಿರುತ್ತಿದ್ದರು. ನೋಡಲೆರಡು ಬೇರೆಬೇರೆ ದೇಹಗಳಾದರೂ ಆತ್ಮಸಂಗಾತದಲ್ಲೊಂದೇ ಎಂಬಂತಿದ್ದ ಅಪೂರ್ವ ಅನುಪಮ ಜೋಡಿ ಅವರಾಗಿದ್ದರು. ಬಾಲ್ಯದಲ್ಲಿ ಸದಾ ಒಟ್ಟೊಟ್ಟಿಗೆ ಇರಬಯಸುತ್ತಿದ್ದ ಇವರ ನಡೆಯನ್ನು ಗಮನಿಸಿದ್ದ ಮಂತ್ರಮಹರ್ಷಿಗಳು ಮುಂದೆ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಇವರನ್ನು ಮೈಸೂರಿಗೆ ಕಳುಹಿಸಿದಾಗಲೂ ಒಟ್ಟೊಟ್ಟಿಗೆ ಇರುವಂತೆಯೇ ವ್ಯವಸ್ಥೆ ಮಾಡಿದ್ದರಿಂದ ಇವರು ಹಾಗೆ ಒಟ್ಟೊಟ್ಟಿಗೆ ಇರುವಂತಾದರೆಂದು ಹೇಳುತ್ತಿದ್ದುದನ್ನು ಕೇಳಿದ್ದೇನೆ. ಆದರೆ ಸ್ವಾತಂತ್ರ್ಯಪೂರ್ವದಲ್ಲೆ (ದೇಶದ ಅಂದಿನ ದುಃಸ್ಥಿತಿ ಊಹಿಸಿಕೊಳ್ಳಿ) ಸಮಷ್ಟಿ ಹಿತದೃಷ್ಟಿಯಿಂದ ಸಮಾಜಸೇವೆಗೆ ತೊಡಗಿ ಪಡಬಾರದ ಕಷ್ಟಪಡುತ್ತಿದ್ದ ಜಗದ್ಗುರುಗಳ ಪಾಡನ್ನು ಕಂಡುಂಡವರಾಗಿದ್ದರೂ ಅವರಿಂದ ದೂರಸರಿಯದೆ ಅವರ ಸಂಕಷ್ಟಗಳಲ್ಲಿ ಭಾಗಿಯಾಗಿ, ಹೆಗಲಿಗೆ ಹೆಗಲುಕೊಟ್ಟು ಅವರ ಒಡನಾಟವನ್ನು ಶ್ರೀ ಶಿವಪ್ರಭುಸ್ವಾಮಿಗಳು ಉಳಿಸಿಕೊಂಡೇ ಬಂದರೆಂಬುದದೆಷ್ಟು ದೊಡ್ಡ ವಿಚಾರ – ಒಂದಿಷ್ಟು ಗಂಭೀರವಾಗಿ ಯೋಚಿಸಬೇಕಾಗಿದೆ.



ಜಗದ್ಗುರುಗಳಿಗಿಂತ ನಾಲ್ಕು ವರ್ಷ ದೊಡ್ಡವರಾಗಿದ್ದರೂ, ಬಾಲ್ಯದಿಂದಲೂ ಒಟ್ಟೊಟ್ಟಿಗೆ ಇದ್ದವರಾಗಿದ್ದರೂ, ಒಂದೇ ನಿಟ್ಟಿನ ತುಡಿತ ದುಡಿತಗಳಲ್ಲಿ ತೊಡಗಿದ್ದವರಾಗಿದ್ದರೂ, ಶ್ರೀ ಶಿವಪ್ರಭುಸ್ವಾಮಿಗಳು ಜಗದ್ಗುರುಗಳಿಗೆ ದಕ್ಕಿದ್ದ ಪೀಠ, ಸ್ಥಾನಮಾನಗಳನ್ನು ಇತರರು ಗೌರವಿಸುತ್ತಿದ್ದಂತೆಯೇ ಗೌರವಿಸುತ್ತಿದ್ದರು. ಪ್ರತಿಯಾಗಿ ಜಗದ್ಗುರುಗಳು ಕೂಡ ಅವರೆದುರು ಅದಾವ ಬಿಗುಮಾನವನ್ನೂ ಪ್ರದರ್ಶಿಸಿದವರಾಗಿರಲಿಲ್ಲ. ಜಗದ್ಗುರುಗಳ ಸಾಧನೆ ಸಿದ್ಧಿಗಳನ್ನು ಮನಗಂಡು ಶ್ರೀಮನ್ಮಹಾರಾಜರು 'ರಾಜಗುರುತಿಲಕ' ಎಂಬ ಬಿರುದನ್ನು, ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿದರೂ, ಷಷ್ಟ್ಯಬ್ದಿ ಸಮಾರಂಭ ನಡೆದು ಸಂಭಾವನಾ ಗ್ರಂಥ ಸಮರ್ಪಣೆಯಾದರೂ, ವರ್ಧಂತಿ ಆಚರಿಸಲ್ಪಡುತ್ತಿದ್ದರೂ, ಅನೇಕರು ಅನೇಕ ಬಗೆಯಲ್ಲಿ ಸನ್ಮಾನಿಸುತ್ತಿದ್ದರೂ ತಮ್ಮನ್ನೊಂದಿಷ್ಟು ಗುರುತಿಸಲಿಲ್ಲವಲ್ಲ, ಹಾಡಿಹೊಗಳಲಿಲ್ಲವಲ್ಲ ಎಂದು ಎಂದೂ ಅಂದುಕೊಂಡವರಲ್ಲ – ಅವರು. ಬದಲಿಗೆ ಅವೆಲ್ಲ ತಮಗೇ ದಕ್ಕಿದವರಂತೆ ಸಂಭ್ರಮಿಸುತ್ತಿದ್ದರು. ಪರಸ್ಪರ ಅರಿವು, ನಿರ್ವ್ಯಾಜಪ್ರೇಮ, ಪ್ರಾಂಜಲ ಮನಃಸ್ಥಿತಿ ಎಂಬ ಅಮೂರ್ತ ಗುಣವಿಶೇಷಗಳು ಅವರಿಬ್ಬರಲ್ಲಿ ತುಂಬಿ ತುಳುಕಾಡುತ್ತಿದ್ದವು; ನಿರಂತರ ಹರಿದಾಡಿದ್ದವು – ಗುಪ್ತಗಾಮಿನಿಯಾಗಿ.

ಮಾತೃಹೃದಯಿಗಳಾಗಿದ್ದ ಜಗದ್ಗುರುಗಳು ಉದಾರವಾಗಿ ಕೊಡುತ್ತಿದ್ದುದು ನೀಡುತ್ತಿದ್ದುದಕ್ಕೆ ಇವರು ಅಡ್ಡಿಯಾಗುತ್ತಿದ್ದರೆಂಬ ಅಪವಾದವೊಂದು ಅವರ ಮೇಲಿತ್ತು. ಖಂಡಿತವಾಗಿಯೂ ಅದು ನಿರಾಧಾರವಾದುದು. ಹಸಿದ ಹಸುಳೆಗೆ ಹೆತ್ತ ತಾಯಿ ಹಾಲುಣಿಸುವುದನ್ನಾರೂ ತಡೆಯಲಾರರು ಅಥವಾ ಬೇಡ ಎನ್ನುವುದಿಲ್ಲ. ಜೇನು ಹಳಿಯಲು ಹೋದಾಗ ಕೈಗೆ ಮೆತ್ತಿಕೊಂಡದ್ದನ್ನು ನೆಕ್ಕಿದರೆ ಅದೇನು ತಪ್ಪಲ್ಲ. ಆದರೆ ಈ ವಿನಾಯಿತಿ, ಇತಿಮಿತಿಗಳನ್ನು ಮೀರಿದ ನಡೆಗಳನ್ನು ಎಲ್ಲರೂ ಪ್ರಶ್ನಿಸಬಹುದಾದಂತೆಯೇ ಶ್ರೀ ಶಿವಪ್ರಭುಸ್ವಾಮಿಗಳೂ ಪ್ರಶ್ನಿಸುತ್ತಿದ್ದರು; ತಡೆಯಬೇಕಾದುದನ್ನು ತಡೆಯುತ್ತಿದ್ದರು; ಅಷ್ಟೆ. ಹಾಗೆ ಪ್ರಶ್ನಿಸುವುದಕ್ಕೆ, ತಡೆಯುವುದಕ್ಕೆ ಅವರು ಅರ್ಹರೂ ಆಗಿದ್ದರು. ಒಂದು ಹಂತದಲ್ಲಿ ವಟವೃಕ್ಷದಂತೆ ಬೆಳೆದುನಿಂತ ಜೆಎಸ್‌ಎಸ್ ಸಂಸ್ಥೆಯು Rome Was Not built With in a Day ಎಂಬಂತೆ ಒಂದು ದಿನದಲ್ಲಿ, ಒಂದು ಕಿರು ಅವಧಿಯಲ್ಲಿ, ದಿಢೀರ್ ಎಂದು ಬೆಳೆದು ನಿಂತದ್ದಲ್ಲ. ಅದು ಜಗದ್ಗುರುಗಳು ಲೋಕಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡಂದಿನಿಂದ ಮುಂದೆ ಐದು ದಶಕಗಳಲ್ಲಿ ಅವರ ಸತತ ಪರಿಶ್ರಮ, ತ್ಯಾಗ, ಸಂಯಮದ ಫಲವಾಗಿ, ಅಪಾರ ಬೆಲೆತೆತ್ತು ಕಟ್ಟಲ್ಪಟ್ಟಿದ್ದೆಂಬುದನ್ನು ನೇರವಾಗಿ ಕಂಡಿದ್ದವರು, ಭಾಗಿಯಾಗಿದ್ದವರು– ಶ್ರೀ ಶಿವಪ್ರಭುಸ್ವಾಮಿಗಳು. ಹಾಗೆ ಕಟ್ಟಲಾಗಿರುವ ಸಂಸ್ಥೆ ನಿರಂತರ ಅರ್ಥಪೂರ್ಣವಾಗಿ, ಸುಸಂಗತವಾಗಿ ಮುನ್ನಡೆಯಬೇಕೆಂಬುದು ಅವರ ಅಭಿಲಾಷೆಯಾಗಿತ್ತು. ಹಾಗಾಗಿ ಮುಖ್ಯವಾಗಿ ಸಂಸ್ಥೆಯ ಹಣ ಅಪವ್ಯಯವಾಗಬಾರದು, ಕಳ್ಳಸುಳ್ಳರಿಗೆ, ಲೋಲುಪರಿಗೆ ವಿನಾಕಾರಣ ತಲುಪಬಾರದು, ಸಂಸ್ಥೆಗೆ ಬರುವವರು ಸರಿಯಾಗಿರಬೇಕು ಇತ್ಯಾದಿ ಇತ್ಯಾದಿಗಳೆಲ್ಲದರ

ಬಗ್ಗೆಯೂ ಅವರು ಕಟ್ಟೆಚ್ಚರ ವಹಿಸುತ್ತಿದ್ದರು. ಅವರು ಮಾಡುತ್ತಿದ್ದ ಚಿಂತನೆಗಳು, ಆಡುತ್ತಿದ್ದ ಮಾತುಗಳು, ಮಾಡುತ್ತಿದ್ದ ಕಾರ್ಯಗಳು, ನೀಡುತ್ತಿದ್ದ ಸಲಹೆ ಸೂಚನೆಗಳೆಲ್ಲವೂ ಸಂಸ್ಥೆಯ ಹಿತದೃಷ್ಟಿ ಹೊತ್ತವುಗಳೇ ಆಗಿರುತ್ತಿದ್ದವು. ಅವರು ಮಾಡುತ್ತಿದ್ದುದು ಮಠ ಕಾಯುವ ಕೆಲಸವನ್ನು, ಸಂಸ್ಥೆ ಬೆಳೆಯಿಸುವ ಕೆಲಸವನ್ನು, ಅವರ ಈ ಆಳದ ಸೂಕ್ಷ್ಮಸ್ತರದ ವಿಚಾರಗಳ, ನಿಲುವುಗಳ ಮರ್ಮವನರಿಯದವರು ಹಾಗೆ ಅವರನ್ನು ವಿನಾಕಾರಣ ದೂರುತ್ತಿದ್ದರು. ನಮ್ಮ ಅನುಕೂಲಕ್ಕೆ ತಕ್ಕಂತೆ ಓಡಾಡಲು ಬಳಸುವ ವಾಹನಕ್ಕೆ ಆಕ್ಸಿಲರೇಟರ್ ಎಷ್ಟು ಮುಖ್ಯವೋ, ಅಷ್ಟೇ ಮುಖ್ಯವಾಗಿ ಅದರ ವೇಗ ನಿಯಂತ್ರಿಸಿ ಅವಘಡ ತಪ್ಪಿಸಲು ಬ್ರೇಕ್ ಕೂಡ ಇರಬೇಕಾದುದು ಅಷ್ಟೇ ಅನಿವಾರ್ಯವಲ್ಲವೆ? ತಮಾಷೆಯ ಸಂಗತಿಯೆಂದರೆ ತಮ್ಮ ಬಗ್ಗೆ ಇದ್ದ ಈ ಅಪವಾದ ಅವರಿಗೆ ಮನವರಿಕೆಯಾದಾಗ ತಮಗೆ ಬೇಕಾದವರೊಡನೆ "ನನ್ನನ್ನು ಸುತ್ತೂರು ಮಠದ 'ಗೊದಮ' (ಓಡುವ ರಥವನ್ನು ನಿಯಂತ್ರಿಸಿ, ಅದು ವಿಹಿತವಾಗಿ ಚಲಿಸುವಂತೆ ಮಾಡಲು ಬಳಸುವ ಸಾಧನಾ ವಿಶೇಷ) ಎಂದೇ ಅಂದುಕೊಳ್ಳಲಿ ನನ್ನದೇನೂ ಅಭ್ಯಂತರವಿಲ್ಲ" ಎನ್ನಲಾರಂಭಿಸಿದ್ದರು – ಅವರು.

ಅವರೂ ಕೂಡ ಸುತ್ತೂರು ಮಠದವರೇ ಆಗಿದ್ದವರು. ಮನಬಂದಂತೆ ಕಾಲಯಾಪನೆ ಮಾಡಬಹುದಿತ್ತು. ಈ ಅರ್ಥಹೀನ ನಿಂದನೆಗೆ ಒಳಗಾಗದೆ ಉಳಿಯಬಹುದಾಗಿತ್ತು. ಆದರೆ ಅವರು ಮಾಡಿದ್ದೇನು? ಮಾಡಿದ್ದು ಯಾರಿಗೆ? ಸಂಸ್ಥೆ ಇಂದಿನಂತಾಗಲು ಅವರ ಕೊಡುಗೆ ಏನು? ನಾವು ಅವರಷ್ಟು ಅರ್ಪಣಾಮನೋಭಾವದಿಂದ ದುಡಿದಿದ್ದೇವೆಯೆ? – ಈ ಎಲ್ಲ ನಿಟ್ಟಿನಲ್ಲಿ ಯೋಚಿಸುತ್ತ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಹಾಗೆ ಮಾಡಿದರೆ ಅದು ಅವರಿಗೆ ನಾವು ಸಲ್ಲಿಸುವ ನಿಜವಾದ ಶ್ರದ್ಧಾಂಜಲಿಯಾಗುತ್ತದೆ.

□

ಆತ್ಮನಿರ್ಯಾಣ ಕರಣವಿಶ್ರಾಂತಿ
ಅಂಗಲೇಪನ ಕ್ರಿಯಾಜ್ಞಾನ ಸರ್ವಾಚಾರ ಸಹಜ ಸಮರಸ
ನಿರಹಂಕಾರ ನಿಷ್ಪತ್ತಿಯಿಂದೈಕ್ಯನ ನಿಜಸ್ಥಲ.
ಆತ್ಮಜ್ಞಾನದಿಂದ ಜ್ಯೋತಿರ್ಲಿಂಗವ ಕಾಣಬಾರದು.
ಮಾತಿನ ಮಾತಿಗೆ ಸಿಲ್ಕುವವನಲ್ಲ.
ಧಾತುಗೆಡಿಸಿ ಮನವ ನೋಡಿ ಕಾಡುವನು.
ಆತುಮನಂತವನಱಿದಡೆ ಆತನೆ ಶಿವಯೋಗಿ
ಆತನ ಪಾದಕ್ಕೆ ಶರಣೆಂಬೆ ಕಾಣಾ, ಚೆನ್ನಮಲ್ಲಿಕಾರ್ಜುನಾ.

**- ಅಕ್ಕಮಹಾದೇವಿ**

# ನುಡಿ ನೇರ.... ನಡೆ ನೇರ

**ರಾಜೇಂದ್ರ ಶಿಶು**

ಶ್ರೀ ಸುತ್ತೂರ ಸುರಧೇನು ಕಾಯಕ ತಪಸ್ವಿಗಳಾದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರ ನೆರಳಾಗಿ ಅವರ ಆಗುಹೋಗುಗಳಲ್ಲಿ ಸಮಚಿಂತಕರಾಗಿ, ಸಂಕಲ್ಪ ಶಕ್ತಿಯಿಂದ ಮಠದ ಚೈತನ್ಯವಾಗಿ ದೂರದರ್ಶಿತ್ವ, ನಿಷ್ಠೆ, ಸಮರ್ಪಣಾಭಾವ, ಕಾಯಕದೀಪ್ತಿಯಿಂದ ಎಲ್ಲರ ಮನ ಸೆಳೆದು, 'ನ್ಯಾಯನಿಷ್ಠುರಿ ದಾಕ್ಷಿಣ್ಯಪರ ನಾನಲ್ಲವಯ್ಯ ಎಂಬ ಅಣ್ಣನ ವಾಣಿಯಂತೆ, ನೇರ ನಡೆ, ನೇರ ನುಡಿಯನ್ನು ಮೈಗೂಡಿಸಿಕೊಂಡವರು ಕ್ಯಾತನಹಳ್ಳಿಯ ಶ್ರೀ ಶಿವಪ್ರಭುಸ್ವಾಮಿಗಳು.

ನಾನವರನ್ನು ಬಾಲ್ಯದಿಂದಲೂ ಬಲ್ಲೆ. ಅವರು ಪ್ರೀತಿ, ವಾತ್ಸಲ್ಯದ ಸಾಕಾರಮೂರ್ತಿಯಾಗಿದ್ದರು. ನನ್ನ ಅನಾರೋಗ್ಯದ ಕಾರಣವೋ ಏನೋ ಆ ಗುರುಮಾತೆ ಶ್ರೀ ರಾಜೇಂದ್ರ ಸ್ವಾಮಿಗಳವರಂತೆ ಪ್ರೀತಿಯಿಂದ ಮಾತನಾಡುತ್ತಿದ್ದರು. ಬುದ್ಧಿ ಹೇಳುತ್ತಿದ್ದರು. "ಬಂದಿರುವ ಕಷ್ಟಗಳನ್ನು ನಾವೇ ಅನುಭವಿಸಿ ತೀರಿಸಿ ಹೋಗಬೇಕು. ಬರುವಾಗ ಏನನ್ನು ತಂದಿರುವೆವೋ ಅದನ್ನು ಪಡೆಯುತ್ತೇವೆ. ಪಡೆದುದರಲ್ಲಿ ತೃಪ್ತಿ ಇರಬೇಕು. "ಕೊಟ್ಟ ಕುದುರೆಯನೇರಲರಿಯದೆ ಮತ್ತೊಂದ ಬಯಸಬಾರದು. ಯಾರು ತೃಪ್ತಿಯಿಂದ ಇರುತ್ತಾರೋ ಅವರೇ ಸಿರಿವಂತರು" ಎಂದು ಎಷ್ಟೋ ಬಾರಿ ಹೇಳುತ್ತಿದ್ದರು. ನನಗೆಷ್ಟು ಅರಿವಾಗುತ್ತಿತ್ತೋ ತಲೆಯಾಡಿಸಿ ಬರುತ್ತಿದ್ದೆ.

ಅಂದು ಅನೇಕರು ತಿಳಿದಿದ್ದರು. ನಮ್ಮ ಪೂಜ್ಯ ಗುರುಗಳನ್ನು ನೋಡಲು ಕ್ಯಾತನಹಳ್ಳಿ ಬುದ್ದಿಯವರು ಅಡ್ಡಿ. ಹೋದಕ್ಷಣ "ಏನ್ಬಂದೆ" ಎಂದು ಕೇಳಿ ನೇರವಾಗಿ "ಆಗಲ್ಲ ಹೋಗು" ಎಂದು ಹೇಳಿಬಿಡುತ್ತಾರೋ, ಅವರಿದ್ರೆ ಕೆಲಸ ಆಗಲ್ಲ ಎನ್ನುತ್ತಿದ್ದರು. ಏಕೆ ಹೀಗೆ ಹೇಳುತ್ತಾರೆ ಎನಿಸುತ್ತಿತ್ತು. ಕಾಲಕ್ರಮೇಣ ಅವರ ಅಂತರಂಗದಲ್ಲಿನ ಭಾವನೆಗಳ ಅರಿವಾಗುತ್ತಿತ್ತು. ಬಹಿರಂಗದಲ್ಲಿ 'ಲೋಕ ವಿರೋಧಿ ಶರಣನಾರಿಗೂ ಅಂಜ' ಎಂಬಂತಿದ್ದರೂ ಅಂತರಂಗದಲ್ಲಿ ಮಮತೆ ವಾತ್ಸಲ್ಯದ, ಸಾಕಾರಮೂರ್ತಿಯಾಗಿ ಕಂಗೊಳಿಸುತ್ತಿದ್ದರು. ಶ್ರೀ ರಾಜೇಂದ್ರ ಸ್ವಾಮಿಗಳವರ ಬಗೆಗಿನ ಅವರ ಕಾಳಜಿ ನಿಜಕ್ಕೂ ಅಚ್ಚರಿಯೆನಿಸುತ್ತಿತ್ತು. ಒಮ್ಮೆ ನಡೆದ ಘಟನೆ ಹೇಳಬೇಕು ಎನಿಸುತ್ತದೆ.

ಒಂದು ದಿನ ಸಂಜೆ ಮಠಕ್ಕೆ ಎಂದಿನಂತೆ ಹೋದೆ. ಜನ ಹೆಚ್ಚಿರಲಿಲ್ಲ. ಕ್ಯಾತನಹಳ್ಳಿ ಶ್ರೀಗಳವರು ಎಂದಿನಂತೆ ಕುಳಿತಿದ್ದರು. ಹೋಗಿ ನಮಿಸಿದೆ. ತಲೆ ಎತ್ತಿ ನೋಡಿ "ಏನ್ಬಂದೆ"

ಎಂದರು. ಹೀಗೆ ನಮಸ್ಕಾರ ಹಾಕೋಣಾಂತ ಬಂದೆ ಬುದ್ದಿ ಎಂದೆ. ಮೂರ್ದಿನದಿಂದ ಕಾಣ್ಣಿಲ್ವಲ್ಲ ಅದ್ಕೆ ಕೇಳ್ದೆ ಅಂದರು. ನಾನು ಮೌನವಾಗಿ ನಕ್ಕೆ. ಮತ್ತೆ ಅವರು ನೀಲಾಂಬಿ ಒಂದ್ಕೆಲ್ಸ ಮಾಡ್ತೀಯಾ ಅಂದ್ರು.

"ಏನು ಹೇಳಿ ಬುದ್ದಿ; ಬುದ್ದಿಯವರು ಹುಷಾರಾಗಿದ್ದಾರಾ?" ಎಂದೆ.

"ಹುಂ, ಹುಷಾರಾಗವ್ರೆ, ನೋಡು ಆ ಸಿರಿವಂತರು ಒಳಕ್ಹೋಗಿ ಎರಡ್ಗಂಟೆ ಟೈಮಾಯ್ತು, ಹೋದವರು ಈಚೆಗೆ ಬರ್ಲೆ ಇಲ್ಲ. ನೀನು ಸೀದಾ ಒಳಗಡೆಗೆ ಹೋಗು" ಅಂದರು.

ಅಯ್ಯೋ ಬುದ್ದಿ.... ಯಾರೋ ಅವ್ರೆ.... ಎಂದೆ.

'ನೋಡು ನಾ ಹೋದ್ರೆ ಒಳ್ಗಿರೋರ್ಗೆ ಕೋಪ ಬರ್ತದೆ. ಸುಮ್ನೆ ಸೀದಾ ಹೋಗಿ ನಮಸ್ಕಾರ ಹಾಕಿ ಬಾ... ಬುದ್ದಿಯವರಿಗೂ ಸ್ವಲ್ಪ ಆರೋಗ್ಯ ಇನ್ನೂ ಸುಧಾರ್ಸಿಲ್ಲ' ಎಂದರು.

ಅವರ್ಹೇಳಿದ ಕ್ಷಣ ಸೀದಾ ಯಾವ ಯೋಚನೆ ಮಾಡದೆ ಒಳಹೊಕ್ಕೆ. ನಾನು ಬಂದುದನ್ನು ಕಂಡು ಗುರುಗಳು "ಬಾ... ಬಾ..." ಅಂದರು. ಆದರೆ ಅಲ್ಲಿದ್ದ ಸಿರಿವಂತರಿಗೆ ಕೋಪ ಬಂದಿತು. ನನ್ನನ್ನು ಬಯ್ಯುತ್ತಾ ಈಚೆಗೆ ಬಂದರು. ನಾನು ನಮಿಸಿ ಹೊರಬಂದೆ.

ಆ ಸಿರಿವಂತರು ಕ್ಯಾತನಹಳ್ಳಿ ಬುದ್ದಿಯವರ ಬಳಿ ಬಂದು "ಯಾರ್ಬುದ್ದಿ ಆ ಹುಡ್ಗಿ ಸೀದಾ ನಿಮ್ಮನ್ನು ಕೇಳ್ದೆ ಬಂದ್ಬಿಟ್ಟಿದಾಳೆ. ಅವಳ್ಗೇನು ಗೊತ್ತಾಗಲ್ವ" ಎಂದರು. ಕೋಪದಿಂದ.

ಕ್ಯಾತನಹಳ್ಳಿ ಶ್ರೀಗಳವರು "ಅವ್ಳು ಅಂಕಪ್ಪನ ಮಗ್ಳು" ಎಂದರು ಅಷ್ಟರಲ್ಲಿ ನಾನು ಈಚೆಗೆ ಬಂದೆ, ಅವರು ನನ್ನತ್ತ ತಿರುಗಿ "ಇಷ್ಟು ದೊಡ್ಡವಳಾಗಿ ಗುರುಗಳು ಬೇರೆಯವರೊಡನೆ ಮಾತಾಡ್ತಿದ್ದಾರೆ ಹೋಗಬಾರದೆಂದು ತಿಳೀಬಾರದ"? ಅಂಕಪ್ಪನ ಮಗ್ಳಾದ್ರೇನು.... ಎಂದೆಲ್ಲಾ ಬೈದರು. ಕ್ಯಾತನಹಳ್ಳಿ ಶ್ರೀಗಳವರು ನಗುತ್ತಿದ್ದರು. ನನಗೂ ಸ್ವಲ್ಪ ಬೇಸರವಾಯಿತು. ಆ ಕ್ಷಣ ಅಂದೆ.

"ಅಪ್ಪಾಜಿ... ಹೇಗಿರಬೇಕೆಂಬುದನ್ನು ನಾನು ಕಲಿತಿದ್ದೇನೆ. ನಮ್ಮ ಬುದ್ದಿಯವರಿಗೆ ಹುಷಾರಿಲ್ಲ. ನೀವು ಹೋಗಿ ಎರಡ್ಗಂಟೆ ಮಾತಾಡಿದ್ರೆ ಹೇಗೆ ಹೇಳಿ. ಬಂದ ಭಕ್ತರೆಲ್ಲ ನಿಮ್ಮಂತೆ ಮಾಡಿದ್ರೆ ಅವರ ಆರೋಗ್ಯ ಏನಾಗುತ್ತೆ ಹೇಳಿ. ಆಗ ನಮ್ಮಂಥವರ ಗತಿ ಏನು? ಅದಕ್ಕಾಗಿ ಹಾಗೆ ಮಾಡಿದೆ ತಪ್ಪು ತಿಳಿಯಬೇಡಿ ಎಂದೆ. ಕಣ್ಣೀರು ತುಂಬಿ ಬಂದಿತ್ತು. ನಾನು ಹಾಗೆ ಹೇಳಿದ್ದನ್ನು ಕೇಳುತ್ತ ಸಿರಿವಂತರ ಕೋಪ ತಣ್ಣಗಾಗಿರಬೇಕು. ಮಾತನಾಡದೆ ಮೌನವಾಗಿ ಹೊರಹೊರಟರು.

ನೀನಲ್ದೆ ಇದ್ದಿದ್ರೆ, ನೀನು ಹೇಳ್ದೆ ಹೋಗಿದ್ರೆ ಬಾಯಿಗ್ಬಂದಂಗೆ ಬೈತಾ ಇದ್ದ. ನೀಲಾಂಬಿ ನಮ್ಮ ಗುರುಗಳು ಇನ್ನೂ ನೂರಾರು ವರ್ಷ ಇರಬೇಕು... ಇರಬೇಕು ಎಂದು ಹೇಳಿದರು.

ಅವರ ಅಂತರಂಗದ ತುಂಬೆಲ್ಲ ಶ್ರೀ ರಾಜೇಂದ್ರರೇ ತುಂಬಿದ್ದರು. ತಾಯಿಯಂತೆ ಅವರನ್ನು



ರಕ್ಷಿಸುತ್ತಿದ್ದರು. ಸ್ನೇಹಿತರಂತೆ ಒಡನಾಡಿಯಾಗಿದ್ದರು. ಆದರೆ ಆ ದಿನ ಗುರುಮಾತೆ ಶಿವನ.... ಕರೆಗೆ ಓಗೊಟ್ಟು ಹೋದ ಆ ದುರ್ದಿನ .... ನೆನೆಯಲೇ ಆಗದು.

"ಅಯ್ಯೋ .... ನಮ್ಮನ್ಬಿಟ್ಟು ಹೊರಟೋದ್ರು ಕಣವ್ವ.... ! ಎಂದು ಆರ್ತತೆಯ ದನಿ ಕೇಳಿ ಈಗೇನ್ಮಾಡ್ಲಿ.... ಈಗೇನ್ಮಾಡ್ಲಿ.... ಎಂಬ ಪ್ರಶ್ನೆ ಕೇಳಿ ದುಃಖ ಒತ್ತರಿಸಿ ಬಂದಿತ್ತು. "ಅತ್ರೆ ಬರ್ತ್ತಾರವ್ವ.... ಅವರ್ನ ಕಳಕೊಂಡು ನಾವಿನ್ನು ಬದುಕಿದ್ದೀವಿ" ಎನ್ನುತ್ತಿದ್ದರು. ನಿಜ. ಅಂಥ ವಾತ್ಸಲ್ಯ ಮಾತೆಯನ್ನು ಕಳೆದುಕೊಂಡಿದ್ದೆವು. ಅವರ ಜೀವನ ಮನಪೂರ್ತಿ ಶ್ರೀ ರಾಜೇಂದ್ರರೇ ತುಂಬಿದ್ದರು.

'ನಾನು ನನ್ನ ಗುರುಮಾತೆಯನ್ನು ಇವರಲ್ಲಿ ಕಾಣುತ್ತಿದ್ದೇನೆ. ಅದೇ ವಾತ್ಸಲ್ಯ.... ಅದೇ ಪ್ರೀತಿ.... ಅನೇಕ ಬಾರಿ ತಿಳುವಳಿಕೆಯನ್ನು ನೀಡುತ್ತಿದ್ದರು. ಒಮ್ಮೆ ನಮಿಸಿ ನಿಂತವಳನ್ನು ಕೇಳಿದರು. “ನೀಲಾಂಬಿ ಎಷ್ಟು ದುಡ್ಡು ಇಟ್ಟಿದೀಯ ಬ್ಯಾಂಕಲ್ಲಿ” ಅಂದ್ರು.

'ಇಲ್ಲ ಬುದ್ದಿ, ಈಗ್ತಾನೆ ತಮ್ಮ ಮನೆ ಕಟ್ಟಿದ್ನಲ್ಲ ಎಲ್ಲ ಕೊಟ್ಟೆ' ಅಂದೆ.

ಮನೇಗೂ ಸಹಿ ಹಾಕಿದ್ನಂತೆ, ಪೆದ್ದಿ, ಹಣಾನ ಕೊಟ್ಟು ಏನ್ಮಾಡ್ಬೇಕು ಅಂತಿದ್ದಿ ಅಂದ್ರು.

'ಎಂದಿದ್ರು ಅವನ್ಗೆ ಅಲ್ವ ಬುದ್ದಿ' ಅಂದೆ. 'ಸರಿಕಣಮ್ಮ. ನೀನು ಅವನ್ಗೆ ಕೊಡು. ಆದರೆ ಏನಾದ್ರು ಬೇಕಾಯ್ತು. ವಯಸ್ಸಾದ ಮೇಲೆ ಹೀಗೆ ಇರೋಕೆ ಆಗ್ತದ? ಆಗ ಯಾರನ್ನ ಕೇಳ್ತಿ. ಯಾವ ಅಣ್ಣ, ಯಾವ ತಮ್ಮ. ಅಕ್ಕ ತಂಗಿ ಎಲ್ಲ ಅವರವರ ಸಂಸಾರ ನೋಡ್ಕೋತಾರೆ. ನಿನ್ನ ಯಾರು ನೋಡ್ಕೋತಾರೆ ಹೇಳು. ತಮ್ಮ ಮಾಡ್ಬಹುದು... ಆದರೆ ... ಎಂದೆಲ್ಲ ಹೇಳಿ ಕೊನೆಗೆ

"ಇನ್ನಾದ್ರು ಒಂದಷ್ಟು ಇಟ್ಕೊಳವ್ವ... ಅದು ಆಪದ್ಧನ. ಬೇಕಾಗುತ್ತೆ. ನೀನು ಇಷ್ಟು ಓದಿ ಏನೂ ಗೊತ್ತಾಗೋದಿಲ್ಲ" ಎಂದರು.

ಅವರು ಅಂದು ಹೇಳಿದ ಮಾತು ಇಂದು ಅರಿವಿಗೆ ಬರುತ್ತಿದೆ.

ಮತ್ತೊಮ್ಮೆ ನನ್ನ ಕೃತಿ ಬಿಡುಗಡೆಯ ಸಮಾರಂಭದಲ್ಲಿ ದಿವ್ಯ ಸಾನ್ನಿಧ್ಯವನ್ನು ವಹಿಸಿದ್ದರು. ಅದೊಂದು ಸುಯೋಗ. ಅಂದು ಅವರು ಹೇಳಿದ ಮಾತು ನನ್ನ ಬಾಳಿಗೆ ಸಂಜೀವಿನಿಯಾಗಿದೆ. ನಮ್ಮ ಮಠದ ಶಿಶುವಾದ ನೀಲಾಂಬಿಕೆಯವರು ರಾಜೇಂದ್ರ ಶಿಶು ಎಂಬ ಕಾವ್ಯನಾಮದಿಂದ ಬರಹಗಾರ್ತಿಯಾಗುವ ಎಲ್ಲ ಸಂಸ್ಕಾರಗಳನ್ನು ಪಡೆದಿರುವಂಥವರು. ಇವರ ತಂದೆ ದಿವಂಗತ ಅಂಕಪ್ಪನವರು ಒಳ್ಳೆಯ ಬರಹಗಾರರು ನಾಟಕಕಾರರು. ನಮ್ಮ ಜನತೆಗೆ ಓದುವ ಸಮಯವಿಲ್ಲ. ಅವರ ಆಕರ್ಷಣೆ ಬೇರೆ ಬೇರೆ ಇರುತ್ತದೆ. ಇಂಥ ಸಂದರ್ಭದಲ್ಲಿ ಇಂಥ ಕೃತಿ ಎಲ್ಲರೂ ಓದುವಂಥದ್ದು... ಕೃತಿ ಬಿಡುಗಡೆಯ ಈ ಸಮಾರಂಭ ಸದಭಿರುಚಿಯ ಸಮಾರಂಭವಾಗಿದೆ. ಶರಣರ ಪರಂಪರೆ ವಚನ ರಚನೆ ಮತ್ತೆ ಸೃಷ್ಟಿಯಾಗಿರುವುದು ಸಂತಸಕರ. ನಾಡು ಹೆಮ್ಮೆ ಪಡುವ ಕಾರ್ಯ. ಇದು ವಚನ ರಚನೆ. ಇಂಥ ವಚನಗಳನ್ನು ರಚಿಸಿ

ಎಲ್ಲರಿಗೂ ಕೀರ್ತಿ ತಂದಿದ್ದಾರೆ" ಇನ್ನೂ ಅನೇಕ ರೀತಿಯಲ್ಲಿ ಮಾತನಾಡಿ ನನಗೆ ಉತ್ಸಾಹ ತುಂಬಿದರು"... ನಮ್ಮ ಸಂಸ್ಥೆಯ ನಮ್ಮ ಮಠದ ಶಿಶು, ಸಾಕಿದ್ದಕ್ಕೆ ಕೀರ್ತಿ ತಂದಳು ಎಂದೆಲ್ಲ ಪ್ರಸಿದ್ಧ ಅಂಕಣಕಾರರಾದ ಶ್ರೀ ಎಚ್ಚೆಸ್ಕೆಯವರಿಗೆ ಅವರಂದು ಹೇಳಿದಾಗ ನನ್ನ ಕಂಗಳು ತುಂಬಿಬಂತು; ಬದುಕು ಸಾರ್ಥಕವೆನಿಸಿತ್ತು.

ಹಿರಿಯರಾದವರನ್ನು ಮತ್ತೆ ಮತ್ತೆ ಸಮಯ ಸಿಕ್ಕಾಗಲೆಲ್ಲ ನೋಡಬೇಕು. ಅವರ ಹಾರೈಕೆ ಪಡೆಯಬೇಕು. ಇದು ನನ್ನ ತಂದೆಯವರ ಆಜ್ಞೆ. ಅದನ್ನು ಚಿಕ್ಕಂದಿನಿಂದಲೇ ತಿಳಿಸಿದ್ದರು. ಆ ಕಾರಣ ಇಂದಿಗೂ ಹಿರಿಯರನ್ನು ನೋಡಬೇಕೆನಿಸಿದಾಗ ಹೋಗಿ ನೋಡುವ ವಾಡಿಕೆ. ಅಂತೆ ಮಠಕ್ಕೆ ಹೋದಾಗಲೆಲ್ಲ ಕ್ಯಾತನಹಳ್ಳಿ ಶ್ರೀಗಳವರಿಗೆ ನಮಿಸಿ ಬರುತ್ತಿದ್ದೆ. ಒಮ್ಮೊಮ್ಮೆ ಗುರುತಿಸುತ್ತಿದ್ದರು. ಆದರೆ ಕಾಲಕ್ರಮೇಣ ಸುಮ್ಮನೆ ನೋಡಿ ನಗುತ್ತಿದ್ದರು. ಆ ನಗೆಯಲ್ಲಿ ನನ್ನ ಗುರುಮಾತೆ ಶ್ರೀ ರಾಜೇಂದ್ರರನ್ನೇ ಕಾಣುತ್ತಿದ್ದೆ. ತಾವು ಅನಾರೋಗ್ಯದಿಂದಿದ್ದರೂ ಹುಷಾರಾಗಿದ್ದೀಯ? ಎಂದು ಕೇಳುತ್ತಿದ್ದ ಮಾತನ್ನು ಕೇಳಿ ಹೃದಯ ತುಂಬಿ ಬರುತ್ತಿತ್ತು; ಅಂದಿನ ರಾಜೇಂದ್ರ ಶ್ರೀಗಳವರೇ ಇವರು ಎನಿಸುತ್ತಿತ್ತು. ಇಂದು ಅವರು ಹೇಳುತ್ತಿದ್ದ ಮಾತುಗಳು ನೆನಪಿನಂಗಳದಲ್ಲಿ ಮಾಸದೆ ಉಳಿದಿವೆ. ಬರೆಯ ಹೊರಟರೆ ಹೃದಯ ತುಂಬಿ, ಕಣ್ತುಂಬಿ ಬರುತ್ತದೆ.

□

ಇತ್ತ ಬಾರಯ್ಯಾ ಇತ್ತ ಬಾರಯ್ಯಾ ಎಂದು
ಭಕ್ತರೆಲ್ಲರೂ ಕೂರ್ತು ಹತ್ತೆ ಕರೆವುತ್ತಿರಲು
ಮತ್ತೆ ಕೆಲಕ್ಕೆ ಹೋಗಿ ಶರಣೆಂದು ಹಸ್ತ ಬಾಯನೆ ಮುಚ್ಚಿ
ಕಿಱಿದಾಗಿ ಭೃತ್ಯಾಚಾರವ ನುಡಿದು
ವಿನಯ ತದ್ಧ್ಯಾನವುಳ್ಳಡೆ ಎತ್ತಿಕೊಂಬನಯ್ಯಾ
ಕೂಡಲಸಂಗಮದೇವ ಪ್ರಮಥರ ಮುಂದೆ.

**- ಬಸವಣ್ಣ**

# ಶ್ರೀಮಠದ ಮಹಾಮಹಿಮರು ಕ್ಯಾತನಹಳ್ಳಿ ಶ್ರೀ ಶಿವಪ್ರಭುಸ್ವಾಮಿಗಳು

**ನಗರ್ಲೆ ಶಿವಕುಮಾರ**

ಕರುನಾಡು ಶರಣರ, ಸಂತರ, ದಾಸರ, ಪವಾಡಪುರುಷರ, ಮಹಾತ್ಮರ ಪುಣ್ಯಧಾಮ. ಈ ನಾಡಿನಲ್ಲಿ ನಡೆದಿರುವ ಅನ್ನ ಮತ್ತು ಅರಿವಿನ ದಾಸೋಹದಲ್ಲಿ ವೀರಶೈವ ಮಠಗಳ ಪಾತ್ರ ಅಮೋಘವಾದದ್ದು. ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿದ ಶರಣರ ನಾಡಿನಲ್ಲಿ ಸುತ್ತೂರು ಶ್ರೀಮಠದ ಸೇವೆ ಅನನ್ಯ. ಶ್ರೀಮಠದ ಮಹಾಮಹಿಮರಲ್ಲಿ ಕ್ಯಾತನಹಳ್ಳಿ ಶ್ರೀ ಶಿವಪ್ರಭುಸ್ವಾಮಿಗಳವರು ಒಬ್ಬರು.

**ಬಾಲ್ಯ**

ನಂಜನಗೂಡು ತಾಲ್ಲೂಕಿನ ಸುತ್ತೂರು ಶ್ರೀಕ್ಷೇತ್ರ ಕಪಿಲಾನದಿ ತೀರದಲ್ಲಿರುವ ಪ್ರಕೃತಿದೇವಿ ಬೀಡುಬಿಟ್ಟ ಪುಣ್ಯತಾಣ. 1912 ನೇ ಇಸವಿ ಅಕ್ಟೋಬರ್ 16ನೆಯ ತಾರೀಖಿನಂದು ಲಿಂಗಪೂಜಾನಿಷ್ಠರಾದ ಶರಣ ಗುರುಸಿದ್ದಪ್ಪ ಮತ್ತು ಶರಣೆ ಸಿದ್ಧಲಿಂಗಮ್ಮನವರಿಗೆ ಸುಪುತ್ರ ಜನನವಾಯಿತು. ಈ ಶಿಶುವೇ ಶರಣ ಶಿವರಾತ್ರಿಯಪ್ಪನವರು. ಅವರು ಬಾಲ್ಯದಿಂದಲೂ ಶ್ರೀಮಠದ ಸೇವಾಕಾರ್ಯಗಳಲ್ಲಿ ಇದ್ದು, ಸುತ್ತೂರು ಶ್ರೀಮಠದ ಜಗದ್ಗುರುಗಳವರ ಪ್ರೀತಿಗೆ ಪಾತ್ರರಾಗಿದ್ದರು.

**ಶಿಕ್ಷಣ**

ಸುತ್ತೂರಿನಲ್ಲಿ ವಿದ್ಯಾಭ್ಯಾಸ ನಡೆಯಿತು. ನಂತರ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜೊತೆಗೆ ಮೈಸೂರಿನಲ್ಲಿ ಸಂಸ್ಕೃತ ಶಿಕ್ಷಣವನ್ನು ಪಡೆದರು. ಮಂತ್ರಮಹರ್ಷಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳವರ ಕಟ್ಟೆಚ್ಚರದಲ್ಲಿ ಬೆಳೆದರು. ಸುತ್ತೂರು ಶ್ರೀಮಠದ ಸೇವಾದೀಕ್ಷೆಯನ್ನು ಕಿರಿಯ ವಯಸ್ಸಿನಲ್ಲಿಯೇ ಸ್ವೀಕರಿಸಿದರು. ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜೊತೆಗೆ ಅವರ ಸೇವಾಕಾರ್ಯಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು.

**ಸಾಧನೆ ಮತ್ತು ಸಿದ್ಧಿ**

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಕ್ಯಾತನಹಳ್ಳಿಯ ಶ್ರೀಮಠಕ್ಕೆ ಮಠಾಧಿಪತಿಗಳಾಗಿ ಶ್ರೀ ಶಿವಪ್ರಭುಸ್ವಾಮಿಗಳು ನಿಯುಕ್ತರಾದರು. ಕ್ಯಾತನಹಳ್ಳಿ ಶ್ರೀಮಠದಲ್ಲಿ ಹೆಚ್ಚುಕಾಲ ನಿಲ್ಲದೆ ಸುತ್ತೂರು ಮಠದಲ್ಲೇ ಉಳಿದು, ಅಗತ್ಯವಿದ್ದಾಗ ಕ್ಯಾತನಹಳ್ಳಿ ಶ್ರೀಮಠಕ್ಕೆ

ಹೋಗಿ ಬರುತ್ತಿದ್ದರು. ಸುತ್ತೂರು ಶ್ರೀಮಠದಲ್ಲಿ ಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಹಾಯಕರಾಗಿ ಮತ್ತು ಎಲ್ಲ ಕಾರ್ಯಗಳ ಬೆನ್ನೆಲುಬಾಗಿದ್ದರು. ಶ್ರೀ ರಾಜೇಂದ್ರ ಮಹಾಸ್ವಾಮಿಗಳೊಂದಿಗೆ ಹಳ್ಳಿಗಳಿಗೆ ಧಾನ್ಯದ ಭಿಕ್ಷಕ್ಕೆ ಹೋದಾಗ ಶ್ರೀಮಠದ ದಾಸೋಹ ಮತ್ತು ಅರಿವಿನ ದೃಷ್ಟಿಯಿಂದ ಭಕ್ತರಿಂದ ಹೆಚ್ಚಿನ ದವಸಧಾನ್ಯ ಪಡೆಯುವಲ್ಲಿ ಕ್ಯಾತನಹಳ್ಳಿ ಶ್ರೀಗಳು ಯಶಸ್ವಿಯಾಗಿದ್ದರು.

ಬಡವರನ್ನು ಕಂಡು ಮರುಗುವ ಮಾತೃಹೃದಯದ ಶ್ರೀ ರಾಜೇಂದ್ರ ಸ್ವಾಮಿಗಳವರಿಗೆ ಅನೇಕಬಾರಿ ಭಕ್ತರಿಗೆ ಸಹಾಯ ಮಾಡುತ್ತಿದ್ದರು. ಎಲ್ಲರಿಗೂ ಸಹಾಯ ಮಾಡುವ ಅಗತ್ಯವಿಲ್ಲವೆಂದು ಕ್ಯಾತನಹಳ್ಳಿ ಶ್ರೀಗಳು ರಾಜೇಂದ್ರಸ್ವಾಮಿಗಳವರಿಗೆ ಹೇಳುತ್ತಿದ್ದರು. ಶ್ರೀ ರಾಜೇಂದ್ರ ಸ್ವಾಮಿಯವರಿಗಾಗಿ ತಾವು ಯಾವುದೇ ಬಗೆಯ ನಿಷ್ಠುರಕ್ಕೊಳಗಾಗಲೂ ಹಿಂಜರಿಯುತ್ತಿರಲಿಲ್ಲ.

ಪಾದಪೂಜೆಗೆ ಶ್ರೀ ರಾಜೇಂದ್ರ ಸ್ವಾಮಿಗಳೊಂದಿಗೆ ಒಂದು ಊರಿಗೆ ಹೋಗಿದ್ದಾಗ, ಆಲೂರಿನಲ್ಲಿ ಎರಡು ಗುಂಪು ಇದೆ ಎಂಬುದನ್ನು ತಿಳಿದು ಊರಿನ ಎರಡು ಗುಂಪುಗಳು ಒಂದಾಗುವವರೆಗೂ ನಮ್ಮ ಸ್ವಾಮಿಗಳು ಪಾದಪೂಜೆಗೆ ಕೂರುವುದಿಲ್ಲವೆಂದು ತಿಳಿಸಿ, ಎರಡು ಗುಂಪುಗಳು ಒಂದಾಗಲು ಕಾರಣರಾದರು.

ಶ್ರೀಮಠಕ್ಕೆ ಬರುತ್ತಿದ್ದ ವಿದ್ಯಾರ್ಥಿಗಳು, ಶಿಕ್ಷಕರು, ಅಧಿಕಾರಿಗಳು, ರಾಜಕಾರಣಿಗಳು, ಭಕ್ತಾದಿಗಳು ಇವರುಗಳ ಕಷ್ಟ ಸುಖಗಳನ್ನು ವಿಚಾರಿಸಿ, ತೀರಾ ಅವಶ್ಯಕವಿದ್ದರೆ ಶ್ರೀ ರಾಜೇಂದ್ರ ಸ್ವಾಮಿಗಳವರ ಹತ್ತಿರ ಬಿಡುತ್ತಿದ್ದರು, ಇಲ್ಲವಾದರೆ ತಾವೇ ಮಾರ್ಗೋಪಾಯಗಳನ್ನು ಸೂಚಿಸಿ ಕಳುಹಿಸುತ್ತಿದ್ದರು.

ಜೆಎಸ್‌ಎಸ್ ಮಹಾವಿದ್ಯಾಪೀಠ ಸ್ಥಾಪಿಸಿದ ಶ್ರೀ ರಾಜೇಂದ್ರ ಮಹಾಸ್ವಾಮಿಗಳವರಿಗೆ ಶಾಲಾ ಕಾಲೇಜುಗಳನ್ನು ತೆರೆಯಲು 'ಶಿವರಾತ್ರೀಶ್ವರ ಇದ್ದಾನೆ ಬುದ್ದಿ' ಹಿಡಿದ ಕೆಲಸ ಬಿಡಬೇಡಿ ಬುದ್ದಿ ಎಂದು ಯಾವಾಗಲೂ ಆತ್ಮಸ್ಥೈರ್ಯ ತುಂಬಿದವರು ಕ್ಯಾತನಹಳ್ಳಿ ಶ್ರೀಗಳವರು.

"ಶ್ರೀ ರಾಜೇಂದ್ರ ಸ್ವಾಮಿಗಳು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸುವಲ್ಲಿ ಕ್ಯಾತನಹಳ್ಳಿ ಶ್ರೀಗಳು ಶ್ರೀಮಠದ ರಕ್ಷಣಾ ಗೋಡೆಯಂತಿದ್ದರು."

ಧಾರವಾಡ ಸಮೀಪದ ಒಂದು ಕಾರ್ಯಕ್ರಮಕ್ಕೆ ಶ್ರೀ ರಾಜೇಂದ್ರ ಸ್ವಾಮಿಗಳೊಂದಿಗೆ ಹೋಗುವಾಗ ಅನಿರೀಕ್ಷಿತವಾಗಿ ನಡೆದ ಕಾರಿನ ಅಪಘಾತದಲ್ಲಿ ಸಣ್ಣಪುಟ್ಟ ಗಾಯಗಳೊಂದಿಗೆ, ಶ್ರೀಗಳೊಂದಿಗೆ ನಗುನಗುತ್ತ ಭಕ್ತರನ್ನೇ ಸಮಾಧಾನಪಡಿಸಿದವರು ಕ್ಯಾತನಹಳ್ಳಿ ಶ್ರೀಗಳವರು.

ಕ್ಯಾತನಹಳ್ಳಿ ಶ್ರೀಗಳು ಶ್ರೀ ರಾಜೇಂದ್ರ ಸ್ವಾಮಿಗಳೊಂದಿಗೆ ಅಮೇರಿಕಾ, ಇಂಗ್ಲೆಂಡ್ ಮತ್ತು ಇತರ ರಾಷ್ಟ್ರಗಳ ಪ್ರವಾಸವನ್ನು ಮಾಡಿ ಬಂದಿದ್ದರು.

ಶ್ರೀ ರಾಜೇಂದ್ರ ಮಹಾಸ್ವಾಮಿಗಳವರು ಲಿಂಗೈಕ್ಯರಾದಾಗ ಕ್ಯಾತನಹಳ್ಳಿ ಶ್ರೀಗಳು ಅಪಾರ ವೇದನೆಯನ್ನು ಅನುಭವಿಸಿದ್ದರು. ಸ್ವಾಮೀಜಿಯವರ ಫೋಟೋ ನೋಡಿದರೆ ಸಾಕು,



ಕಣ್ಣೀರಧಾರೆ ಹಾಗೇ ಹರಿಯುತ್ತಿತ್ತು. ಆ ನೋವನ್ನು ಹೇಗೆ ಸಹಿಸಿಕೊಂಡರೋ ಗೊತ್ತಿಲ್ಲ ಅಂತೂ ಅವರಿಗೆ ಸುಧಾರಿಸಿಕೊಳ್ಳಲು ಕೆಲ ತಿಂಗಳುಗಳೇ ಆದವು. ಸ್ವಾಮೀಜಿಯವರ ಒಡನಾಡಿಯಾಗಿ ಸುತ್ತೂರು ಮಠಕ್ಕೆ ತಮ್ಮದೇ ಆದ ಸೇವೆಯನ್ನು ಕ್ಯಾತನಹಳ್ಳಿ ಶ್ರೀಗಳು ಸಲ್ಲಿಸಿದ್ದಾರೆ.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರನ್ನು ಕಂಡರೆ ಕ್ಯಾತನಹಳ್ಳಿ ಶ್ರೀಗಳವರಿಗೆ ಅತೀವ ಪ್ರೀತಿ. ತಮ್ಮ ಎದುರಿಗೆ ಬೆಳೆದ ಶ್ರೀಗಳು ಅಂತಾರಾಷ್ಟ್ರೀಯ ಮಟ್ಟಕ್ಕೆ ಶಿಕ್ಷಣ ಸಂಸ್ಥೆಗಳನ್ನು ತೆರೆದಿರುವುದಕ್ಕೆ ಮನದಲ್ಲೇ ಸಂತೋಷಪಡುತ್ತಿದ್ದರು.

ಕ್ಯಾತನಹಳ್ಳಿ ಶ್ರೀಗಳವರು ದಿನಾಂಕ 14.2.2010 ರ ಭಾನುವಾರ ರಾತ್ರಿ ಲಿಂಗೈಕ್ಯರಾದಾಗ ಶ್ರೀಮಠದ ಭಕ್ತಾದಿಗಳಿಗೆ ಅಪಾರ ನೋವುಂಟಾಯಿತು. ಇನ್ನು ಮೂರು ವರ್ಷಗಳು ಬದುಕಿದ್ದರೆ ಶತಮಾನವನ್ನು ಪೂರೈಸುತ್ತಿದ್ದರು. ಶ್ರೀಮಠದ ಭಕ್ತಾದಿಗಳಿಗೆ ಕ್ಯಾತನಹಳ್ಳಿ ಶ್ರೀಗಳವರ ಶತಮಾನೋತ್ಸವವನ್ನು ಆಚರಿಸಬೇಕೆಂಬ ಆಸೆ ಇತ್ತು, ಭಕ್ತಾದಿಗಳ ಆಸೆ ಈಡೇರಲಿಲ್ಲ. ಗಟ್ಟಿಮುಟ್ಟಾಗಿದ್ದ ಕ್ಯಾತನಹಳ್ಳಿ ಶ್ರೀಗಳವರಿಗೆ ಇತ್ತೀಚೆಗೆ ಅನಾರೋಗ್ಯ ಕಾಡಿತ್ತು.

ಸುತ್ತೂರು ಶ್ರೀಮಠಕ್ಕೆ ಕ್ಯಾತನಹಳ್ಳಿ ಶ್ರೀಗಳು ಸಲ್ಲಿಸಿದ ಅನುಪಮ ಸೇವೆ ಅನನ್ಯವಾದದ್ದು. ತಮ್ಮ ಕೊನೆಯುಸಿರಿನ ತನಕವೂ ಶ್ರೀಮಠದ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಎಲ್ಲ ಸೇವಾಕಾರ್ಯಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದರು.

ಸುತ್ತೂರು ಶ್ರೀಮಠದ ನಾಲ್ಕು ಜಗದ್ಗುರುಗಳವರನ್ನು ಕಂಡ ಕೀರ್ತಿ ಕ್ಯಾತನಹಳ್ಳಿ ಶ್ರೀ ಶಿವಪ್ರಭುಸ್ವಾಮಿಗಳವರದು.

ಕಬ್ಬುನದ ಗುಂಡಿಗೆಯಲ್ಲಿ ರಸದ ಭಂಡವ ತುಂಬಿ
ಹೊನ್ನ ಮಾಡಬಲ್ಲಡೆ ಅದು ಪರುಷ ಕಾಣಿರಣ್ಣಾ.
ಲಿಂಗ ಬಂದುಂಬಡೆ ಪ್ರಸಾದಕಾಯವಪ್ಪಡೆ
ಅಂದಂದಿಗೆ ಭವಕರ್ಮ ಮುಟ್ಟಲಮ್ಮವು ಕಾಣಿರೆ!
ಆದಿಯ ಪ್ರಸಾದಕ್ಕೆ ಬಾಧೆಯಿಲ್ಲ ಕಾಣಿರೆ !
ಶಶಿಯಲ್ಲಿ ಕರಗದು, ಬಿಸಿಲಲ್ಲಿ ಕೊರಗದು.
ರಸವುಂಡ ಹೊನ್ನು ಗುಹೇಶ್ವರಾ, ನಿಮ್ಮ ಶರಣ !

**- ಅಲ್ಲಮಪ್ರಭುದೇವರು**

# ಕರ್ಮಯೋಗಿ ಕ್ಯಾತನಹಳ್ಳಿ ಪೂಜ್ಯ ಶ್ರೀ ಶಿವಪ್ರಭುಸ್ವಾಮಿಗಳವರು

**ಪಿ. ವೀರಭದ್ರಪ್ಪ**

ಸುತ್ತೂರು ವೀರಸಿಂಹಾಸನ ಮಠದ ಮಹಾಪುರುಷರು ಲಕ್ಷಾಂತರ ಜನರ ಜೀವನವನ್ನು ಪಾವನಗೊಳಿಸಿದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ನಿಕಟವರ್ತಿಗಳಾಗಿದ್ದು ಪರಮ ಪೂಜ್ಯ ಶ್ರೀ ಶಿವಪ್ರಭುಸ್ವಾಮಿಗಳವರು ಸಾಮಾಜಿಕ ಪ್ರಜ್ಞೆ ಹಾಗೂ ದೂರದೃಷ್ಟಿತ್ವ ಇವುಗಳ ಪ್ರತೀಕದಂತಿದ್ದರು. ಶ್ರೀಗಳವರು ಕಂಡದ್ದನ್ನು ಕಂಡ ಹಾಗೆ ಹೇಳಿ ಜನಮನದಲ್ಲಿ 'ನೇರ ನುಡಿಯವರು' ಮತ್ತು 'ನಿಷ್ಠುರವಾದಿ'ಗಳೆನಿಸಿದ್ದರು. ಇವರು ಕಾಯಾ ವಾಚಾ ಮನಸಾ ಶ್ರೀಮಠ ಹಾಗೂ ಮಹಾವಿದ್ಯಾಪೀಠದ ಏಳಿಗೆಗೆ ಶ್ರಮಿಸಿದ್ದಾರೆ. ಪೂಜ್ಯ ಶ್ರೀಗಳು ನಿಸ್ವಾರ್ಥ ಸೇವಾ ಮನೋಭಾವವುಳ್ಳವರಾಗಿದ್ದು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಹೆಗಲಿಗೆ ಹೆಗಲು ಕೊಟ್ಟು ಅವರ ಜೀವನ ಸಾರ್ಥಕತೆಯನ್ನು ಹಂಚಿಕೊಂಡಿದ್ದರು. ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಲಿಂಗೈಕ್ಯರಾದ ಅನಂತರ ಪರಮಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರಿಗೆ ಸಲಹೆ, ಸಹಕಾರ, ಅಂತರ್‌ಸ್ಫೂರ್ತಿಯನ್ನು ನೀಡಿದ್ದರು. ಪೂಜ್ಯ ಶ್ರೀಗಳಿಗೆ "ನಾನು ಸಹಾಯ ಮಾಡಿದೆನೆಂಬ" ಅಹಂ ಕಿಂಚಿತ್ತೂ ಇರಲಿಲ್ಲ. ಇವರ ಜೀವನ ಒಂದು ಮಹಾಜ್ಞಾನಕೋಶದಂತೆ, ಪೂಜ್ಯರ ಆತ್ಮಕ್ಕೆ ನನ್ನ ಭಕ್ತಿಪೂರ್ವಕ ಪ್ರಣಾಮಗಳು.

ಪರಮಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಪೂಜ್ಯ ಶ್ರೀ ಶಿವಪ್ರಭುಸ್ವಾಮಿಗಳವರನ್ನು ಸುತ್ತೂರು ಮಠದ ಹಿರಿಯ ಚೇತನವೆಂದು ತಿಳಿದು ಅವರ ಅನಾರೋಗ್ಯ ಸಂದರ್ಭದಲ್ಲಿ ಅವರನ್ನು ಭಕ್ತಿ ಗೌರವಗಳೊಂದಿಗೆ ಉಪಚರಿಸಿದ್ದಾರೆ. ಅಕ್ಕರೆಯಿಂದ ಉತ್ತಮ ವೈದ್ಯಕೀಯ ಸೇವೆ ಕೊಡಿಸಿ ಊಟೋಪಚಾರ ವ್ಯವಸ್ಥೆಯಿಂದ ಹಿಡಿದು ಅವರ ಬಗ್ಗೆ ಹೋದೆಡೆ, ಬಂದೆಡೆ ತೀವ್ರ ನಿಗಾವಹಿಸಿ ತುಂಬು ಕಾಳಜಿಯಿಂದ ನೋಡಿಕೊಳ್ಳುವ ವ್ಯವಸ್ಥೆ ಮಾಡಲಾಗಿತ್ತು. ಪೂಜ್ಯ ಶ್ರೀಗಳವರು ಮಾನವತಾವಾದಿಗಳಾಗಿ, ಉದಾತ್ತ ಧ್ಯೇಯೋದ್ದೇಶಗಳಿಂದ ಜೀವನವನ್ನು ಸಿಂಗರಿಸಿಕೊಂಡು ಜ್ಞಾನಲೋಕದ ಕೋಶದಂತಿದ್ದರು.

"ಶರಣರ ಜೀವನವನ್ನು ಮರಣದಲ್ಲಿ ಕಾಣು" ಎಂಬ ಉಕ್ತಿಯಂತೆ ಪೂಜ್ಯ ಶ್ರೀ ಶಿವಪ್ರಭುಸ್ವಾಮಿಗಳವರು ಪೂಜೆ ಮುಗಿಸಿ, ಪ್ರಸಾದದ ಸಮಯದಲ್ಲಿ ವಿಧಿವಶರಾಗಿರುತ್ತಾರೆ.



ಪೂಜ್ಯ ಶ್ರೀಗಳವರು ಭಕ್ತರಿಗೆ ದೇವರಂತೆ ದರ್ಶನವಾಗುವ ಮಾನವೀಯ ಮೌಲ್ಯಗಳ ಪ್ರತಿರೂಪದಂತಿದ್ದು ನಾಡಿನ ಎಲ್ಲಾ ಮಠಾಧಿಪತಿಗಳಿಗೂ ಪರಿಚಿತರಾಗಿದ್ದರು.

ಪರಮಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ನನ್ನ ಬಗ್ಗೆ ಇಟ್ಟಿದ್ದ ಪ್ರೀತಿ ವಿಶ್ವಾಸದ ಸಂಕೇತವಾಗಿ, ಅವರ ಹಾಲು-ತುಪ್ಪ ಎರೆಯುವ ದಿನ "ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಗೆ ನಿನ್ನನ್ನು ಕಂಡರೆ ತುಂಬಾ ಪ್ರೀತಿ ಇತ್ತು ಎಂದು ತಿಳಿಸಿ, ಅವರ ಗದ್ದುಗೆಯ ಮೇಲಿದ್ದ ಜಪಮಾಲೆಯನ್ನು ತೆಗೆದು ಕ್ಯಾತನಹಳ್ಳಿ ಶ್ರೀಗಳು ನನ್ನ ಧರಿಸಿ ಕರುಣಿಸಿ ಆಶೀರ್ವದಿಸಿದರು. ಅದು ನನ್ನ ಜೀವನದ ಬಹು ದೊಡ್ಡ ಸುಯೋಗವೆಂದು ಭಾವಿಸುತ್ತೇನೆ.

□

ಮಜ್ಜನಕ್ಕೆರೆದು ಫಲವ ಬೇಡುವರಯ್ಯಾ ;
ತಮಗೆಲ್ಲಿಯದೊ ಆ ಫಲವು ಸಿತಾಳಕ್ಕಲ್ಲದೆ ?
ಪತ್ರೆ ಪುಷ್ಪದಲ್ಲಿ ಪೂಜಿಸಿ ಫಲವ ಬೇಡುವರಯ್ಯಾ ;
ತಮಗೆಲ್ಲಿಯದೊ ಆ ಫಲವು ಗಿಡುಗಳಿಗಲ್ಲದೆ?
ಸುಯಿಧಾನವನರ್ಪಿಸಿ ಪ್ರಸಾದದ ಫಲವ ಬೇಡುವರಯ್ಯಾ ;
ತಮಗೆಲ್ಲಿಯದೊ ಆ ಫಲವು ಹದಿನೆಂಟು ಧಾನ್ಯಕ್ಕಲ್ಲದೆ ?
ಲಿಂಗದೊಡವೆಯ ಲಿಂಗಕ್ಕೆ ಕೊಟ್ಟು ಫಲವ ಬೇಡುವ
ಸರ್ವ ಅನ್ಯಾಯಿಗಳನೇನೆಂಬೆ ಗುಹೇಶ್ವರಾ !

**- ಅಲ್ಲಮಪ್ರಭುದೇವರು**

ನಚ್ಚುಗೆ ಮನ ನಿಮ್ಮಲ್ಲಿ, ಮಚ್ಚುಗೆ ಮನ ನಿಮ್ಮಲ್ಲಿ,
ಸಲುಗುಗೆ ಮನ ನಿಮ್ಮಲ್ಲಿ, ಸೋಲುಗೆ ಮನ ನಿಮ್ಮಲ್ಲಿ,
ಅಳಲುಗೆ ಮನ ನಿಮ್ಮಲ್ಲಿ, ಬಳಲುಗೆ ಮನ ನಿಮ್ಮಲ್ಲಿ,
ಕರಗುಗೆ ಮನ ನಿಮ್ಮಲ್ಲಿ, ಕೊರಗುಗೆ ಮನ ನಿಮ್ಮಲ್ಲಿ
ಎನ್ನ ಪಂಚೇಂದ್ರಿಯಗಳು ಕಬ್ಬುನ ಉಂಡ ನೀರಿನಂತೆ
ನಿಮ್ಮಲ್ಲಿ ಬೆರಸುಗೆ ಚನ್ನಮಲ್ಲಿಕಾರ್ಜುನಯ್ಯಾ.

**- ಅಕ್ಕಮಹಾದೇವಿ**

# ಕ್ಯಾತನಹಳ್ಳಿ ಶ್ರೀಗಳು

**ಬಿ.ಕೆ. ಮಲ್ಲಾರಾಧ್ಯ**

ಒಬ್ಬ ವ್ಯಕ್ತಿಯ ಜೀವನದಲ್ಲಿ ಹುಟ್ಟುಸಾವು ಮುಖ್ಯವಲ್ಲ. ಹುಟ್ಟುಸಾವುಗಳ ನಡುವೆ ಆತನು ಬದುಕಿದ ರೀತಿ ಮುಖ್ಯ. ಕ್ಯಾತನಹಳ್ಳಿ ಶ್ರೀಗಳು ತೊಂಬತ್ತೇಳು ವರ್ಷದ ಸುದೀರ್ಘ ಜೀವನ ನಡೆಸಿದರು. ಇದರಲ್ಲಿ ಬಹಳಷ್ಟು ಪಾಲನ್ನು ಸುತ್ತೂರು ಶ್ರೀಮಠದ ಸೇವೆಗೆ ಸಮರ್ಪಿಸಿಕೊಂಡಿದ್ದರು. ಆದುದರಿಂದಲೇ ಅವರ ಸಾಧಾರಣ ವ್ಯಕ್ತಿತ್ವವು ಅಸಾಧಾರಣ ಮಟ್ಟಕ್ಕೇರಿತ್ತು. ಸುತ್ತೂರು ಶ್ರೀಮಠಕ್ಕೆ ಅವರ ಸಮರ್ಪಣಾಭಾವ ಅಸದಳ. ಶ್ರೀಮಠಕ್ಕೆ ಅವರ ಸೇವೆ ನಿಷ್ಕಾಮವಾಗಿತ್ತು. ಅವರೊಬ್ಬ ನಿಷ್ಕಾಮ ಕರ್ಮಯೋಗಿ ಸುತ್ತೂರು ಮಠದ ವಿಷಯದಲ್ಲಿ.

ಲಿಂಗೈಕ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಹಚರರಾಗಿದ್ದು ಅವರ ಜೀವನದ ಏರುಪೇರುಗಳಲ್ಲಿ ಕಷ್ಟಸುಖಗಳಲ್ಲಿ ಹೆಗಲು ಕೊಟ್ಟವರು ಕ್ಯಾತನಹಳ್ಳಿ ಶ್ರೀಗಳು. ಕ್ಯಾತನಹಳ್ಳಿ ಮಠಕ್ಕೆ ಪಟ್ಟಾಧಿಕಾರ ಪಡೆದುಕೊಂಡಿದ್ದರೂ ಅವರ ಸೇವೆಯೆಲ್ಲ ಸುತ್ತೂರು ಶ್ರೀಮಠಕ್ಕೆ ಮೀಸಲಾಗಿತ್ತು. ಅವರ ಬದುಕು ಸುತ್ತೂರು ಶ್ರೀಮಠದ ಅವಿಭಾಜ್ಯ ಅಂಗವಾಗಿತ್ತು. ಸುತ್ತೂರು ಶ್ರೀಮಠದ ಧಾರ್ಮಿಕ ಕಾರ್ಯಗಳಲ್ಲಿ ಶ್ರೀಮಠದ ಸೇವಾ ವಿಸ್ತರಣೆಯಲ್ಲಿ ಮತ್ತು ದಾಸೋಹದಲ್ಲಿ ವಿಶೇಷ ಕಾಳಜಿ ವಹಿಸುತ್ತಿದ್ದರು. ಶ್ರೀಮಠದ ಆಸ್ತಿಗೆ ಧಕ್ಕೆ ಬಾರದ ರೀತಿ ಎಚ್ಚರವಹಿಸಿ ಅಂದಿನ ಜಗದ್ಗುರುಗಳಾಗಿದ್ದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಗೂ ಮತ್ತು ಇಂದಿನ ಜಗದ್ಗುರುಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರಿಗೂ ಉತ್ತಮ ಸಲಹೆಗಳನ್ನು ನೀಡುತ್ತಿದ್ದರು. ಒಟ್ಟಿನಲ್ಲಿ ಶ್ರೀಮಠದ ಅನೇಕ ಭಕ್ತಾದಿಗಳು ಹೇಳುವಂತೆ ಶ್ರೀಮಠದ ಆಸ್ತಿಗೆ ಕ್ಯಾತನಹಳ್ಳಿ ಶ್ರೀಗಳು ಸರ್ಪಗಾವಲಿನಂತಿದ್ದರು.

ಕ್ಯಾತನಹಳ್ಳಿ ಶ್ರೀಗಳು ಪುಣ್ಯಜೀವಿ. ಆ ಕಾರಣದಿಂದಲೇ ಅವರ ಪುಣ್ಯ ಕರ್ಮ ಮತ್ತು ಪುಣ್ಯಾರಾಧನೆಗಳು ಅತ್ಯಂತ ವೈಭವಪೂರಿತವಾಗಿ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಮಾರ್ಗದರ್ಶನದಲ್ಲಿ ನೆರವೇರಿತು. ಶ್ರೀಮಠದ ಭಕ್ತನಾಗಿ ಕ್ಯಾತನಹಳ್ಳಿ ಶ್ರೀಗಳಿಗೆ ಇದುವೇ ನನ್ನ ಶ್ರದ್ಧಾಂಜಲಿ.

□

# ಶ್ರೀಮಠದ ಆಧಾರಸ್ತಂಭವಾಗಿದ್ದ ಕ್ಯಾತನಹಳ್ಳಿ ಶ್ರೀಗಳು

**ಎಸ್.ಎಂ. ಜಂಬುಕೇಶ್ವರ**

ಈಗ್ಗೆ ಸುಮಾರು ನಲವತ್ತನಾಲ್ಕು ವರ್ಷಗಳ ಹಿಂದೆ ಬಳ್ಳಾರಿಯಿಂದ ಮೈಸೂರಿಗೆ ಬಂದ ನನಗೆ ಆಶ್ರಯ ನೀಡಿದ್ದು ಸುತ್ತೂರು ಮಠ. ಆದರೆ ಶ್ರೀಮಠದ ಪರಿಚಯವಾಗಲಿ ಮಠದ ಇತಿಹಾಸವಾಗಲಿ ನನಗೆ ಏನೂ ತಿಳಿದಿರಲಿಲ್ಲ. ಶ್ರೀಮಠದ ಪರಿಚಯವಾದದ್ದು ಮೈಸೂರಿನಲ್ಲೇ ನೆಲಸಿದ್ದ ಕಲಾವಿದ ಮ.ಈ. ಗುರು ಅವರಿಂದ. ಅವರು ನನ್ನನ್ನು ಶ್ರೀಮಠಕ್ಕೆ ಕರೆದುಕೊಂಡುಹೋಗಿ ಪೂಜ್ಯ ಶ್ರೀಗಳ ದರ್ಶನ ಮಾಡಿಸಿದರು.

ಕಲಾಭ್ಯಾಸಕ್ಕೆಂದು ಮೈಸೂರಿಗೆ ಬಂದ ನನಗೆ ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಗೆ ಪ್ರವೇಶ ಕೊಡಿಸಿದವರೂ ಕಲಾವಿದ ಗುರು ಅವರು. ಅಷ್ಟೇ ಅಲ್ಲ ಊಟದ ವ್ಯವಸ್ಥೆಗೋಸ್ಕರ ಸುತ್ತೂರು ಮಠಕ್ಕೆ ಕರೆದುಕೊಂಡು ಹೋದವರೂ ಅವರೇ.

ಈಗಿನ ಜೆಎಸ್‌ಎಸ್ ಮಹಾವಿದ್ಯಾಪೀಠವೇ ಹಿಂದಿನ ಸುತ್ತೂರು ಶಾಖಾಮಠವಾಗಿತ್ತು. ಶ್ರೀಮಠಕ್ಕೆ ಪ್ರವೇಶಿಸಿದ ಕೂಡಲೇ ಒಬ್ಬ ದೃಢಕಾಯರಾದ ಹಣೆಗೆ ಅಗಲವಾದ ವಿಭೂತಿ ಧರಿಸಿದ ಸ್ವಾಮೀಜಿಯವರೊಬ್ಬರು ಕುಳಿತಿದ್ದರು. ಅವರನ್ನು ಕಂಡಕೂಡಲೆ ಗುರು ಅವರು ಸ್ವಾಮಿಗಳಿಗೆ ನಮಸ್ಕರಿಸಿ ಮಾತನಾಡುತ್ತ ನಿಂತರು. ನಾನು ದೂರದಲ್ಲಿಯೇ ಬಾಗಿಲ ಬಳಿ ನಿಂತಿದ್ದೆ. ಸುಮಾರು ಹತ್ತಿಪ್ಪತ್ತು ನಿಮಿಷಗಳ ಕಾಲ ಗುರು ಅವರು ಸ್ವಾಮೀಜಿಯವರ ಹತ್ತಿರ ಮಾತನಾಡಿದ ಮೇಲೆ ಸ್ವಾಮೀಜಿಯವರು ಅಲ್ಲಿನ ಸೇವಕರೊಬ್ಬರ ಮುಖಾಂತರ ಅದೇನೊ ಹೇಳಿ ಒಳಗೆ ಕಳಿಸಿದರು. ಆಗ ಒಳಗಿದ್ದ ಮತ್ತೊಬ್ಬ ಸ್ವಾಮೀಜಿಯವರು ಗುರು ಅವರನ್ನು ಒಳಗೆ ಕರೆಸಿದರು. ಅವರ ಬಳಿ ಹೋದ ಗುರು ಅವರು ಹತ್ತು ನಿಮಿಷಗಳ ಬಳಿಕ ನನ್ನನ್ನು ಒಳಗೆ ಕರೆಸಿದರು.

ಒಳಗೆ ಕುಳಿತಿದ್ದ ಸ್ವಾಮೀಜಿಯವರನ್ನು ಕಂಡ ಕೂಡಲೆ ಅವರೊಬ್ಬ ಸೌಮ್ಯ ರೂಪದ ಕರುಣಾಮಯಿಯಂತೆ ಕಂಡರು. ಅವರಿಗೆ ನಮಸ್ಕರಿಸಿ ನಿಂತೆನು. ಆಗ ಅವರು ನೀನಾರು? ಎಲ್ಲಿಂದ ಬಂದಿದ್ದೀಯಾ? ಈಗೇನು ಓದುತ್ತಿದ್ದೀಯ ಎಂಬ ಅನೇಕ ಪ್ರಶ್ನೆಗಳನ್ನು ಕೇಳಿದರು. ನಾನು ಅವರ ಎಲ್ಲ ಪ್ರಶ್ನೆಗಳಿಗೂ ವಿನಯದಿಂದ ಉತ್ತರಿಸಿ ನಿಂತೆ. ಈ ಮೊದಲೇ ಕಲಾವಿದ ಗುರು ಅವರು ನನ್ನ ಬಗ್ಗೆ ಹೇಳಿದ್ದರಿಂದ ವಿದ್ಯಾರ್ಥಿನಿಲಯದಲ್ಲಿ ನನಗೆ ಉಚಿತವಾಗಿ ಊಟದ ವ್ಯವಸ್ಥೆ ಮಾಡಿಕೊಟ್ಟರು.

ಮಠದಿಂದ ಹೊರಗೆ ಬಂದಮೇಲೆ ನಾನು ಗುರು ಅವರನ್ನು ಕುತೂಹಲದಿಂದ ಇಬ್ಬರು

ಸ್ವಾಮಿಗಳಿದ್ದಾರಲ್ಲ ಈಚೆ ಇದ್ದ ಸ್ವಾಮಿಗಳಾರು? ಒಳಗಿದ್ದ ಸ್ವಾಮಿಗಳಾರು? ಎಂದು ಪ್ರಶ್ನಿಸಿದೆ. ಆಗ ಅವರು ಈಚೆ ಕುಳಿತಿದ್ದವರು ಕ್ಯಾತನಹಳ್ಳಿ ಬುದ್ದಿ ಎಂದೂ ಒಳಗಿದ್ದವರು ರಾಜೇಂದ್ರ ಸ್ವಾಮಿಗಳೆಂದೂ ತಿಳಿಸಿದರು. ಮುಂದುವರಿದು ಕ್ಯಾತನಹಳ್ಳಿ ಬುದ್ದಿಗಳ ಬಗ್ಗೆ ಹೇಳತೊಡಗಿದರು. ಇವರು ಎಲ್ಲರನ್ನೂ ವಿಚಾರಿಸಿ ತಮಗೆ ಸೂಕ್ತ ಎನಿಸಿದ ಕೆಲವರನ್ನು ಮಾತ್ರ ಹಿರಿಯ ಸ್ವಾಮಿಗಳ ಹತ್ತಿರ ಕಳಿಸುತ್ತಾರೆ. ಇನ್ನು ಕೆಲವರನ್ನು ಇಲ್ಲಿಂದಲೇ ತಾವೇ ಉತ್ತರ ಹೇಳಿ ಹಿಂದಕ್ಕೆ ಕಳುಹಿಸಿಬಿಡುತ್ತಾರೆ. ಹೀಗೆ ಹಿರಿಯ ಶ್ರೀಗಳ ದರ್ಶನಕ್ಕಾಗಿ ಬಂದ ಅನೇಕ ಭಕ್ತರನ್ನು ಹಿಂದೆ ಕಳುಹಿಸಿದ್ದುಂಟು ಎಂದರು.

ವಿದ್ಯಾರ್ಥಿಯಾಗಿದ್ದ ನಾನು ರಾಜೇಂದ್ರ ಶ್ರೀಗಳ ದರ್ಶನಕ್ಕೆಂದು ಆಗಾಗ್ಗೆ ಶ್ರೀಮಠಕ್ಕೆ ಹೋಗಿ ಬರುತ್ತಿದ್ದೆ. ಆ ಸಂದರ್ಭಗಳಲ್ಲಿ ಹೊರಗಡೆ ಕುಳಿತಿದ್ದ ಕ್ಯಾತನಹಳ್ಳಿ ಶ್ರೀಗಳು ನನ್ನನ್ನು ಏನು ಬಂದಿದ್ದೀಯಾ? ಏಕೆ ಬಂದಿದ್ದೀಯಾ? ಎಂಬ ಪ್ರಶ್ನೆಗಳ ಮಳೆಗರೆದು ನನ್ನನ್ನು ಹಿಂದಕ್ಕೆ ಕಳುಹಿಸಲು ಪ್ರಯತ್ನಿಸುತ್ತಿದ್ದರು. ಈ ಕಾರಣಕ್ಕಾಗಿ ನನ್ನಂತೆಯೇ ಅನೇಕ ವಿದ್ಯಾರ್ಥಿಗಳು ರಾಜೇಂದ್ರ ಶ್ರೀಗಳನ್ನು ಭೇಟಿ ಮಾಡಲು ಸಾಧ್ಯವಾಗದೆ ಹಿಂದಿರುಗಿದ್ದೂ ಉಂಟು. ನಾನು ಕಲಾವಿದ ಗುರು ಅವರ ಜೊತೆಯಲ್ಲಿ ಬಂದಿದ್ದರಿಂದಲೇ ನನಗೆ ಸುಲಭವಾಗಿ ಹಿರಿಯ ಶ್ರೀಗಳ ದರ್ಶನವಾಯಿತು.

ಎರಡು ಮೂರು ವರ್ಷಗಳ ನಂತರ ಸಂಜೆ ಸಮಯ ನಾನು ಕೆಲಸ ಮಾಡುತ್ತಿದ್ದ ಸ್ಟುಡಿಯೋ ಮಾಲೀಕರೊಡನೆ ಮುಡುಕುತೊರೆ ಜಾತ್ರೆಗೆ ಹೋಗಿದ್ದೆ. ಆಗ ರಾಜೇಂದ್ರ ಶ್ರೀಗಳ ಅಡ್ಡಪಲ್ಲಕ್ಕಿ ಉತ್ಸವ ನಡೆಯುತ್ತಿತ್ತು. ಆ ಉತ್ಸವದ ಮೇಲ್ವಿಚಾರಣೆ ಮಾಡುತ್ತ ಕ್ಯಾತನಹಳ್ಳಿ ಬುದ್ಧಿಯವರು ಸಡಗರ ಸಂಭ್ರಮದಿಂದ ಅಡ್ಡಪಲ್ಲಕ್ಕಿಯ ಮುಂಭಾಗದಲ್ಲಿ ರಥ ನಡೆಸುವ ಸಾರಥಿಯಂತೆ ಠೀವಿಯಿಂದ ಹೆಜ್ಜೆ ಹಾಕುತ್ತಿದ್ದರು. ಅವರ ಅಗಲವಾದ ಹಣೆ, ಹಣೆ ತುಂಬ ವಿಭೂತಿ, ಶುಭ್ರವಾದ ಕಾವಿಬಟ್ಟೆ ಧರಿಸಿದ ಅವರ ಮುಖದಲ್ಲಿ ಸಂತೋಷ ಎದ್ದು ಕಾಣುತ್ತಿತ್ತು. ಆ ದೃಶ್ಯ ಇಂದಿಗೂ ನನ್ನ ಕಣ್ಣಿಗೆ ಕಟ್ಟಿದಂತಿದೆ. ಆ ಸಂದರ್ಭದ ನಾಲ್ಕಾರು ಚಿತ್ರಗಳನ್ನು ನಮ್ಮ ಸ್ಟುಡಿಯೋದವರ ಕ್ಯಾಮರದಲ್ಲಿ ಚಿತ್ರಿಸಿದೆ.

ಕೆಲವು ದಿನಗಳ ನಂತರ ನಾನು ತೆಗೆದ ಅಡ್ಡಪಲ್ಲಕ್ಕಿ ಉತ್ಸವದ ಕಪ್ಪು ಬಿಳುಪು ಚಿತ್ರಗಳನ್ನು ಪೂಜ್ಯ ರಾಜೇಂದ್ರ ಸ್ವಾಮಿಗಳಿಗೆ ತಲುಪಿಸಲು ಹೋದಾಗ ಕ್ಯಾತನಹಳ್ಳಿ ಶ್ರೀಗಳು ಚಿತ್ರಗಳನ್ನು ನೋಡಿ ಇದನ್ನು ನೀನೇ ತೆಗೆದಿಯಾ ಎಂದು ಕೇಳಿದರು. ಅದಕ್ಕೆ ಹೌದೆಂದು ಹೇಳಿದಾಗ ತುಂಬ ಸಂತಸಪಟ್ಟು ಕಲ್ಲುಸಕ್ಕರೆ ಕೊಟ್ಟು ಕಳಿಹಿಸಿದರು. ಅಂದು ಕ್ಯಾತನಹಳ್ಳಿ ಶ್ರೀಗಳಿಗೆ ಹತ್ತಿರದಿಂದ ಗುರುತಿಸಿಕೊಂಡೆ.

ಚಿತ್ರಕಲಾ ಶಿಕ್ಷಣದ ಮಧ್ಯದಲ್ಲಿಯೇ ನನಗೆ ಶಿಕ್ಷಕನಾಗಿ ಕೆಲಸ ಮಾಡುವ ಅವಕಾಶವನ್ನು ಪೂಜ್ಯ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ದೊರಕಿಸಿದರು, ನನ್ನ ವಿದ್ಯಾಭ್ಯಾಸವು



ಪೂರ್ತಿಯಾಗಿಲ್ಲದಿದ್ದ ಕಾರಣ ನಾನು ಒಲ್ಲದ ಮನಸ್ಸಿನಿಂದಲೇ ಒಪ್ಪಿಕೊಂಡಿದ್ದೆ. ಆದರೆ ಅವರ ಕೃಪೆಯಿಂದಾಗಿ ಇಂದು ನಾನು ನಾನಾ ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿದ್ದೇನೆ.

ನಾನು ಕೆಲಸಕ್ಕೆ ಸೇರಿದ ಎರಡು ತಿಂಗಳಲ್ಲಿ ಪ್ರಸ್ತುತ ಕೆಲಸ ನಿರ್ವಹಿಸುವ ಸ್ಥಳದಿಂದ ಸುಮಾರು ಎಂಟು ಕಿ.ಮೀ. ದೂರಕ್ಕೆ ಹೋಗಿ ಪಾರ್ಟ್-ಟೈಂ ಕೆಲಸ ನಿರ್ವಹಿಸಲು ಅವಕಾಶ ಸಿಕ್ಕಿತು. ಆಗ ಇದನ್ನು ಶ್ರೀಗಳ ಗಮನಕ್ಕೆ ತಂದಾಗ ಅವರು ತಕ್ಷಣ ಅದನ್ನು ಒಪ್ಪಿಕೊಳ್ಳಲು ಹೇಳಿದರು. ನಾನು ಅಷ್ಟು ದೂರ ಹೋಗಲು ನನ್ನ ಬಳಿ ಯಾವ ವಾಹನವೂ ಇರಲಿಲ್ಲವೆಂದು ತಿಳಿಸಿದಾಗ ಅವರೇ ಸೈಕಲ್ ತೆಗೆದುಕೊಳ್ಳುವಂತೆ ಸೂಚಿಸಿ ಅದಕ್ಕೆ ತಗಲುವ ಖರ್ಚಿನ ಹಣವನ್ನು ಅವರೇ ನನ್ನ ಜೇಬಿಗೆ ತುರುಕಿದರು. ಇದನ್ನು ಹೊರಗಡೆ ಇರುವ ಕ್ಯಾತನಹಳ್ಳಿ ಶ್ರೀಗಳಿಗೆ ಹೇಳಬೇಡವೆಂದು ಹೇಳಿ ಆಶೀರ್ವದಿಸಿ ಕಳಿಸಿಕೊಟ್ಟರು. ಇದರಿಂದ ಕ್ಯಾತನಹಳ್ಳಿ ಶ್ರೀಗಳ ಬಿಗಿಧೋರಣೆ ಯಾರಿಗಾದರೂ ತಿಳಿಯುತ್ತದೆ.

ಅದೇ ದಿನ ಸಂಜೆ 5.30ಕ್ಕೆ ಹೊಸ ಸೈಕಲ್ ತಂದು ಮಠದ ಮುಂದೆ ನಿಲ್ಲಿಸಿ ಸಂತೋಷದಿಂದ ರಾಜೇಂದ್ರ ಶ್ರೀಗಳಿಗೆ ವಿಷಯ ತಿಳಿಸಿ ನೀವೇ ಬಂದು ಪೂಜೆ ಮಾಡಬೇಕೆಂದು ಕೇಳಿಕೊಂಡೆ. ಅವರು ತಕ್ಷಣವೇ ಒಪ್ಪಿಕೊಂಡು ಪೂಜಾ ಸಾಮಾನುಗಳನ್ನು ತರಿಸಿ ಸೈಕಲ್‌ಗೆ ಪೂಜೆ ಮಾಡಿದರು. ಆಗ ಕ್ಯಾತನಹಳ್ಳಿ ಸ್ವಾಮಿಗಳಿಗೆ ಬುದ್ಧೀ, ನೀವೇ ಸೈಕಲ್ ತುಳಿಯಿರಿ ಎಂದೆ. ಅವರು ಬಹಳ ಸಂತೋಷದಿಂದ ಸ್ವಲ್ಪದೂರ ಸೈಕಲ್ ಓಡಿಸಿದರು. ಇದನ್ನು ಅಲ್ಲಿದ್ದ ಅನೇಕರು ನೋಡಿ ಬೆರಗಾದರು.

ಪ್ರತೀವರ್ಷ ನಡೆಯುತ್ತಿದ್ದ ಆದಿ ಜಗದ್ಗುರುಗಳ ಜಯಂತಿ ಮಹೋತ್ಸವ ಮತ್ತು ಸುತ್ತೂರಿನಲ್ಲಿ ನಡೆಯುತ್ತಿದ್ದ ಜಾತ್ರಾ ಮಹೋತ್ಸವ ಸಂದರ್ಭಗಳಲ್ಲಿ ಕ್ಯಾತನಹಳ್ಳಿ ಶ್ರೀಗಳದ್ದೇ ಪ್ರಮುಖ ಪಾತ್ರ. ಜಯಂತಿಯ ಕೊನೆಯ ದಿನವಂತು ರಾಜೇಂದ್ರ ಶ್ರೀಗಳ ಸಿಂಹಾಸನಾರೋಹಣದ ಸಂಭ್ರಮ. ಕ್ಯಾತನಹಳ್ಳಿ ಶ್ರೀಗಳು ರಾಜೇಂದ್ರ ಶ್ರೀಗಳ ಪಕ್ಕದಲ್ಲಿಯೇ ಚಿನ್ನದ ಕಿರೀಟವನ್ನು ಹಿಡಿದು ವಾದ್ಯಗೋಷ್ಠಿಯ ನಡುವೆ ಸಡಗರದಿಂದ ಭಕ್ತರ ಜಯಕಾರದ ಮಧ್ಯೆ ನಿಧಾನವಾಗಿ ಹೆಜ್ಜೆ ಹಾಕುತ್ತಾ ಸಾಗುತ್ತಿದ್ದ ದೃಶ್ಯ ಕಣ್ಣಿಗೆ ಕಟ್ಟಿದಂತಿದೆ. ರಾಜೇಂದ್ರ ಶ್ರೀಗಳು ಸಿಂಹಾಸನವನ್ನು ಏರಿ ಕುಳಿತ ಮೇಲೆ ಅವರ ಮಕುಟಕ್ಕೆ ಕಿರೀಟಧಾರಣೆ ಮಾಡುತ್ತಿದ್ದ ಕ್ಯಾತನಹಳ್ಳಿ ಶ್ರೀಗಳ ಮುಖದಲ್ಲಿ ಕಂಡುಬರುತ್ತಿದ್ದ ಸಂತೃಪ್ತಿ ಸಂತೋಷಗಳನ್ನು ನೋಡಿದವರಿಗೇ ಗೊತ್ತು.

ಇನ್ನು ಜಾತ್ರಾ ಸಂದರ್ಭದಲ್ಲಿಯಂತು ಇವರೇ ಮುಂಚೂಣಿಯಲ್ಲಿ ನಿಂತು ರಥವನ್ನು ಎಳೆಸುತ್ತಿದ್ದರು. ಕ್ಯಾತನಹಳ್ಳಿ ಶ್ರೀಗಳು ಇಲ್ಲದಿದ್ದರೆ ಅಲ್ಲಿ ಏನೂ ನಡೆಯಲು ಸಾಧ್ಯವಿಲ್ಲ ಎನ್ನುವಂತೆ ಪ್ರತಿಯೊಂದು ಕಾರ್ಯದಲ್ಲಿಯೂ ಎಲ್ಲರಿಗೂ ಮಾರ್ಗದರ್ಶನ ನೀಡುತ್ತಿದ್ದರು.

ಮಠಕ್ಕೆ ಬರುವ ಗಣ್ಯ ಅತಿಥಿಗಳನ್ನು ಬಹಳ ಸಂಭ್ರಮದಿಂದ ಸ್ವಾಗತಿಸುತ್ತಿದ್ದರು,

ಅವರ ಉಪಚಾರಗಳಿಗೆ ಯಾವುದೇ ಕುಂದು ಬರದಂತೆ ಅತ್ಯಂತ ಎಚ್ಚರಿಕೆಯಿಂದ ಅವರನ್ನು ಸತ್ಕರಿಸುತ್ತಿದ್ದರು.

ಕ್ಯಾತನಹಳ್ಳಿ ಶ್ರೀಗಳವರು ಮಠದ ಹಣಕಾಸು ವಿಷಯದಲ್ಲಿ ಬಹಳ ಕಟ್ಟುನಿಟ್ಟಾಗಿದ್ದು ಮಠದ ಹಣ ಒಂದು ಬಿಡಿಗಾಸು ಅಪವ್ಯಯವಾಗದಂತೆ ಕಣ್ಗಾವಲಾಗಿದ್ದರು. ಇವರು ತೀಕ್ಷ್ಣಮತಿಗಳಾಗಿದ್ದು ಸಂಸ್ಥೆಯ ಪ್ರತಿಯೊಬ್ಬ ನೌಕರರ ಬಗ್ಗೆಯೂ ತಿಳಿದುಕೊಂಡಿದ್ದರು. ಸಂಸ್ಥೆಯ ವತಿಯಿಂದ ನಿರ್ಮಾಣವಾಗುತ್ತಿದ್ದ ಪ್ರತಿಯೊಂದು ಶಾಲಾ ಕಾಲೇಜು ಕಟ್ಟಡಗಳ ಬಗ್ಗೆ ಸಂಪೂರ್ಣ ಮಾಹಿತಿ ಹೊಂದಿದ್ದರು.

ಮಠದ ಹಣಕಾಸಿನ ಬಗ್ಗೆ ಅವರಿಗಿದ್ದ ಕಳಕಳಿಯನ್ನು ಕುರಿತು ಹೇಳಬೇಕೆಂದರೆ ಹಿಂದೆ ಸಂಪತ್ತನ್ನು ಸರ್ಪವು ರಕ್ಷಿಸುತ್ತದೆ ಎಂದು ಹೇಳುವಂತೆ ಇವರು ಸಂಸ್ಥೆಯ ಹಣವನ್ನು ಸರ್ಪಗಾವಲಿನಂತೆ ಸುರಕ್ಷಿತವಾಗಿ ಇಡುತ್ತಿದ್ದರು. ರಾಜೇಂದ್ರ ಶ್ರೀಗಳವರು ಕರುಣಾಮಯಿ ಹಾಗೂ ಮಹಾದಾನಿಗಳಾಗಿದ್ದು ಶಿವನು ಎಲ್ಲ ಭಕ್ತರಿಗೂ ವರ ನೀಡುವಂತೆ ರಾಜೇಂದ್ರ ಶ್ರೀಗಳು ಆಸರೆಯನ್ನು ಕೋರಿಬಂದ ಎಲ್ಲ ಬಡವರಿಗೂ ಕರುಣೆ ತೋರಿಸಿ ಧಾರಾಳವಾಗಿ ಸಹಾಯ ಮಾಡುತ್ತಿದ್ದರು. ಇದರಿಂದ ಮಠದ ಅರ್ಥವ್ಯವಸ್ಥೆಗೆ ಎಲ್ಲಿ ಧಕ್ಕೆ ಬರುವುದೋ ಎಂಬ ಆತಂಕದಿಂದ ಕ್ಯಾತನಹಳ್ಳಿ ಸ್ವಾಮಿಗಳು ಮಠಕ್ಕೆ ಬರುವ ಭಕ್ತರನ್ನು ತಾವೇ ಖುದ್ದಾಗಿ ನಿಯಂತ್ರಿಸುತ್ತಿದ್ದರು. ಆದರೂ ಇಂತಹ ಸರ್ಪಗಾವಲಿನ ಮಧ್ಯೆಯೂ ರಾಜೇಂದ್ರ ಶ್ರೀಗಳವರು ಕ್ಯಾತನಹಳ್ಳಿ ಶ್ರೀಗಳವರ ಕಣ್ಣು ತಪ್ಪಿಸಿ ನನ್ನಂತಹ ಸಾವಿರಾರು ಭಕ್ತರಿಗೆ ಕರುಣೆ ತೋರಿಸಿ ಉದ್ಧರಿಸಿದ್ದಾರೆ.

ರಾಜೇಂದ್ರ ಶ್ರೀಗಳವರಿಗೆ ಕ್ಯಾತನಹಳ್ಳಿ ಶ್ರೀಗಳವರು ಸದಾ ನೆರಳಿನಂತೆ ಇದ್ದು ಅವರನ್ನು ಅನುಸರಿಸುತ್ತಿದ್ದರು. ರಾಜೇಂದ್ರ ಶ್ರೀಗಳ ಅಂತಿಮ ದಿನದವರೆಗೂ ಅವರ ಹತ್ತಿರವೇ ಇದ್ದು ಅವರ ಸೇವೆಯಲ್ಲಿ ತಮ್ಮ ಜೀವಮಾನವನ್ನೇ ಮುಡಿಪಾಗಿಟ್ಟರು. ಸುತ್ತೂರು ಮಠದ, ಸಂಸ್ಥೆಯ ಏಳಿಗೆಗಾಗಿ ಅವರು ಮಾಡಿದ ಕಟ್ಟುನಿಟ್ಟಿನ ಕ್ರಮಗಳನ್ನು ಭರಿಸಲಾಗದ ಕೆಲವು ಭಕ್ತರಿಂದ ವಿರೋಧವನ್ನೂ ಕಟ್ಟಿಕೊಂಡರು. ಆದರೂ ಅವರ ನಿಸ್ವಾರ್ಥ ಸೇವೆಯನ್ನು ಎಲ್ಲರೂ ಮುಕ್ತಕಂಠದಿಂದ ಇಂದಿಗೂ ಹೊಗಳುತ್ತಾರೆ.

ತಮ್ಮ ಸುದೀರ್ಘವಾದ ಜೀವಮಾನದಲ್ಲಿ ಇನ್ನೆರಡು ವರ್ಷಗಳನ್ನು ಕಳೆದಿದ್ದರೆ ಶತಾಯುಷಿಗಳಾಗುತ್ತಿದ್ದರು. ಆದರೆ ತಮ್ಮ ತೊಂಬತ್ತೆಂಟನೆಯ ವಯಸ್ಸಿನಲ್ಲಿಯೇ (14.2.2010 ಭಾನುವಾರ) ದೈವಾಧೀನರಾದದ್ದು ಎಲ್ಲ ಭಕ್ತವೃಂದಕ್ಕೆ ಅತ್ಯಂತ ದುಃಖವನ್ನುಂಟುಮಾಡಿದೆ.

ಅವರು ದೈಹಿಕವಾಗಿಲ್ಲದಿದ್ದರೂ ಅವರ ಆತ್ಮವು ಸದಾ ಸಂಸ್ಥೆಯ ಅಭಿವೃದ್ಧಿಗಾಗಿ ಮಿಡಿಯುತ್ತಿರುತ್ತದೆ.

□

# ಶಾಂತಿಷಟ್ಕ

ಅಭಿಕೃತಿ (25) - ಕ್ಯಾತನಹಳ್ಳಿ : 45, 11, 403/3, 35, 54, 432

**ಕುಮಾರನಿಜಗುಣ**

**ಕಂಗೊಳಿಪ್ಪ ಖ್ಯಾತಿವೆತ್ತ ಕ್ಯಾತನಹಳ್ಳಿಯ್ಯೆ ಬರೆ ರಂಜಂ ರಸಂಜಂ ಯಂ ಯರಂಗಂ**

ಜಾತಿಪಂಥಮೇನನುಂ ವಿಚಾರಿಸದೋದಲ್ಕೆದಿದ ದುರ್ಭಾಗ್ಯಸದ್ವಿದ್ಯಾರ್ಥಿವೃಂದ
ಕ್ಕೋತು ವಾಸಮಂದಿರೋಚಿತಾನ್ನಮನಿತ್ತು ನಾಡಿನ ವಿಖ್ಯಾತವಿದ್ಯಾವಂತರಾಗ
ಲ್ರೀತಿನೀತಿದೋರಿ ಸೌಖ್ಯಪೊಂದುತಲಿರ್ದ ಶ್ರೀಗುರುರಾಜೇಂದ್ರರನ್ನೋಲೈಸುತಿರ್ದೇ
ಖ್ಯಾತಿವೆತ್ತ ಕಾರ್ಯನಿಷ್ಠ ಕ್ಯಾತನಹಳ್ಳಿ ಶ್ರೀಗಳ ನಿತ್ಯಾತ್ಮಕಂ ಸಂಶಾಂತಿ ಬೇಳ್ಪೆಂ ‖1‖

ನ್ಯಾಯನಿಷ್ಠಧರ್ಮಶೀಲರಾದ ಮಹಾನ್ಸಗದ್ಗುರುಚಕ್ರೇಶ ಶ್ರೀರಾಜೇಂದ್ರಮೌನೀಂ
ದ್ರಾರ್ಯರಾಪ್ತಮಿತ್ರರಾದ್ಯವೈದ್ಯರಮಾತ್ಯರಾರ್ಥಿಕತಜ್ಞೋತ್ತಮರ್ಮೇಣ್ಗುಪ್ತಚಾರರ್
ಕಾಯಪೋಷಕರ್ಸಹಾಯಕರ್ಪರತತ್ತ್ವಚಿಂತನೆಯೊಳ್ಸಾಹಚರ್ಯಾನ್ವೇಷಕರ್ಸ್ವಾ
ಧ್ಯಾಯಸಾಹ್ಯರೆನ್ನಿಸಿರ್ದ ಕ್ಯಾತನಹಳ್ಳಿ ಶ್ರೀಗಳ ನಿತ್ಯಾತ್ಮಕಂ ಸಂಶಾಂತಿ ಬೇಳ್ಪೆಂ ‖ 2 ‖

ಸುಪ್ತಿಯಲ್ಲಿಯುಂ ಮಿತವ್ಯಯಂಗೊಳಿಸುತ್ತೆ ಹಾಸಿಗೆಯಿದ್ದಷ್ಟು ಮಾತ್ರಂ ಕಾಲುಚಾಚ
ಲ್ಕಾಪ್ತವಾಕ್ಯಮಂ ಸದಾ ಜಗದ್ಗುರುಗಳ್ಗೆ ವೇದಿಸುತಂ ನಮ್ಮೊಳೇನುಂಟಷ್ಟರೊಳ್ಸಂ
ತೃಪ್ತಿಯಾಂತು ವಿದ್ಯೆಯಾರ್ಜಿಸಲ್ಬರುವಂಥವರ್ಗುಚಿತಾನ್ನಂ ನಿವಾಸಂ ನೀಡಿರೆನ್ನು
ತ್ತಾಪ್ತಕಾರ್ಯಗೈಯುತಿರ್ದ ಕ್ಯಾತನಹಳ್ಳಿ ಶ್ರೀಗಳ ನಿತ್ಯಾತ್ಮಕಂ ಸಂಶಾಂತಿ ಬೇಳ್ಪೆಂ ‖ 3 ‖

ಚಿಕ್ಕುಮಾವುತೆಂಗುಕೌಂಗುಹೊಂಗೆಮರಂಗಳಂ ನೆಲಕಂ ಬೀಳದೋಲ್ಸದ್ಭೂಮಿಯಾಳಂ
ಪೊಕ್ಕು ಭದ್ರಮಾಗಿ ತಾಳ್ವ ಬೇರುಗಳೋಲಪೂರ್ವದ ಸೌಂದರ್ಯಸೌಧಂಗಳ್ದುಸುಕ್ಕು
ಸುಕ್ಕೆನುತ್ತೆ ಬೀಳ್ವುದಂ ನಿವಾರಿಪ ಪಾಯದೋಲ್ಶಿವರಾತ್ರೀಶವಿದ್ಯಾಪೀಠದಾಧಾ
ರಕ್ಕೆ ಬಂಡೆಯಂತೆ ನಿಂತ ಕ್ಯಾತನಹಳ್ಳಿ ಶ್ರೀಗಳ ನಿತ್ಯಾತ್ಮಕ್ಕಂ ಸಂಶಾಂತಿ ಬೇಳ್ಪೆಂ ‖ 4 ‖

ಶಿಷ್ಯನಿಂ ಪರಾಜಯಂ ನಿರೀಕ್ಷಿಪ ಮಾನ್ಯ ಸದ್ಗುರುವೇ ಲೋಕದೊಳ್ಪೂಜ್ಯನ್ನಿಜಕ್ಕಾ
ಶಿಷ್ಯನೋಲ್ವಿರಾಜಿಪಂದು' ಶ್ರೀಶಿವರಾತ್ರಿದೇಶಿಕರಂ ಕಂಡು ಸಂತೋಷಂಗೊಳಲ್ಕಾ
ಭೂಷ್ಯರಾದ ಪೂತ ಶ್ರೀಜಗದ್ಗುರುವೈಕ್ಯರಾಗಿರಲಾ ಪೂಜ್ಯರೇಯಾನಂದಚಕ್ಷು
ಷ್ಪಾಪ್ಪ ಚೆಲ್ಲುವಂತೆ ಚೆಲ್ದ ಕ್ಯಾತನಹಳ್ಳಿ ಶ್ರೀಗಳ ನಿತ್ಯಾತ್ಮಕಂ ಸಂಶಾಂತಿ ಬೇಳ್ಪೆಂ ‖5‖

ಈ ರಸಾತಲಕ್ಕೆ ಬಂದ ಆರ್ವರುಷಂಗಳಿಂದಲೆ ರಾಜೇಂದ್ರರಾಗುತ್ತಿರ್ದರಂ ಸೇ
ರೋರಿಗಾಡುತೋದುತಂ ಸದಾ ಜತೆಗೂಡಿಯೇಯಿರುತಂ ಪೀಠವೇರ್ದಂದುಂ ಸಹಾ ಪೋ
ಗೇರುಜವ್ವನಂಜರಾವರಂ ಶ್ರಮಿಸುತ್ತೆ ಶ್ರೀಗುರುರಾಜೇಂದ್ರರಂ ಪ್ರಾಣಾಂತ್ಯದಲ್ಲುಂ
ಸೇರೆ ಶೈವಲೋಕ ಪೊಕ್ಕ ಕ್ಯಾತನಹಳ್ಳಿ ಶ್ರೀಗಳ ನಿತ್ಯಾತ್ಮಕಂ ಸಂಶಾಂತಿ ಬೇಳ್ಪೆಂ || 6 ||

□

ಭಕ್ತ ಭಕ್ತನೆಂಬರು :
ಪೃಥ್ವಿಯ ಪೂರ್ವಾಶ್ರಯವ ಕಳೆಯದನ್ನಕ್ಕ,
ಅಪ್ಪುವಿನ ಪೂರ್ವಾಶ್ರಯವ ಕಳೆಯದನ್ನಕ್ಕ,
ತೇಜದ ಪೂರ್ವಾಶ್ರಯವ ಕಳೆಯದನ್ನಕ್ಕ,
ವಾಯುವಿನ ಪೂರ್ವಾಶ್ರಯವ ಕಳೆಯದನ್ನಕ್ಕ,
ಆಕಾಶದ ಪೂರ್ವಾಶ್ರಯವ ಕಳೆಯದನ್ನಕ್ಕ,
ಸೋಮ - ಸೂರ್ಯರ ಪೂರ್ವಾಶ್ರಯವ ಕಳೆಯದನ್ನಕ್ಕ,
ಆತ್ಮನ ಪೂರ್ವಾಶ್ರಯವ ಕಳೆಯದನ್ನಕ್ಕ -
ಭಕ್ತನೆಂದು ಲಿಂಗವ ಪೂಜಿಸುವರ ಕಂಡು
ನಾನು ಬೆಱಗಾದೆ ಗುಹೇಶ್ವರಾ.

**- ಅಲ್ಲಮಪ್ರಭುದೇವರು**

ದೇವಲೋಕ ಮರ್ತ್ಯಲೋಕವೆಂಬುದು ಬೇಱಿಲ್ಲ ಕಾಣಿ ಭೋ !
ಸತ್ಯವ ನುಡಿವುದೆ ದೇವಲೋಕ ; ಮಿಥ್ಯವ ನುಡಿವುದೆ ಮರ್ತ್ಯಲೋಕ.
ಆಚಾರವೆ ಸ್ವರ್ಗ ; ಅನಾಚಾರವೆ ನರಕ –
ಕೂಡಲಸಂಗಮದೇವಾ, ನೀವೇ ಪ್ರಮಾಣು.

**- ಬಸವಣ್ಣ**

# ಕ್ರಿಯಾಶೀಲ ಗುರುವರ

**ಜೀಮಾರಹಳ್ಳಿ ಗುರುಸಿದ್ದಪ್ಪ**

ಶ್ರೀ ಶಿವಪ್ರಭುಸ್ವಾಮಿ ಗುರುವರ
ಪ್ರಸ್ತುತ ಸುತ್ತೂರು ಮಠದ ಕೀರ್ತಿಗೆ
ನಿಮ್ಮ ಕೊಡುಗೆಯೂ ಅಪಾರ

ನೀವು - ಶಿವರಾತ್ರಿ ರಾಜೇಂದ್ರರು
ಶ್ರೀಮಠದೆರಡು ಕಣ್ಣುಗಳು
ಜೆಎಸ್ಎಸ್ ರಥದ ಗಾಲಿಗಳು
ಶಿವಪರ ತುಡಿತ ದುಡಿತದ ಪಾಲುದಾರರು

ಅಂಥಿಂಥದಲ್ಲವೆನ್ನುವ ಗೆಳೆತನ
ಗಂಡಭೇರುಂಡದಂತೆಲ್ಲವನು
ಹಂಚಿಕೊಂಡೊಯ್ದು ಬಂದ ಗುಣ

ರಾಜೇಂದ್ರ ಗುರುವರರೊಂದು - ಚಿತ್ ಶಕ್ತಿ
ನೀವು ಕ್ರಿಯಾಶಕ್ತಿಯ ಅಪರಾವತಾರಮೂರ್ತಿ
ಅವರು ರೂಪಿಸಿದ ನೀಲನಕ್ಷೆಗನುಗುಣ
ಎಲ್ಲವ ಕಟ್ಟಿ ಬೆಳೆಸುತ ಬಂದಿರಿ-ಅನುದಿನ

ಬಾಳ ಮುಸ್ಸಂಜೆಯಲಿ
ಮುಪ್ಪು ಬಾಲ್ಯವನೆದೆತೆರೆದು ಮುದ್ದಿಸುವಂತೆ
ಇಂದಿನವರ ಹರಸುತ ನಿಂದಿರಿ

ನೀವು ಕಳೆದ ತೊಂಬತ್ತೇಳು
ಸಂವತ್ಸರಗಳವು ನೋಡಿ
ಅವು ನಿಮ್ಮ ಜೀವನ ನಡೆಗೆ
ಹಿಡಿದ ಕನ್ನಡಿ

# ಶಿವಪಥದಲ್ಲಿ...... ಶಿವಪ್ರಭು

**ಪ್ರೊ. ಎಸ್.ಪಿ. ಉಮಾದೇವಿ**

ಚಿಜ್ಯೋತಿಯಿಂದುದಿಸಿದಾ ಚಿದ್ಬೆಳಕ ಪ್ರಭುವೇ
ಆದಿಗುರುಗಳಾ ಸಂಸ್ಪರ್ಶದಿಂ ಉದಿಸಿ
ಶಿವನ ವರನಾಮವೆಂಬಂತೆ
'ಶಿವರಾತ್ರಿಯಪ್ಪ' ನಾಮವ ಪಡೆದು
ಮಂತ್ರಮಹರ್ಷಿಗಳಾ ರಕ್ಷಣೆಯಿಂ
ಕನಸಿನಾ ಕೂಸಾಗಿ ಬೆಳೆದು
ಆಧ್ಯಾತ್ಮದ ಆಗರವೆನಿಸಿ
ಆತ್ಮಸಾಕ್ಷಾತ್ಕಾರಗೊಳಿಸಿ
ಸತ್ಯಯುಗ ನಿರ್ಮಾಣಕ್ಕೆ
ವರಹಸ್ತ ನೀಡಿ
ಶಕ್ತಿ-ಯುಕ್ತಿಗಳ ತತ್ವವನು ಸಾರಿ
ಕ್ಯಾತನಹಳ್ಳಿ ಪ್ರಭುವೆನಿಸಿದಿರಿ.

ರಾಜಗುರುತಿಲಕರಾ ಜೀವದ ಜೀವವಾಗಿ
ಒಡಲ ಮುಡಿಪಾಗಿಟ್ಟಿರಿ
ಧರ್ಮಾಚರಣೆಗೆ ನಿಮ್ಮನೇ ಸಮರ್ಪಿಸಿ
'ಏನು ಬಂದಿರಿ ಹದುಳವಿದ್ದಿರೆ'!
ಎಂಬ ಮೃದುನುಡಿಯಾಡಿ
ಕಾಯಾ ವಾಚಾ ಮನಸಾ
ಶಿವನ ಧ್ಯಾನದಿ ಮಿಂದು
ಅವಿರತ ಶಿವಸದ್ಧರ್ಮವನವಧರಿಸಿ
ಅರ್ಣವಂಬೋಲ್ ಅತಿ ಗಂಭೀರ ಚಿತ್ತದಿ
ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನಾ
ಎಂಬುಕ್ತಿಯಿಂ ಕಾರ್ಯ ಸಾಧನೆಗೆ
ತಮ್ಮನೇ (ಅರ್ಪಿಸಿದ) ಕರುಣಾಸಿಂಧು



ಸರ್ವಧರ್ಮಗಳ ಸಾರಸರ್ವಸ್ವಗಳ
ಸೇವೆಗೈದು
ಸಮಾಜೋದ್ಧಾರಕರಾಗಿ
ಅಪರಿಮಿತತೆಯೊಳು
ಸಮನ್ವಯತೆಯ ಸಾಧಿಸಿ
ಅನುಭಾವದ ಮೆಟ್ಟಿಲೇರಿದ ಅಮೃತಬಿಂದು
ನಡೆಯು ಗಂಭೀರ ನುಡಿಯು ಸುಮಧುರ
ನಡೆನುಡಿಗಳೊಂದಾಗಿ ಜೀವ ಸವೆಸಿದಿರಿ
ಜೀವನದ ಕ್ಷಣಕ್ಷಣವೂ
ಸಾಧನೆಯ ಹಂತವೇರಿ
ಅನುಭಾವಿಗಳೆಂದೆನಿಸಿ
ನಿತ್ಯ ನಿರಂಜನ ನಿರಾಮಯವಾಗಿ
ಸಾರ್ಥಕ ಬದುಕ ಬದುಕಿದಿರಿ
ಬಯಲೊಳಗೆ ಬಯಲಾಗಿ
ಕಪಿಲೆಯಾ ತೀರದಿ
ಸತ್ಯಸ್ಯಸತ್ಯವಾಗಿ
ಸರ್ಪಗಾವಲಿನಂತೆ ನೆಲೆಸಿರುವಿರಿ
ನಿಮ್ಮೊಳಗಿನ ನಿರ್ಮಲಚಿತ್ತ, ಸ್ಮಿತವದನ
ಮೃದುಮಧುರಭಾವ, ಅಪಾರ ತೇಜಸ್ಸು
ಸಾತ್ವಿಕ ಕಠೋರತೆ, ಕಾರುಣ್ಯ
ಎಲ್ಲದರ ಸಮ್ಮಿಲನದೊಳು
ಅಶರೀರಿಯಾಗಿ, ಶಿವದೀಪವಾಗಿ
ಪರಬ್ರಹ್ಮನೊಳು ನೆಲಸಿ ಪರಂಜ್ಯೋತಿಯಾಗಿ
ಕಾಯಕ ತಪಸ್ವಿಗಳ ಸನಿಹವೇ
ಸತ್ಯ ಶಿವ ಸುಂದರವಾಗಿ
ಕಾಯಕ ಯೋಗಿಯಾಗಿ
ಮೌನದಲಿ ಲೀನವಾಗಿರುವಿರಿ
ಕಡಲಿನ ಇದಿರು ಹನಿಯ ಪ್ರದರ್ಶನ ಏನಿದೆ!!!?
ಆದರೂ......
ತಮ್ಮ ನಾಮವ

ಅಂಕಿತವಾಗಿ, ಕಾವ್ಯನಾಮವಾಗಿರಿಸಿ.... ನಾ!!
ನಿರಂತರ ಸ್ಮರಿಸುತ ಶಿವಪ್ರಭುವೇ
ಅಂತರಾಳದಿಂ ನಿಮಗೆ ನಾ ನಮಿಸುವೆ
ನೂರ್ಕಾಲ ನಿಮ್ಮ ನಾಮವ ಬೆಳಗುವೆ
ತಂಪೆಲರ ತಾಣ
ಕಪಿಲೆಯಾ ತೀರದಿ
ಮತ್ತೆ ಅವತರಿಸಿ ಬಾ ಶಿವಪ್ರಭುವೇ
ಇದೋ ನಿಮ್ಮಡಿಗೆ ಕಿರಿಯಳ ಅನಂತ ಪ್ರಣಾಮ

□

ಅಂಗದೊಳಗೆ ಅಂಗವಾಗಿ ಅಂಗವ ಲಿಂಗೈಕ್ಯವ ಮಾಡಿದೆ.
ಮನದೊಳಗೆ ಮನವಾಗಿ ಮನವ ಲಿಂಗೈಕ್ಯವ ಮಾಡಿದೆ.
ಭಾವದೊಳಗೆ ಭಾವವಾಗಿ ಭಾವವ ಲಿಂಗೈಕ್ಯವ ಮಾಡಿದೆ.
ಅಱಿವಿನೊಳಗೆ ಅಱಿವಾಗಿ ಅಱಿವ ಲಿಂಗೈಕ್ಯವ ಮಾಡಿದೆ.
ಜ್ಞಾನದೊಳಗೆ ಜ್ಞಾನವಾಗಿ ಜ್ಞಾನವ ಲಿಂಗೈಕ್ಯವ ಮಾಡಿದೆ.
ಕ್ರೀಗಳೆಲ್ಲವ ನಿಲಿಸಿ ನಿಃಕ್ರಿಯಾತೀತನಾಗಿ ನಿಃಪತಿಲಿಂಗೈಕ್ಯವ ಮಾಡಿದೆ.
ನಾನೆಂಬುದ ನಿಲಿಸಿ ನೀನೆಂಬುದ ಕೆಡಿಸಿ ಉಭಯವ ಲಿಂಗೈಕ್ಯವ ಮಾಡಿದೆ.
ಚನ್ನಮಲ್ಲಿಕಾರ್ಜುನಯ್ಯನೊಳಗೆ ನಾನಳಿದನಾಗಿ
ಲಿಂಗವೆಂಬ ಘನವು ಎನ್ನಲ್ಲಿ ಅಳಿಯಿತ್ತು ಕಾಣಾ ಸಂಗನಬಸವಣ್ಣಾ.
**- ಅಕ್ಕಮಹಾದೇವಿ**

# ಹೃದಯಗಳು ಒಂದಾಗಿ

**ಶ್ರೀ ಸೋಮಶೇಖರಸ್ವಾಮಿ**

ವರುಷ ಸಾವಿರಕೂ ಮಿಗಿಲಾದ ಇತಿಹಾಸದಲಿ
ಹೆಗ್ಗಳಿಕೆ ಪಡೆದಂತ ಶ್ರೀಮಠದ ಶಿವಪರದ
ಕಾರ್ಯಭಾರಗಳಲ್ಲಿ ಚೈತನ್ಯದಾ ಚಿಲುಮೆ
ಹೊಸದಿಗಂತದಿ ಶೈಕ್ಷಣಿಕ ರವಿಯ ಉದಯದಲಿ

ಕಲಿವ ಮಕ್ಕಳಿಗೆ ಜ್ಞಾನಾನ್ನಗಳ ನೆರವೀವ
ಶಿವರಾತ್ರಿ ರಾಜೇಂದ್ರ ಗುರುವರನ ನೆನಹಿಂಗೆ
ನೆನಹಾಗಿ ತನುಮನದ ದುಡಿಮೆಯಲಿ ಒಂದಾಗಿ
ಸುತ್ತೂರು ಶ್ರೀಮಠಕ್ಕೆ ಅರ್ಪಿತವೇ ಆದವರು

ಕ್ಯಾತನಹಳ್ಳಿಯ ಶ್ರೀಮಠಕೆ ಅಧಿಕಾರಿ
ಎಂದೆನಿಸಿಕೊಂಡರೂ ನೂರಕ್ಕೆ ತೊಂಬತ್ತು
ಸುತ್ತೂರು ಶ್ರೀಮಠದ ಸೇವೆಗೆಣಿಯಾದವರು
ರಾಜೇಂದ್ರ ಗುರುವರರ ನೆರಳಾಗಿ ಇದ್ದವರು

ಕೆಟ್ಟದೊಳ್ಳೆಯದೆನದ ರಾಜೇಂದ್ರ ಗುರುವರಗೆ
ಮಣಿದು ಫಲಬಯಸುವಾಕಪಟಿಗಳ ಸರಿಸುತ್ತ
ಆರ್ಥಿಕ ಶೈಕ್ಷಣಿಕ ಕ್ಷೇತ್ರಗಳ ಸಾಧನೆಗೆ
ಹೆಗಲಿಗೆ ಹೆಗಲಾಗಿ ಹೃದಯಗಳು ಒಂದಾಗಿ

ಪ್ರತಿದಿನವು ದರ್ಶನಕೆ ಬರುವ ಸಾವಿರ ಜನಕೆ
ವರವೀವ ರಾಜೇಂದ್ರ ಗುರುವರನ ತುಡಿತಕ್ಕೆ
ವಿಶ್ರಾಂತಿ ಸಮಯವನು ನಿಗದಿಪಡಿಸುತ ನಿತ್ಯ
ಗುರುಗಳಾರೋಗ್ಯಭಾಗ್ಯವನು ಕಾಯ್ದಂತವರು.

ಲಕ್ಷಗಟ್ಟಲೆ ಜನರ ಸೂರಾದ ಸುತ್ತೂರು
ಮಂತ್ರಋಷಿಯನು ಕಂಡು ರಾಜೇಂದ್ರರನು ಕಂಡು
ಶಿವರಾತ್ರಿ ದೇಶಿಕೇಂದ್ರರ ಸಾಲಿನಲು ಇದ್ದು
ತ್ರೈಜಗದ್ಗುರುವರರ ದರ್ಶನವ ಪಡೆದವರು

ಕ್ಯಾತನಹಳ್ಳಿಯ ಶ್ರೀಮಠಕ್ಕೆ ಗುರುವಾಗಿ
ಶಿವಪ್ರಭುಸ್ವಾಮಿಗಳು ಎಂಬ ಅಭಿದಾನದಲಿ
ಸುತ್ತೂರು ಶ್ರೀಮಠದ ಭವ್ಯ ಇತಿಹಾಸದಲಿ
ಮಿನುಗುತಾರೆಯೇ ಆದ ಗುರುವರಗೆ ಶರಣಾರ್ಥಿ

□

ಕಂಡ ಭಕ್ತರಿಗೆ ಕೈಮುಗಿವಾತನೆ ಭಕ್ತ
ಮೃದುವಚನವೆ ಸಕಲ ಜಪಂಗಳಯ್ಯಾ,
ಮೃದುವಚನವೆ ಸಕಲ ತಪಂಗಳಯ್ಯಾ,
ಸದುವಿನಯವೆ ಸದಾಶಿವನ ಒಲುಮೆಯಯ್ಯಾ,
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ.

ಇತ್ತ ಬಾರಯ್ಯಾ ಇತ್ತ ಬಾರಯ್ಯಾ ಎಂದು
ಭಕ್ತರೆಲ್ಲರೂ ಕೂರ್ತು ಹತ್ತೆ ಕರೆವುತ್ತಿರಲು
ಮತ್ತೆ ಕೆಲಕ್ಕೆ ಹೋಗಿ ಶರಣೆಂದು ಹಸ್ತ ಬಾಯನೆ ಮುಚ್ಚಿ
ಕಿಱಿದಾಗಿ ಭೃತ್ಯಾಚಾರವ ನುಡಿದು
ವಿನಯ ತದ್ಧ್ಯಾನವುಳ್ಳಡೆ ಎತ್ತಿಕೊಂಬನಯ್ಯಾ
ಕೂಡಲಸಂಗಮದೇವ ಪ್ರಮಥರ ಮುಂದೆ.

**- ಬಸವಣ್ಣ**

## ಲೇಖಕರ ವಿಳಾಸ

**ಹೆಚ್. ಗಂಗಾಧರನ್**
1089, 'ಜೈ ಅರವಿಂದ'
ವಿಷ್ಣುವರ್ಧನ ರಸ್ತೆ
ಚಾಮರಾಜಪುರಂ
ಮೈಸೂರು 570 004

**ಡಾ. ಎಸ್.ಎಂ. ವೃಷಭೇಂದ್ರಸ್ವಾಮಿ**
'ಶಿವಪ್ರಸಾದ'
8ನೆಯ ಕ್ರಾಸ್
ಕಲ್ಯಾಣನಗರ
ಧಾರವಾಡ 580 007

**ಡಾ. ಚನ್ನಬಸಪ್ಪ**
116, 3ನೆಯ ಮುಖ್ಯರಸ್ತೆ
ದಯಾಮಾರ್ಗ
ಸಿದ್ಧಾರ್ಥನಗರ
ಮೈಸೂರು 570 001

**ಪ್ರೊ. ಎ.ಎಸ್. ಜಯರಾಂ**
873, 16ನೇ ಕ್ರಾಸ್
ರಾಮಾನುಜ ರಸ್ತೆ
ಮೈಸೂರು 570 004

**ಕೆ.ಎಂ. ನಾಗಣ್ಣಾಚಾರ್**
ಆಡಳಿತಾಧಿಕಾರಿಗಳು (ಅಭಿವೃದ್ಧಿ)
ಜೆಎಸ್‌ಎಸ್ ಮಹಾವಿದ್ಯಾಪೀಠ
ಮೈಸೂರು

**ಪ್ರೊ. ಮ.ಗಂ. ರೇಣುಕ ಪ್ರಸನ್ನ**
ಆದಿತ್ಯ ಎಲಿಗೆನ್ಸ್ (ಅಪಾರ್ಟ್‌ಮೆಂಟ್ಸ್)
1ನೇ ಕ್ರಾಸ್
ಈಜುಕೊಳದ ರಸ್ತೆ
ಮಹಾಲಕ್ಷ್ಮಿ ಲೇಔಟ್
ಬೆಂಗಳೂರು 560 086

**ಜೀಮಾರಹಳ್ಳಿ ಗುರುಸಿದ್ದಪ್ಪ**
ನಂ. 140-B, 4ನೆಯ ಕ್ರಾಸ್
ವಿದ್ಯಾರಣ್ಯಪುರಂ
ಮೈಸೂರು 570 008

**ರಾಜೇಂದ್ರ ಶಿಶು**
ನಂ. 242, ಉತ್ತರಾದಿ ಮಠದ ರಸ್ತೆ
ಖಿಲ್ಲೆ ಮೊಹಲ್ಲ, ಅಗ್ರಹಾರ
ಮೈಸೂರು 570 004

**ನಗರ್ಲೆ ಶಿವಕುಮಾರ**
ನಗರ್ಲೆ
ನಂಜನಗೂಡು ತಾಲ್ಲೂಕು
ಮೈಸೂರು ಜಿಲ್ಲೆ

**ಪಿ. ವೀರಭದ್ರಪ್ಪ**
'ಕಲ್ಪತರು', ದುಗ್ಗಹಟ್ಟಿ
ಯಳಂದೂರು ತಾಲ್ಲೂಕು
ಚಾಮರಾಜನಗರ ಜಿಲ್ಲೆ

**ಬಿ.ಕೆ. ಮಲ್ಲಾರಾಧ್ಯ**
ನಂ. 1213, 7ನೇ ಕ್ರಾಸ್, 3ನೇ ಮೈನ್
ವಿವೇಕಾನಂದ ನಗರ
ಮೈಸೂರು 570 023

**ಎಸ್.ಎಂ. ಜುಂಬುಕೇಶ್ವರ**
17/A, 5ನೇ ಮೇನ್, ಮಾರುತಿ ದೇವಸ್ಥಾನದ ರಸ್ತೆ
ಸರಸ್ವತಿಪುರಂ, ಮೈಸೂರು

**ಕುಮಾರನಿಜಗುಣ**
ಶ್ರೀ ಶಂಭುಲಿಂಗನಕ್ಷೇತ್ರ, ಚಿಲಕವಾಡಿ
ಕೊಳ್ಳೇಗಾಲ ತಾಲ್ಲೂಕು

**ಪ್ರೊ. ಎಸ್.ಪಿ. ಉಮಾದೇವಿ**
ಜೆಎಸ್‌ಎಸ್ ಮಹಿಳಾ ಕಾಲೇಜು (ಸ್ವಾಯತ್ತ)
ಸರಸ್ವತಿಪುರಂ, ಮೈಸೂರು 570 009

**ಶ್ರೀ ಸೋಮಶೇಖರಸ್ವಾಮಿ**
ಪ್ರಕಟಣ ವಿಭಾಗ, ಜೆಎಸ್‌ಎಸ್ ಮಹಾವಿದ್ಯಾಪೀಠ
ಮೈಸೂರು 570 004


**ಫಾರಂ (ರೂಲ್ 8ರಂತೆ)**

**'ಪ್ರಸಾದ' ದ್ವೈಮಾಸಿಕದ ಮಾಲಿಕತ್ವ ಮತ್ತು ಇತರ ವಿವರಗಳು**

| | | | |
|---|---|---|---|
| 1. | ಪತ್ರಿಕೆಯ ಹೆಸರು<br>ಮತ್ತು ವಿಳಾಸ | : | ಪ್ರಸಾದ<br>ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು |
| 2. | ದ್ವೈಮಾಸಿಕವೇ? ಮಾಸಿಕವೇ?<br>ವಾರಪತ್ರಿಕೆಯೇ? | : | ದ್ವೈಮಾಸಿಕ |
| 3. | ಪ್ರಕಾಶಕರ ಹೆಸರು ಮತ್ತು<br>ವಿಳಾಸ | : | ಬಿ.ಎನ್. ಬೆಟ್‌ಕೆರೂರ್<br>ಕಾರ್ಯನಿರ್ವಾಹಕ ಕಾರ್ಯದರ್ಶಿ<br>ಜೆಎಸ್‌ಎಸ್ ಮಹಾವಿದ್ಯಾಪೀಠ<br>ಮೈಸೂರು 570 004 |
| 4. | ಸಂಪಾದಕರ ಹೆಸರು<br>ಭಾರತೀಯರೆ, ಹೊರದೇಶದವರೇ?<br>ಮತ್ತು ವಿಳಾಸ | :<br>:<br>: | ಮಲೆಯೂರು ಗುರುಸ್ವಾಮಿ<br>ಭಾರತೀಯರು<br>ಜೆಎಸ್‌ಎಸ್ ಪ್ರಕಟಣ ವಿಭಾಗ<br>ಜೆಎಸ್‌ಎಸ್ ಮಹಾವಿದ್ಯಾಪೀಠ<br>ಮೈಸೂರು 570 004 |
| 5. | ಮುದ್ರಕರ ಹೆಸರು ಮತ್ತು<br>ವಿಳಾಸ | : | ಆರ್.ಎನ್. ವಾಸುದೇವಮೂರ್ತಿ<br>ಶ್ರೀ ಸದ್ಗುರು ಪ್ರಿಂಟರ್ಸ್<br>ಮೈಸೂರು 570 004 |
| 6. | ಭಾರತೀಯರೆ, ಹೊರದೇಶದವರೇ? | : | ಭಾರತೀಯರು |
| 7. | ಪತ್ರಿಕೆಯ ಮಾಲೀಕತ್ವ ಮತ್ತು ವಿಳಾಸ<br>ಒಬ್ಬರಿಗಿಂತ ಹೆಚ್ಚು ಜನ ಅದರ<br>ಒಡೆತನದಲ್ಲಿದ್ದರೆ ಅವರ ಹೆಸರು,<br>ವಿಳಾಸ ಮತ್ತು ವಿವರಗಳು | : | ಜೆಎಸ್‌ಎಸ್ ಮಹಾವಿದ್ಯಾಪೀಠ<br>ಮೈಸೂರು 570 004 |

ಮೇಲಿನ ವಿವರಗಳು ಸತ್ಯ ಮತ್ತು ನಿಜವಾದ ವಿವರಗಳೆಂದು ಹೇಳುತ್ತೇನೆ.

ಬಿ.ಎನ್. ಬೆಟ್‌ಕೆರೂರ್
ಪ್ರಕಾಶಕ, 'ಪ್ರಸಾದ' ದ್ವೈಮಾಸಿಕ
ಜೆಎಸ್‌ಎಸ್ ಮಹಾವಿದ್ಯಾಪೀಠ
ಮೈಸೂರು